ತೇರದಾಳ ಒಂದು ಚಾರಿತ್ರಿಕ ಅಧ್ಯಯನ

(ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು

ಶ್ರೀ ರಮೇಶ ಗುಂಡಪ್ಪ ಕುಂಬಾರ

ಶ್ರೀ ವಿನಾಯಕ ವಿದ್ಯಾವರ್ಧಕ ಸಂಘ (ರಿ)

ಶ್ರೀ ಎಮ್. ಬ್ಹಿ. ಪಿ. ಪ್ರೈಮರಿ ತರಬೇತಿ ಸಂಸ್ಥೆ, ತೇರದಾಳ.

ಮಾರ್ಗದರ್ಶಕರು

ಡಾ. ಸುರೇಶ ಅರಬಾರ

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ

ಎಸ್.ಬಿ. ಕಲಾ ಹಾಗೂ ಕೆ.ಸಿ.ಪಿ. ವಿಜ್ಞಾನ

ಮಹಾವಿದ್ಯಾಲಯ, ವಿಜಾಪುರ.

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ, ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೧೨

949

[illegible]

ತೇರದಾಳ ಒಂದು ಚಾರಿತ್ರಿಕ ಅಧ್ಯಯನ

(ಚರತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು

ಶ್ರೀ ರಮೇಶ ದುಂಡಪ್ಪ ಕುಂಬಾರ

ಶ್ರೀ ವಿನಾಯಕ ವಿದ್ಯಾವರ್ಧಕ ಸಂಘ (ರಿ)

ಶ್ರೀ ಎಮ್. ವ್ಹಿ. ಪಿ. ಕೈಗಾರಿಕಾ ತರಬೇತಿ ಸಂಸ್ಥೆ, ತೇರದಾಳ.

ಮಾರ್ಗದರ್ಶಕರು

ಡಾ. ಸುರೇಶ ಬಿರಾದಾರ

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ

ಎಸ್.ಬಿ. ಕಲಾ ಹಾಗೂ ಕೆ.ಸಿ.ಪಿ. ವಿಜ್ಞಾನ

ಮಹಾವಿದ್ಯಾಲಯ, ವಿಜಾಪೂರ.

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,

ಹಾರೂಗೇರಿ. ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨

ಪ್ರಮಾಣ ಪತ್ರ

'ತೇರದಾಳ ಒಂದು ಚಾರಿತ್ರಿಕ ಅಧ್ಯಯನ' ಎಂಬ ಶೀರ್ಷಿಕೆಯ ನಿಬಂಧವನ್ನು **ಡಾ. ಸುರೇಶ ಬಿರಾದಾರ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ನಿಬಂಧವನ್ನು ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೦೮-೦೬-೨೦೧೨

ಶ್ರೀ ರಮೇಶ ದುಂಡಪ್ಪ ಕುಂಬಾರ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

ದೃಢೀಕರಣ ಪತ್ರ

ಶ್ರೀ ರಮೇಶ ಮಲಿಕಪ್ಪ ಕುಂಬಾರ ಇವರು **'ತೇರದಾಳ ಒಂದು ಚಾರಿತ್ರಿಕ ಅಧ್ಯಯನ'** ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ **ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ, ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೦೮-೦೬-೨೦೧೨

ಡಾ. ಸುರೇಶ ಬಿರಾದಾರ
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಮುಖ್ಯಸ್ಥರು,
ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ
ಎಸ್.ಬಿ. ಕಲಾ ಹಾಗೂ ಕೆ.ಸಿ.ಪಿ ವಿಜ್ಞಾನ
ಮಹಾವಿದ್ಯಾಲಯ, ವಿಜಾಪೂರ.

[illegible]

[illegible]

[illegible]

[illegible]

• ಅರಿಕೆ •

ಶ್ರೀ ವಿನಾಯಕ ವಿದ್ಯಾವರ್ಧಕ ಸಂಘ (ರಿ), ತೇರದಾಳ. ಪ್ರಥಮ ದರ್ಜೆಯ ಸಹಾಯಕನಾಗಿ ಸೇವೆ ಸಲ್ಲಿಸುತ್ತಿರುವ ನಾನು ನನ್ನ ವೈಯಕ್ತಿಕ ಕಾರಣದಿಂದ ಸಂಶೋಧನ ಕ್ಷೇತ್ರದಿಂದ ಬಹಳ ಹಿಂದುಳಿದಿದ್ದೆ. ನನ್ನ ಪ್ರೀತಿಯ ಮಾವನವರಾದ ಶ್ರೀ ನಾಮದೇವ ಕುಂಬಾರ ಅವರ ಪ್ರೋತ್ಸಾಹವನ್ನು ಪಡೆದು ಎಂ.ಫಿಲ್ ಪದವಿಗಾಗಿ ಸಂಶೋಧನಾ ವಿದ್ಯಾರ್ಥಿಯಾಗಲು ಬಯಸಿದಾಗ ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ ನಿರ್ದೇಶಕರಾದ ಡಾ॥ ವ್ಹಿ. ಎಸ್. ಮಾಳಿಯವರ ನೆರವಿನಿಂದ ಹಂಪಿ ಕನ್ನಡ ವಿಶ್ವ ವಿದ್ಯಾಲಯದ ವಿದ್ಯಾರ್ಥಿಯಾಗಿ ಸೇರಿದಾಗ ಬಹಳ ಸಂತೋಷವಾಯಿತು.

ನನ್ನ ಸಂಶೋಧನೆಗೆ ಪ್ರೇರಕ ಶಕ್ತಿ ನೀಡಿದ ವಿನಾಯಕ ವಿದ್ಯಾವರ್ಧಕ ಸಂಘ (ರಿ), ತೇರದಾಳ. ಅಧ್ಯಕ್ಷರು ಶ್ರೀ ಶ್ರೀ ಶಂಕರ ಮಹಾಸ್ವಾಮಿಗಳು, ಶ್ರೀ ಬಿ. ಎಸ್. ಹಂಜಿ ಚೇರಮನ್ನರು, ಶ್ರೀ ಜಿ. ಕೆ. ಪಟ್ಟಣಶೆಟ್ಟಿ, ಶ್ರೀ ಎನ್. ಬಿ. ತೇಲಿ, ಶ್ರೀ ಆರ್. ಎನ್. ಕಲೇಗಾರ, ಶ್ರೀ ಆರ್. ಎನ್. ಬಾಗೇವಾಡಿ, ಶ್ರೀ ಜಿ. ವ್ಹಿ. ತೇಲಿ, ಶ್ರೀ ಎಮ್. ಸಿ. ತೆಳಗಿನಮನಿ, ಶ್ರೀ ಎಸ್. ಎ. ಸೊಟ್ಟಿ, ಶ್ರೀ ಡಿ. ಆಯ್. ಅವರಾದಿ ಆಡಳಿತ ಮಂಡಳಿಯ ಸದಸ್ಯರು ಇವರ ಸಹಾಯಕ್ಕೆ ನಾನು ಚಿರಋಣಿಯಾಗಿದ್ದೇನೆ. ಸಂಶೋಧನಾ ಕಾರ್ಯದಲ್ಲಿ ಕಾಲಕಾಲಕ್ಕೆ ಸಲಹೆ ಸೂಚನೆಗಳನ್ನು ನೀಡಿದ ಆತ್ಮೀಯರಾದ ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಉಪನ್ಯಾಸಕರಾದ ಶ್ರೀ ರಮೇಶ ನಾಯ್ಕ, ಉಪನ್ಯಾಸಕರಾದ ಶ್ರೀ ಎಸ್. ಎಲ್. ಜಾದವ, ಶ್ರೀ ಬಿ. ಬಿ. ಮಂಗೋಡ, ಪ್ರಾಚಾರ್ಯರು ಶ್ರೀ ಎಲ್. ವ್ಹಿ. ಹಿಡಕಲ್, ಶಿಕ್ಷಕರಾದ ಶ್ರೀ ಎಮ್. ಬಿ. ಇಂಡಿ, ಶ್ರೀ ವ್ಹಿ. ಎಸ್. ಹನಗಂಡಿ, ಶ್ರೀ ಆರ್. ಬಿ. ಕಾಟಾಪೂರಮಠ, ಹಿರಿಯರಾದ ಶ್ರೀ ಎಸ್. ಡಿ. ಚವಜ, ಶ್ರೀ ಬಿ. ಪಿ. ನಾಶಿ, ಶೀ ಎಸ್. ಎಮ್. ಹಟ್ಟಿ, ಶ್ರೀ ಪಿ. ಎಮ್. ಪಠಾಣಿ ಗೆಳೆಯರಾದ ಶ್ರೀ ಎಮ್. ಎಚ್. ಗೌಡನವರ, ಶ್ರೀ ಕೆ. ಎಸ್. ರಂಗಸ್ವಾಮಿ, ಶ್ರೀ ಎ. ಜಿ. ಯಾದವಾಡ, ಶ್ರೀ ಆರ್. ಬಿ. ಜಯಗೊಂಡ, ಶ್ರೀ ಬಿ. ಎ. ಆಳಗೊಂಡ, ಶ್ರೀ ಪಿ. ಎಮ್. ತೆಳಗಿನಮನಿ ಸಂಶೋಧನಾ ಪ್ರಬಂಧ ರಚನೆಯಲ್ಲಿ ಅವಶ್ಯಕವಾದ ಗ್ರಂಥಗಳನ್ನು ಒದಗಿಸಿದ ಹಾಗೂ ಗ್ರಂಥಪಾಲಕರಾದ ಶ್ರೀ ಸಾಲಿಮಠ, ಶ್ರೀ ಎಸ್. ಟಿ. ಘಟ್ಟನಟ್ಟಿ ಇವರಿಗೂ ನನ್ನ ನಮನಗಳು.

ಗ್ರಂಥ ರಚನೆಯಲ್ಲಿ ಆಶೀರ್ವದಿಸಿದ ನನ್ನ ತಾಯಿ ಬಾಳವ್ವಾ ಎಲ್ಲ ರೀತಿಯಿಂದಲೂ ಸಹಕಾರವನ್ನು ನೀಡಿದ ನನ್ನ ಪ್ರೀತಿಯ ಸಹೋದರಿಯರಾದ ಶಿವಗಂಗಾ-ರಾಯಪ್ಪಾ, ಕಲಾವತಿ-ನಾಮದೇವ, ಅಣ್ಣಪೂರ್ಣಾ-ಶಿವಪುತ್ರ ಹಾಗೂ ನನ್ನ ಧರ್ಮ ಪತ್ನಿ ರೇಖಾ ಹಾಗೂ ಕುಟುಂಬ ವರ್ಗದವರಿಗೆ ನನ್ನ ವಂದನೆಗಳು. ನನ್ನ ಈ ಸಂಶೋಧನೆಗೆ ಹೃದಯ ತುಂಬಿ ಮಾರ್ಗದರ್ಶವನ್ನು ನೀಡಿದ ಡಾ॥ ಸುರೇಶ ಬಿರಾದಾರ ಅವರಿಗೆ ನನ್ನ ಅನಂತ ವಂದನೆಗಳು.

ವೃಷಬೇಂದ್ರ ಕಾಲೇಜಿನ ಸಿಬ್ಬಂದಿ ವರ್ಗದವರಿಗೆ ಹಾಗೂ ಸಂಶೋಧನಾ ಕೇಂದ್ರದ ರೂವಾರಿ ಶ್ರೀ ಬಿ. ಆರ್. ದರೂರ ಅವರನ್ನು ಸದಾಕಾಲವು ಸ್ಮರಿಸುವೆನು. ಅದರಂತೆ ಪ್ರಬಂಧವನ್ನು ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿದ ನನ್ನ ಸ್ನೇಹಿತರಾದ ಮುರಗೇಶ ಕೌಲಾಪೂರ ಅವರಿಗೆ ವಂದನೆಗಳು.

ಶ್ರೀ ರಮೇಶ ದುಂಡಪ್ಪ ಕುಂಬಾರ

ದಿ : ೧೦-೦೬-೨೦೧೧ **ಶ್ರೀ ವಿನಾಯಕ ವಿದ್ಯಾವರ್ಧಕ ಸಂಸ್ಥೆ (ರಿ).**

ತೇರದಾಳ.

• ಪರಿವಿಡಿ •


Terdal
Nilakanteshwar temple
Imagery ©2012 Cnes/Spot Image, DigitalGlobe,
start
Wikimapia - Let's desc...
Adobe Photoshop
Tourism in India.docx...

ತೇರದಾಳದ ನೀಲನಕ್ಷೆ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ

ಆಧಾರಗಳಿಲ್ಲದೇ ಇತಿಹಾಸವಿಲ್ಲ. ತೇರದಾಳ ವಿಫುಲವಾದ ಭೌಗೋಳಿಕ ಸಂಪತ್ತನ್ನು, ಐತಿಹಾಸಿಕ ಪರಂಪರೆಯನ್ನೂ ಉಳ್ಳ ತೇರದಾಳ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ಇದು ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತನ್ನದೇ ಆದ ವೈಶಿಷ್ಟ್ಯವನ್ನು ಬೆಳೆಸಿಕೊಂಡಿದೆ. ಪ್ರಾಚೀನ ಕಾಲದಿಂದಲೂ ಅದು ಕಾಲ ಚಕ್ರದಲ್ಲಿ ಒದಗಿ ಬಂದ ಏಳು–ಬೀಳುಗಳನ್ನು ಲೆಕ್ಕಿಸದೆ ಸ್ವಂತಿಕೆಯನ್ನು ಬೆಳೆಸಿಕೊಂಡು ಬಂದಿದೆ.

ಇತಿಹಾಸ ಸಂಶೋಧನೆ ಇತ್ತೀಚಿನ ಹೊಸ–ಹೊಸ ವಿಷಯಗಳನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಲಿದೆ. ಇಡೀ ದೇಶದ ಚರಿತ್ರೆ ಹೆಚ್ಚು ನೈಜವಾಗಿರಬೇಕಾದರೆ ಅದು ತಲಸ್ಪರ್ಶಿಯಾಗಬೇಕು. ಅಂದರೇ ಅದು ಹಳ್ಳಿ–ಹಳ್ಳಿ ಸಮುದಾಯಗಳ ಚರಿತ್ರೆಯಿಂದ ಮೇಲೆರುತ್ತಾ ಹೋಗಬೇಕು. ಇದು ಒಂದು ರೀತಿಯಲ್ಲಿ ಚರಿತ್ರೆಯ ನೈಜತೆಯನ್ನು ಅರಿಯುವ ಪ್ರಯತ್ನವೆಂದರೂ ಅತಿಶಯೋಕ್ತಿಯಾಗಲಾರದು. ಇಂತಹ ಒಂದು ಗ್ರಾಮ ಮಟ್ಟದಲ್ಲಿ ನಿಂತು ಚರಿತ್ರೆಯನ್ನು ನಿರೂಪಿಸುವ ಸಾಹಸ ಪ್ರಸ್ತುತ ಕರ್ನಾಟಕ ರಾಜ್ಯದ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ **"ಐತಿಹಾಸಿಕ ತೇರದಾಳ ಗ್ರಾಮದ ಚರಿತ್ರೆಯ ಅಧ್ಯಯನ"**ವೇ ಇದಾಗಿದೆ.

ಇತಿಹಾಸವೆಂದರೆ **"ಗತಕಾಲದಲ್ಲಿ ನಡೆದ ಘಟನೆಗಳ ದಾಖಲೆ ಆಧಾರಗಳೇ ಇತಿಹಾಸದ ರಚನೆಗೆ ಅಡಿಗಲ್ಲು ಆಧಾರ ವಿಲ್ಲದೇ ಇತಿಹಾಸವಿಲ್ಲ"**. ಒಂದು ಸಂದರ್ಭದಲ್ಲಿ ಆಧಾರವಿಲ್ಲದೇ ಇತಿಹಾಸವನ್ನು ರಚನೆ ಮಾಡಿದರೆ ಅದು ತಳಪಾಯವಿಲ್ಲದ ಕಟ್ಟಡದಂತೆ ಮನೆಯೇ ಕುಸಿದು ಬೀಳುತ್ತದೆ. ಯಾವಾಗಲೂ ಸತ್ಯಾಂಶಗಳನ್ನು ಪ್ರಕಟಿಸುವುದೇ ಚರಿತ್ರೆಕಾರರ ಪ್ರಮುಖ ಗುರಿ. ಅದೇ ರೀತಿಯಾಗಿ ತೇರದಾಳ ಚಾರಿತ್ರಿಕ ಹಿನ್ನೆಲೆಗೆ (ಐತಿಹಾಸಿಕ ಹಿನ್ನೆಲೆಗೆ) ತನ್ನದೇ ಆದ ಮಹತ್ವವಿರುತ್ತದೆ.


ಕರ್ನಾಟಕವನ್ನು ಆಳಿದ ಪ್ರಮುಖ ರಾಜ ಮನೆತನಗಳು ತಮ್ಮ ವಿಶಾಲ ಸಾಮ್ರಾಜ್ಯದಲ್ಲಿ ಆಡಳಿತ ಅನುಕೂಲತೆಗಾಗಿ ವಿವಿಧ ಜನಾಂಗಗಳ ಅವರ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಪ್ರಾಚೀನತೆ, ವೈಶಾಲ್ಯ ಮತ್ತು ಭಿನ್ನ–ಭಿನ್ನ ಭಾಷೆಗಳ ಪರಿಣಾಮಗಳಿಂದಾಗಿ ಆಧಾರಗಳ ಶೋಧನೆ ಮತ್ತು ಇತಿಹಾಸ ರಚನಾ ಕಾರ್ಯದಲ್ಲಿ ಕ್ಲಿಷ್ಟಕರವಾದ ಸಮಸ್ಯೆಗಳು ಕಂಡು ಬರುತ್ತವೆ. ಅಂತೆಯೇ ನಾಡಿನ

ಇತಿಹಾಸವನ್ನು ಅಧ್ಯಯನದ ದೃಷ್ಟಿಯಿಂದ ಆ ಪ್ರದೇಶಕ್ಕೆ ಅನುಗುಣವಾಗಿ ಐತಿಹಾಸಿಕ ಹಿನ್ನೆಲೆ, ಕಾಲ, ರಾಜಮನೆತನ, ಸಾಂಸ್ಕೃತಿಕವಾಗಿ ಬೆಳೆದು ಬಂದ ಹಿನ್ನೆಲೆಯಲ್ಲಿ ವಿಂಗಡಿಸಲಾಗಿದೆ.

ಪ್ರಾಚೀನ ಕರ್ನಾಟಕದ ಇತಿಹಾಸ ಮತ್ತು ಇತಿಹಾಸಕ್ಕೆ ಸಂಬಂಧಪಟ್ಟಂತೆ ಪ್ರಕಟಗೊಂಡ ಕೃತಿಗಳು ತುಂಬಾ ವಿರಳ. ಅದರಲ್ಲಿ ಐತಿಹಾಸಿಕ ಮಹತ್ವವನ್ನು ಪಡೆದ ಹಳ್ಳಿ (ಗ್ರಾಮ) ಪಟ್ಟಣಗಳಿಗೆ ಸಂಬಂಧಿಸಿದಂತೆ ಪ್ರಕಟಗೊಂಡ ಕೃತಿಗಳು ಮಾತ್ರ ತುಂಬಾ ವಿರಳವೆಂದು ಹೇಳಬೇಕಾಗುತ್ತದೆ. ಅವುಗಳಲ್ಲಿ ಐತಿಹಾಸಿಕ ತೇರದಾಳಕ್ಕೆ ಸಂಬಂಧಪಟ್ಟಂತೆ ಶ್ರೀ ಎ. ಕೆ. ಶಾಸ್ತ್ರಿ ಅವರಿಂದ ರಚಿತವಾದ **"ಎ ಹಿಸ್ಟರಿ ಆಫ್ ಶೃಂಗೇರಿ"** ಪ್ರೊ. ಎಸ್. ಶೆಟ್ಟರ ಅವರು ಬರೆದ **"ಶ್ರವಣ ಬೆಳಗೊಳ"** ಶ್ರೀ ಎಂ. ಎಂ. ಕಲಬುರ್ಗಿ ಅವರು ಬರೆದ **ಮಾರ್ಗಸಂಪುಟ** ಹಾಗೂ ಡಾ॥ ದೇವರಕೊಂಡಾ ರೆಡ್ಡಿ ಅವರು ರಚಿಸಿದ **ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ ೯ (ಬಾಗಲಕೋಟ ಜಿಲ್ಲೆ)** ಕನ್ನಡ ವಿಶ್ವ ವಿದ್ಯಾಲಯ ಹಂಪಿರವರು ರಚಿಸಿದ **ಚರಿತ್ರೆ ಸಂಪುಟ**ವನ್ನು ಪ್ರಕಟಿಸಿದ **"ಕನ್ನಡ ವಿಶ್ವ ವಿದ್ಯಾಲಯ ಹಂಪಿ"** ಹಲವಾರು ಕೃತಿಗಳನ್ನು ಬಿಟ್ಟರೆ ಹೆಚ್ಚಿನವು ಚಿಕ್ಕ-ಚಿಕ್ಕ ಪುಸ್ತಕಗಳು. ಬುದ್ಧಯ್ಯ ಸ್ವಾಮಿ ಪುರಾಣಿಕ ಅವರು ರಚಿಸಿದ ತೇರದಾಳದ **"ಶ್ರೀ ಅಲ್ಲಮ ಪ್ರಭು"** ಶ್ರೀ ಎಸ್. ಸಿ. ಸಲಬನ್ನವರವರು ರಚಿಸಿದ **"ಸೋನಮ್ಮ ಪಂಚಾಕ್ಷರಿ"**, ಪ್ರೊ. ದೊಡ್ಡಣ್ಣ ಭಜಂತ್ರಿ ರಚಿಸಿದ **"ತ್ರಿದಳ ಸೌರಭ"**, ನಿಯೋಜಿತ ತೇರದಾಳ ತಾಲೂಕಿನ ಸಮಗ್ರ ಮಾಹಿತಿ ಹಾಗೂ ಲೇಖನಗಳು ಮಾತ್ರ ಪ್ರಸ್ತುತ ತೇರದಾಳದ ಐತಿಹಾಸಿಕ ಅಧ್ಯಯನಕ್ಕೆ ಪ್ರಮುಖ ನಿಬಂಧವೆಂದು ಹೇಳಬಹುದು.

ಐತಿಹಾಸಿಕ ತೇರದಾಳ ಗ್ರಾಮವೂ ಕೂಂಡಿನಾಡು-೩೦೦೦ (ಇದು ಕೇಂದ್ರ ಸ್ಥಳ ಪಟ್ಟಣ ಕೂಂಡಿ ಇರಬಹುದೆಂದು ಇತಿಹಾಸಕಾರರು ಊಹಿಸಿದ್ದಾರೆ). ಇದು ನಾಡಿನ ಒಂದು ಪ್ರಮುಖ ವ್ಯಾಪಾರ ಕೇಂದ್ರ. ದಕ್ಷಿಣ ಮಹಾರಾಷ್ಟ್ರದಲ್ಲಿದ್ದ ಪಟವರ್ಧನ ಸಂಸ್ಥಾನಗಳ ಪೈಕಿ ಸಾಂಗ್ಲಿ ಸಂಸ್ಥಾನವು ಎಲ್ಲಕ್ಕಿಂತ ದೊಡ್ಡದಾಗಿತ್ತು. ಈ ಸಂಸ್ಥಾನದ ಅಧೀನದಲ್ಲಿ ತೇರದಾಳ ೧೭ ಹಳ್ಳಿಗಳನ್ನು ಹೊಂದಿದ್ದು ಪ್ರಮುಖ ತಾಲೂಕಾ ಕೇಂದ್ರವಾಗಿತ್ತು. ಹೀಗಾಗಿ ತೇರದಾಳ ಐತಿಹಾಸಿಕ ಕಾಲದಿಂದಲೂ ತನ್ನದೇ ಆದ ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಆದ್ದರಿಂದ ತೇರದಾಳ ಒಂದು ಐತಿಹಾಸಿಕ ಅಧ್ಯಯನ ನೀಡುವುದು ಈ ಪ್ರಬಂಧದ ಪ್ರಮುಖವಾದ ಉದ್ದೇಶವಾಗಿದೆ.

ತೇರದಾಳದ ಇತಿಹಾಸದ ಅಧ್ಯಯನಕ್ಕೆ ಮೂಲಾಧಾರಗಳು ಅತ್ಯವಶ್ಯಕವಾಗಿವೆ. ಮುಖ್ಯವಾಗಿ ಮೂಲಾಧಾರಗಳನ್ನು ಸಾಹಿತ್ಯದ ಮೂಲಾಧಾರಗಳು ಮತ್ತು ಪ್ರಾಕ್ತನ ಆಧಾರಗಳೆಂದು ವಿಭಾಗಿಸಲಾಗಿದೆ. ಸಾಹಿತ್ಯಿಕ ಆಧಾರಗಳಲ್ಲಿ ದೇಶಿಯ (ಸ್ಥಳೀಯ ಸಾಹಿತ್ಯ) ಪ್ರಮುಖವಾದದ್ದು. ಪ್ರಾಕ್ತನ ಆಧಾರಗಳಲ್ಲಿ ಅವಶೇಷಗಳು, ಶಾಸನಗಳು, ನಾಣ್ಯಗಳು ಮತ್ತು ಸ್ಮಾರಕಗಳು ಎಂದು ವಿಭಾಗಿಸಿ ಅಧ್ಯಯನ ಮಾಡಲಾಗುವುದು.



ಅ) ಸಾಹಿತ್ಯಿಕ ಆಧಾರಗಳು :

ಐತಿಹಾಸಿಕ ತೇರದಾಳ ವಿವಿಧ ಭಾಷೆಗಳಲ್ಲಿ ಬರೆಯಲ್ಪಟ್ಟಿರುವ ಸಾಹಿತ್ಯ ಕೃತಿಗಳಿಗೆ ಸಾಹಿತ್ಯಿಕ ಆಧಾರಗಳೆಂದು ಎಂದು ಹೆಸರು.

ದೇಶಿಯ ಸಾಹಿತ್ಯ :

ದೇಶಿಯ ವಿದ್ವಾಂಸರಿಂದ ರಚಿಸಲ್ಪಟ್ಟಿರುವ ಸಾಹಿತ್ಯ ಕೃತಿಗಳಿಗೆ ದೇಶಿಯ ಸಾಹಿತ್ಯ ಎಂದು ಹೆಸರು. ಕನ್ನಡ, ಸಂಸ್ಕೃತ, ಹಳೆಗನ್ನಡ ಭಾಷೆಗಳಲ್ಲಿ ರಚಿಸಲಾಗಿರುವ ಗ್ರಂಥಗಳಿಂದ ಸಮಗ್ರ ಐತಿಹಾಸಿಕ ತೇರದಾಳದ ಮಾಹಿತಿ ದೊರೆಯುತ್ತದೆ.

ಆ) ಪುರಾತತ್ವ ಆಧಾರಗಳು (ಅಥವಾ) ಪ್ರಾಕ್ತನ ಶಾಸ್ತ್ರಾಧಾರಗಳು :

"ಪ್ರಾಚೀನ ವಸ್ತುಗಳ ವಿಜ್ಞಾನ'' ಎಂದೇ ಕರೆಯಲ್ಪಡುವ ಪುರಾತತ್ವ ಅಧ್ಯಯನ ತೇರದಾಳ ಇತಿಹಾಸ ರಚನೆಗೆ ಪ್ರಮುಖ ಮೂಲಾಧಾರವಾಗಿದೆ. ಇದರಲ್ಲಿ ಶಾಸನಗಳು, ನಾಣ್ಯಗಳು, ಸ್ಮಾರಕಗಳು ನಗರದ ಅವಶೇಷಗಳು ಇತ್ಯಾಧಿಗಳು ಇತಿಹಾಸದ ಅಧ್ಯಯನದ ಮೇಲೆ ಹೆಚ್ಚಿನ ಬೆಳಕು ಚೆಲ್ಲುತ್ತವೆ.

ಶಾಸನಗಳು :

"ಪ್ರಾಚೀನ ತೇರದಾಳದ ಇತಿಹಾಸ ರಚನೆಗೆ ಶಾಸನಗಳೇ ಅಡಿಗಲ್ಲು" ಪುರಾತತ್ವ ಆಧಾರಗಳಲ್ಲೇ ಶಾಸನಾಧಾರಗಳು ಅತ್ಯಂತ ಶ್ರೇಷ್ಠ ಮೂಲಾಧಾರಗಳಾಗಿವೆ.

"ಕಲ್ಲಿನ ಮೇಲೆ ಕೊರೆದ ಪ್ರಾಚೀನ ಕಾಲದ ಲೇಖನವನ್ನು ಶಾಸನ ಎಂದು ಕರೆಯುತ್ತೇವೆ". ಶಾಸನಗಳು ಹೆಚ್ಚಾಗಿ ಲಿಖಿತ ದಾಖಲೆಗಳು ಆಗಿದ್ದವು. ಶಾಸನಗಳು ಹೆಚ್ಚಾಗಿ ಕಲ್ಲು ಬಂಡೆಗಳ ಮೇಲೆ, ದೇವಾಲಯದ ಗೋಡೆಗಳ ಮೇಲೆ, ಸ್ತಂಭಗಳ ಮೇಲೆ ಹಾಗೂ ತಾಮ್ರದ ಹಲಗೆಗಳ ಮೇಲೆ ಕೆತ್ತಿಸಿರುವ ಲಿಖಿತ ದಾಖಲೆಗಳಿಗೆ ಶಾಸನಗಳು ಎಂದು ಹೆಸರು.

ಪ್ರಾಚ್ಯ ವಸ್ತುಗಳಲ್ಲಿ ಸೇರ್ಪಡೆಯಾಗುವ ಶಾಸನಗಳು ಇತಿಹಾಸದ ಪುನರ್ ನಿರ್ಮಾಣದಲ್ಲಿ ನಿರ್ವಹಿಸಿದ ಪಾತ್ರ ಪ್ರಮುಖವಾದುದು. ಅಂತೆಯೇ ಅವು ಐತಿಹಾಸಿಕ ಸಂಶೋಧನಾ ಅಧ್ಯಯನದ ಪ್ರತಿ ಹಂತದಲ್ಲಿ ಅಧಿಕೃತ ಕನ್ನಡಿ ಆಗಿದೆ. ಐತಿಹಾಸಿಕ ತೇರದಾಳ ಪ್ರದೇಶದ ಅಧ್ಯಯನಕ್ಕೆ ಇಲ್ಲಿ ಪ್ರಮುಖವಾಗಿ ತೇರದಾಳ ಗ್ರಾಮದಲ್ಲಿ ದೊರೆತ ಪ್ರಮುಖವಾದ ನಾಲ್ಕು ಶಾಸನಗಳು ಹಾಗೂ ಹೊರವಲಯದ ಶಾಸನಗಳು ಸಹ ಬಳಸಿಕೊಳ್ಳಲಾಗಿದೆ. ತೇರದಾಳ ಗ್ರಾಮದ ಶಾಸನಗಳು, ಕರ್ನಾಟಕ ಇನ್‌ಸ್ಕ್ರಿಪ್‌ಷನ್ ಸಂಪುಟ-೫ರಲ್ಲಿ ಮತ್ತು ಇಂಡಿಯನ್ ಎಂಟಿಕ್ವಾರಿ ಸಂಪುಟ-೧೪ರಲ್ಲಿ ಪ್ರಕಟಣೆಗೊಂಡಿವೆ. ಲಭ್ಯವಿರುವ ಈ ಶಾಸನಗಳು, ಭೌಗೋಳಿಕ, ಸಾಮಾಜಿಕ ಹಾಗೂ ದಾನ-ದತ್ತಿ ವಿಷಯಗಳ ಕುರಿತು ಮಾಹಿತಿ ಒದಗಿಸುವಲ್ಲಿ ವಿಫುಲ ಪ್ರಮಾಣದ ಮಾಹಿತಿಯನ್ನು ನೀಡುತ್ತವೆ.

ನಾಣ್ಯಗಳು :

ಇತಿಹಾಸದ ರಚನೆಗೆ ನಾಣ್ಯಗಳು ಮಹತ್ವ ಪೂರ್ಣವಾದ ಆಧಾರಗಳಾಗಿವೆ. ಇವುಗಳು ಶಾಸನಗಳಂತೆಯೇ ಐತಿಹಾಸಿಕ ದಾಖಲೆಗಳಾಗಿವೆ. ನಾಣ್ಯಗಳ ಅಧ್ಯಯನಕ್ಕೆ ನಾಣ್ಯ ಶಾಸ್ತ್ರ ಎಂದು ಹೆಸರು. ತೇರದಾಳ ಪ್ರದೇಶದ ಕೆಲ ಶಾಸನಗಳು ಅಂದು ಚಲಾವಣೆಯಲ್ಲಿರುವ ನಾಣ್ಯಗಳನ್ನು ಹೆಸರಿಸಿವೆಯಾದರೂ ಅವುಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ದೊರೆತು ಆಯಾ ರಾಜಮನೆತನಗಳ ನಾಣ್ಯಗಳೊಂದಿಗೆ ಗುರುತಿಸುವುದು ಕಷ್ಟಕರವಾಗಿದೆ. ಪ್ರಾದೇಶಿಕವಾಗಿಯೂ ಈ ನಾಣ್ಯಗಳು ಭಿನ್ನವಾಗಿರಬೇಕೆಂಬ ಸಂದೇಹಕ್ಕೆ ಅವಕಾಶವಿದೆ. ಆದರೂ ಒಟ್ಟಿನಲ್ಲಿ ನಾಣ್ಯಗಳು ಐತಿಹಾಸಿಕ ತೇರದಾಳದ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದಂತೆ ಇವು ತುಂಬಾ ಸಹಾಯಕಾರಿಯಾಗಿವೆ ಎಂದು ನಾವು ಹೇಳಬಹುದು.

ಸ್ಮಾರಕಗಳು :

ತೇರದಾಳದ ಸಂಸ್ಕೃತಿಯ ಪ್ರತಿಬಿಂಬದಂತಿರುವ ಸ್ಮಾರಕಗಳು ಇತಿಹಾಸ ರಚನೆಗೆ ಉಪಯುಕ್ತ ಆಧಾರಗಳಾಗಿವೆ. ಸ್ಮಾರಕಗಳು ಎಂದರೆ ಗತಕಾಲದ ಅವಶೇಷಗಳು ಎಂದು ಅರ್ಥ. ಇದರಲ್ಲಿ ರಾಜಮಹಾರಾಜರು ನಿರ್ಮಿಸಿದ ಐತಿಹಾಸಿಕ ದೇವಾಲಯಗಳು, ಕೋಟೆಗಳು, ಅರಮನೆಗಳು, ವಿಗ್ರಹಗಳು, ಬಸದಿಗಳು ಮತ್ತು ಬೌದ್ಧ ಸ್ತೂಪಗಳ ಕಟ್ಟಡಗಳು, ಸ್ತಂಭಗಳು ಮುಂತಾದ ಸ್ಮಾರಕಾವಶೇಷಗಳು ಐತಿಹಾಸಿಕ ತೇರದಾಳ ಇತಿಹಾಸದ ಮೇಲೆ ಹೆಚ್ಚಿನ ಬೆಳಕು ಚೆಲ್ಲುತ್ತವೆ.

ಐತಿಹಾಸಿಕ ತೇರದಾಳ ಪ್ರದೇಶದಲ್ಲಿ ಶ್ರೀ ನೇಮಿನಾಥ ಜಿನಾಲಯ, ಶ್ರೀ ಕಲ್ಮೇಶ್ವರ ದೇವಾಲಯ, ಶ್ರೀ ಅಲ್ಲಮ ಪ್ರಭು ದೇವಾಲಯ, ಕೋಟೆ ಗೋಡೆಗಳು ಇವು ಐತಿಹಾಸಿಕ ತೇರದಾಳದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಜೀವಂತ ಸಾಕ್ಷಿಯಾಗಿವೆ.

ಮೊದಲ ಅಧ್ಯಾಯವು ಪ್ರಬಂಧಕ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆಗೆ ಅನುಕೂಲವಾದ ಸಾಧನ ಸಾಮಗ್ರಿ ಹಾಗೂ ಅಧ್ಯಯನವಾದ ರೀತಿಯನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯವು ತೇರದಾಳದ ಐತಿಹಾಸಿಕ ಹಿನ್ನಲೆಯಲ್ಲಿ ಭೌಗೋಳಿಕ ಲಕ್ಷಣಗಳು ತೇರದಾಳದ ಪ್ರಾಚೀನತೆ ಹಾಗೂ ವರ್ಣನೆ ಕುರಿತು ವಿವರಿಸಲಾಗಿದೆ. ಒಂದು ಗ್ರಾಮ ಮಟ್ಟದಲ್ಲಿ ನಿಂತು ಅಧ್ಯಯನ ಮಾಡುವಾಗ ಈ ಭೌಗೋಳಿಕ ಲಕ್ಷಣಗಳು ಅದರ ಪ್ರಾಚೀನತೆಯ ಪರಿಚಯ ಅತಿ ಅಗತ್ಯವಿದೆ. ಅದರ ಸ್ಪಷ್ಟವಾದ ಮಾಹಿತಿಯನ್ನು ಈ ಅಧ್ಯಾಯವು ಒಳಗೊಂಡಿದೆ.

ಮೂರನೆಯ ಅಧ್ಯಾಯವು ತೇರದಾಳದ ಗ್ರಾಮವು ಕರ್ನಾಟಕದಲ್ಲಿ ಪ್ರಮುಖ ಪುರಾತತ್ವದ ನೆಲೆಯಾಗಿದೆ. ಈ ತೇರದಾಳದ ಪುರಾತತ್ವ ನೆಲೆಯಲ್ಲಿ ಬೃಹತ ಶಿಲಾಯುಗದ ಸಂಸ್ಕೃತಿಯನ್ನು ಪರಿಚಯಿಸುತ್ತದೆ. ವಿದ್ವಾಂಸರು (ಇತಿಹಾಸಕಾರರು) ಭೂ-ಉತ್ಖನನದ ಪರಿಶ್ರಮದಿಂದಾಗಿ ಸುಮಾರು ಸಾವಿರಕ್ಕೂ ಮಿಕ್ಕ ಶಿಲಾಗೋರಿಗಳು ಇದೇ ಪ್ರದೇಶದ ಸುತ್ತ-ಮುತ್ತಲಿನ ಸ್ಥಳದಲ್ಲಿ ಲಭ್ಯವಾಗಿವೆ.

ನಾಲ್ಕನೆಯ ಅಧ್ಯಾಯವು ಆರ್ಥಿಕ ಅಂಶಗಳಾದ ಕೃಷಿ, ವ್ಯಾಪಾರ, ಬೆಳೆಗಳು, ಶ್ರೇಣಿಗಳ ಮುಂತಾದವುಗಳ ಕುರಿತು ವಿವರಣೆಯನ್ನು ನೀಡಲಾಗಿದೆ.

ಐದನೆಯ ಅಧ್ಯಾಯವು ಪ್ರಮುಖ ಧರ್ಮಗಳಾದ ಶೈವ, ವೈಷ್ಣವ, ಬೌದ್ಧ ಮತ್ತು ಜೈನ ಧರ್ಮಗಳ ಉಗಮ, ವಿಕಾಸವನ್ನು ಕುರಿತು ಹೆಸರಿಸುವುದರೊಂದಿಗೆ ಎಲ್ಲ ಧರ್ಮಗಳು ತೇರದಾಳ ಗ್ರಾಮದಲ್ಲಿ ಪ್ರಚಲಿತದಲ್ಲಿದ್ದ ಕುರಿತು ಶಾಸನಾಧಾರಿತವಾಗಿ ಮಾಹಿತಿಯನ್ನು ನೀಡಲಾಗಿದೆ.

ಆರನೆ ಅಧ್ಯಾಯವು ಕಲೆ ಮತ್ತು ವಾಸ್ತುಶಿಲ್ಪದ ಬೆಳವಣಿಗೆಗಳ ಜೊತೆ ಜೊತೆಗೆ ತೇರದಾಳ ಗ್ರಾಮದಲ್ಲಿ ಕಂಡು ಬರುವ ಐತಿಹಾಸಿಕ ಪ್ರಮುಖ ದೇವಾಲಯಗಳು ಮತ್ತು ಅವುಗಳ ವೈಶಿಷ್ಟ್ಯಗಳನ್ನು ಕುರಿತು ಹೇಳಲಾಗಿದೆ.

ಏಳನೆ ಅಧ್ಯಾಯವು ಸಮಾರೋಪವಾಗಿದ್ದು ಅನುಬಂಧದಲ್ಲಿರುವ ಗ್ರಂಥಗಳು, ನಕ್ಷೆಗಳು, ತಲಾವಿನ್ಯಾಸ ಹಾಗೂ ಪ್ರಮುಖವಾದ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ.

ಒಟ್ಟಾರೆ ಪ್ರಬಂಧದ ಅನಿಶ್ಚಿತತೆಯ ಜೊತೆಗೆ ಇನ್ನೂ ಶೋಧನೆಯ ಬಗೆಗೆ ಗಮನ ಹರಿಸಲಾಗಿದೆ.

ಐತಿಹಾಸಿಕ ತೇರದಾಳದ ಇತಿಹಾಸ :

ವಿಫುಲವಾದ ಭೌಗೋಳಿಕ ಸಂಪತ್ತನ್ನು, ಐತಿಹಾಸಿಕ ಪರಂಪರೆಯನ್ನೂ ಉಳ್ಳ ತೇರದಾಳ ಚರಿತ್ರೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಐತಿಹಾಸಿಕವಾಗಿ ತೇರದಾಳವು ಕಲೆ, ಸಾಹಿತ್ಯ, ಲಲಿತ ಕಲೆಗಳಿಗೆ ತನ್ನದೇ ಆದ ವೈಶಿಷ್ಟವಾದ ಸ್ಥಾನವನ್ನು ಬೆಳಸಿಕೊಂಡಿದೆ. ಪ್ರಾಚೀನ ಕಾಲದಿಂದಲೂ ಅದು ಕಾಲಚಕ್ರದಲ್ಲಿ ಒದಗಿ ಬಂದ ಏಳು-ಬೀಳುಗಳನ್ನು ಲೆಕ್ಕಿಸದೆ ತನ್ನದೇ ಆದ ರೀತಿಯಲ್ಲಿ ಸ್ವಂತಿಕೆಯನ್ನು ಬೆಳೆಯಿಸಿಕೊಂಡು ಬಂದಿದೆ. ಈ ಸತ್ವಪೂರ್ಣ ವೈಶಿಷ್ಟ್ಯಗಳನ್ನು ಈ ಕೆಳಕಂಡ ಅಂಶಗಳಲ್ಲಿ ಅಧ್ಯಯನ ಮಾಡಬಹುದು.

೧.೧ ಅಧ್ಯಯನದ ಉದ್ದೇಶ :

ಶಿಲಾಯುಗದ ಕುರುಹುಗಳನ್ನು ಹೊಂದಿರುವ, ಐತಿಹಾಸಿಕ, ಪುರಾತನ ಪುಣ್ಯ ನಗರವೆಂಬ ಹೆಗ್ಗಳಿಕೆಗೆ ಪ್ರಾತವಾದ ಬೆಲ್ಲ ಸಕ್ಕರೆಯ ಸವಿನಾಡು ಪ್ರಮುಖ ವ್ಯಾಪಾರಿ ಕೇಂದ್ರ ಕುಂತಳದೇಶ. (ತುಂಗಭದ್ರೆ ಮೇಲಿನ ಭಾಗ ಬಹುತೇಕ ಈಗಿನ ಉತ್ತರ ಕರ್ನಾಟಕ ಪ್ರದೇಶಗಳನ್ನು ಶಾಸನಗಳಲ್ಲಿ ಕುಂತಳವೆಂದು ಕರೆಯುಲಾಗಿದೆ. ಸಾಮಾನ್ಯವಾಗಿ ಶಾಸನಗಳಲ್ಲಿ ಜಂಬೂದ್ವೀಪದ ಮಧ್ಯದಲ್ಲಿರುವ ಮೇರು ಪರ್ವತದ ದಕ್ಷಿಣ ದಿಕ್ಕಿನಲ್ಲಿ ಭರತಖಂಡ ಮತ್ತು ಇದರ ದಕ್ಷಿಣಕ್ಕೆ ಕುಂತಳ ದೇಶವೆನ್ನುತ್ತಿದ್ದರು.) ಚಾಲುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯನ ಮಾಂಡಲೀಕರಾದ ಶಿಲಾಹಾರ ವಂಶದ ಗೋಂಕರಸರು ತೇರದಾಳ ಕಂಪಣ (ವಿಭಾಗ) ವನ್ನು ತೇರದಾಳ ರಾಜಧಾನಿಯಿಂದ ಆಳುತ್ತಿದ್ದ ವಿಷಯ ಜೈನ ಶಿಲಾ ಶಾಸನದಿಂದ ತಿಳಿದುಬರುತ್ತದೆ. ಕರ್ನಾಟಕ ಐತಿಹಾಸಿಕ ಹಿರಿಮೆಯನ್ನು ಹೊತ್ತುನಿಂತ ತೇರದಾಳ ಐತಿಹಾಸಿಕ ಕಾಲದಿಂದಲೂ ತನ್ನದೇ ಆದ ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ.

೧.೨ ಸ್ವರೂಪ :

ಐತಿಹಾಸಿಕವಾಗಿ ತನ್ನದೇ ಆದ ವೈಶಿಷ್ಟತೆಯಿಂದ ಕೂಡಿದ ಪ್ರಮುಖ ವ್ಯಾಪಾರಿ ಕೇಂದ್ರ. ಇದು ತೇರದಾಳ ಐತಿಹಾಸಿಕತೆಗೆ, ಸಂಸ್ಕೃತಿಯ ಪರಂಪರೆಗೆ ವೈಭವಯುತವಾಗಿದೆ. ಐತಿಹಾಸಿಕ ತೇರದಾಳ ವೈವಿಧ್ಯಮಯವಿದ್ದರೂ ಏಕತೆ, ಸಹನೆ ಮತ್ತು ಪರಸ್ಪರ ಹೊಂದಿಕೊಳ್ಳುವ ಮನೋಭಾವ, ವಿವಿಧ ಮತಗಳ ಸಮನ್ವಯ ಇವು ಇದರ ಸಂಸ್ಕೃತಿಯ ತಿರುಳು. ಈ ತಿರುಳು ಇಲ್ಲಿನ ಅರಸರು, ಸಂತರು, ಕವಿಗಳು, ಬುದ್ಧಿ ಜೀವಿಗಳು, ಸಮಾಜ ಸುಧಾರಕರು, ಬೋಧಕರು ಮತ್ತು ಕಲಾಕಾರರನ್ನು ತನ್ನ ಅಡಿಯಲ್ಲಿ ಪೋಷಿಸಿ ಬೆಳೆಯಿಸಿದೆ.

ಧಾರ್ಮಿಕವಾಗಿ ನೋಡಿದರೆ ಎಲ್ಲ ಮತಗಳು ಐತಿಹಾಸಿಕದ ತೇರದಾಳ ನಗರದಲ್ಲಿ ಆಶ್ರಯವನ್ನು ಪಡೆದಿವೆ. ಬಹು ಭಾಷಾ ಜನರು ಇಲ್ಲಿ ಪೋಷಿಸಲ್ಪಟ್ಟಿದ್ದಾರೆ. ಐತಿಹಾಸಿಕ ತೇರದಾಳ ಶಾಸನಗಳಲ್ಲಿ ಉಕ್ತವಾಗಿರುವ **"ಚತುಸಮಯ"** ಎಂಬ ಪದವು ಶೈವ, ವೈಷ್ಣವ, ಬೌದ್ಧ ಮತ್ತು ಜೈನ ಧರ್ಮಗಳ ಆಶ್ರಯವನ್ನೇ ಸಾರುತ್ತದೆ. ಕ್ರಿ.ಶ ೧೧೨೩ ಕಾಲದ ತೇರದಾಳ ಗ್ರಾಮದ ಶಾಸನವು **"ಚತುಸಮಯಮನಾವಗಮೆಸೆವಾ"** ಎಂದು ಉಲ್ಲೇಖಿಸಿರುವುದುರಿಂದ ತೇರದಾಳ ೧೨ ಕಂಪಣವು ಮೇಲೆ ಹೆಸರಿಸಲಾದ ಪ್ರಮುಖ ಧರ್ಮಗಳ ಆಶ್ರಯ ತಾಣವಾಗಿ ಪ್ರಾಚೀನ ಕಾಲದಿಂದಲೂ ತಲೆ ಎತ್ತಿತ್ತೆಂಬ ವಿಷಯ ಶಾಸನಾಧಾರಿತದಿಂದ ಮನದಟ್ಟಾಗುತ್ತದೆ.

೧.೩ ವ್ಯಾಪ್ತಿ :

ಪ್ರಾಚೀನ ಐತಿಹಾಸಿಕ ತೇರದಾಳವು ಗಿರಿ, ದುರ್ಗಗಳಿಂದ, ಕೆರೆ, ಭಾವಿಗಳಿಂದ, ಶ್ರೀಮಂತರಿಂದ ಹಾಲು ಹೈನು ಧಾನ್ಯ ಸಂಪತ್ತಿನಿಂದ ಕೂಡಿ ಕಂಗೊಳಿಸುತ್ತಿತ್ತು. ಚಾಲುಕ್ಯ ಚಕ್ರವರ್ತಿ ಪೇರ್ಮಾಡಿಯು ಕ್ರಿ. ಶ. ೧೦೭೫ ರಿಂದ ೧೧೨೬ ಮಧ್ಯದಲ್ಲಿ ಕಟ್ಟಿಸಿದ ಐತಿಹಾಸಿಕ ಕೋಟೆ ಇಲ್ಲದೆ. ಐತಿಹಾಸಿಕ ತೇರದಾಳವು ಕೃಷ್ಣಾ ಮತ್ತು ಘಟಪ್ರಭಾ ನದಿಗಳ ಮಧ್ಯದಲ್ಲಿ ಹರಡಿರುವ ಐತಿಹಾಸಿಕ ಒಂದು ಚಿಕ್ಕ ಗ್ರಾಮ.

ಕ್ರಿ. ಶ. ೧೧೨೩ ರ ಶಾಸನದ ಪ್ರಕಾರ ಹಿಂದೆ ಐತಿಹಾಸಿಕ ತೇರದಾಳವನ್ನು 'ಕಂಪಣ' ವೆಂದು ಕರೆಯುತ್ತಿದ್ದರು. ಇದು ಕೂಂಡಿನಾಡಿನಲ್ಲಿ ೧೨ ಗ್ರಾಮಗಳನ್ನೊಳಗೊಂಡು ಆಡಳಿತದ ವಿಭಾಗವಾಗಿತ್ತು. ಈ ೧೨ ಗ್ರಾಮಗಳು ಹಾಗೂ ತೇರದಾಳ ಸೇರಿ ೧೩ ಗ್ರಾಮ ಸಮುದಾಯಕ್ಕೆ ತೇರ (ಹದಿಮೂರು) ದಾಳ (ಸಮೂಹ) ಎಂಬ ಹೆಸರು ಐತಿಹಾಸಿಕ ತೇರದಾಳ ಎಂಬ ಹೆಸರು ಬಂದಿತ್ತು.

ಐತಿಹಾಸಿಕ ತೇರದಾಳ ಹಾಗೂ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವ್ಯವಸ್ಥಿತವಾದ ಗ್ರಾಮ ನಾಗರಿಕ ಸಂಸ್ಕೃತಿಯ ಹಂತವನ್ನು ತಿಳಿಸುವಂತಹ ನೂರಾರೂ ಶಿಲಾ, ತಾಮ್ರಯುಗದ ನೆಲೆಗಳು ಇಲ್ಲಿದ್ದು, ತ್ರಾಮದ ಬಳೆಗಳು, ಚಿತ್ತಾಕರ್ಷಕ ಚಿತ್ರಗಳನ್ನು ಹೊಂದಿರುವ ಪ್ರಾಚೀನ ಕುಂಬಾರರ ಸುಟ್ಟ ಮಡಿಕೆ ಕುಡಿಕೆಗಳನ್ನು ಐತಿಹಾಸಿಕ ತೇರದಾಳ ಇತಿಹಾಸಕ್ಕೆ ಕುರುಹುಗಳು ಆಗಿವೆ.

ದಕ್ಷಿಣ ಮಹಾರಾಷ್ಟ್ರದಲ್ಲಿ ಪಟವರ್ಧನ ದೊರೆಗಳು ಆಳುತ್ತಿದ್ದರು. ಇವರ ಸಂಸ್ಥಾನಗಳಲ್ಲಿ ಸಾಂಗ್ಲಿ ಸಂಸ್ಥಾನವು ಎಲ್ಲಕ್ಕಿಂತ ದೊಡ್ಡದಾಗಿತ್ತು. ಈ ಸಂಸ್ಥಾನದ ಅಧೀನದಲ್ಲಿ ತೇರದಾಳ ೧೭ ಹಳ್ಳಿಗಳನ್ನು ಹೊಂದಿದ್ದ ಪ್ರಮುಖವಾದ ತಾಲೂಕಾ ಕೇಂದ್ರವಾಗಿತ್ತು. ಕರ್ನಾಟಕ ಏಕೀಕರಣದ ನಂತರ ೧೯೭೩ ರಲ್ಲಿ ಮೈಸೂರು ಮುನ್ಸಿಪಾಲ್ಟಿ ಕಾಯ್ದೆಯನ್ವಯ ಪ್ರಥಮದಲ್ಲಿ ತೇರದಾಳ ಪಂಚಾಯತಿಯಿಂದ ಮಾರ್ಪಾಟಾಗಿ ಪುರಸಭೆಯಾಗಿ ಪರಿವರ್ತನೆಯನ್ನು ಹೊಂದಿದೆ.

ಈಗ ಕರ್ನಾಟಕ ರಾಜ್ಯದ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಪಶ್ಚಿಮ ಭಾಗದ ಕೊನೆಯ ದೊಡ್ಡ ಪಟ್ಟಣವೇ ಪ್ರಮುಖ ಐತಿಹಾಸಿಕ ತೇರದಾಳವಾಗಿದೆ.

೧.೪ ವೈಧಾನಿಕತೆ :

ಪ್ರಸ್ತುತ ಅಧ್ಯಯನಕ್ಕೆ ಶಾಸನ ಮತ್ತು ಸಾಹಿತ್ಯಕ ಗ್ರಂಥಗಳನ್ನು ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಶಾಸನಗಳು ಮೊದಲು ಪ್ರಮಾಣಭೂತ ಆಕರಗಳಾಗಿರುವುದರಿಂದ ಒಂದೊಂದು ಅಂಶಕ್ಕೆ ಸಂಬಂಧಿಸಿದ ವಿವಿಧ ವಿಷಯ ಸಂಗ್ರಹಣೆಗಾಗಿ ಹಾಗೂ ಈಚೆಗೆ ತುಂಬಾ ಜನಪ್ರೀಯಗೊಳ್ಳುತ್ತಿರುವ ಪಟ್ಟಿಕೆ ವಿಧಾನವನ್ನು ಸಹ ಅನುಸರಿಸಲಾಗಿದೆ. ಅಂಚೆ ಕಾರ್ಡಿನಾಕಾರದ ಪ್ರತಿ, ಪ್ರತಿ ಪಟ್ಟಿಕೆಗಳ ಮರು-ವಿಗಂಡಣೆಗೆ ಸಹಾಯಕವಾಗುವಂತೆ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ವಿಭಾಗಗಳ ಸೂಚನೆ ಮತ್ತು ಆಕರವಾಗಿ ಬಳಸಿದ ಶಾಸನಗಳ ಪ್ರಕಟಣಾ ವಿವರಗಳನ್ನು ಮೂಲಿಕೆಗಳು ಒಳಗೊಂಡಿದ್ದವು. ಇದರಿಂದ ಅರಸು ಮನೆತನದ ಕಾಲಮಾನ ಪ್ರದೇಶ ವಿಷಯುಕ್ಕನುಗುಣವಾಗಿ ಪಟ್ಟಿಕೆಗಳನ್ನು ಹೊಂದಿಸಿಕೊಳ್ಳಲು ತುಂಬಾ ಅನುಕೂಲಕಾರಿಯಾಯಿತು.

ಹೀಗೆ ಶಾಸನಗಳಿಂದ ತಿಳಿದು ಬರುವ ವಿಷಯುಗಳನ್ನು ಮೂಲ ಸಾಮಗ್ರಿಗಳನ್ನಾಗಿಟ್ಟುಕೊಂಡು ಈ ವಿಷಯ ಸಮರ್ಥನೆಗಾಗಿ ಇತರ ಗ್ರಂಥಗಳ ಆಕರ ಮತ್ತು ಕ್ಷೇತ್ರ ಕಾರ್ಯಗಳ ನಿರೂಪಣೆಗಾಗಿ ಮುಂತಾದವುಗಳನ್ನು ಬಳಸಿಕೊಳ್ಳಲಾಗಿದೆ.

* * *

ಅಧ್ಯಾಯ – ೨

ಐತಿಹಾಸಿಕ ಹಿನ್ನಲೆ

ಅಧ್ಯಾಯ – ೨
ಐತಿಹಾಸಿಕ ಹಿನ್ನಲೆ

ಪ್ರಾಚೀನ ಐತಿಹಾಸಿಕ ಜಂಬೂದ್ವೀಪದ ಭರತಕ್ಷೇತ್ರದ ಕುಂತಳ (ತುಂಗಭದ್ರೆಯ ಮೇಲಿನ ಭಾಗ ಬಹುತೇಕ ಈಗಿನ ಉತ್ತರ ಕರ್ನಾಟಕ ಪ್ರದೇಶವನ್ನು ಶಾಸನಗಳಲ್ಲಿ ಕುಂತಳವೆಂದು ಕರೆಯಲಾಗಿದೆ). ದೇಶದಲ್ಲಿ ಕೂಂಡಿನಾಡು ೩೦೦೦ ನಾಡಿನಲ್ಲಿ ಬರುವ ತೇರದಾಳ ೧೨ ಕಂಪಣದ ರಾಜಧಾನಿ ಪ್ರಮುಖ ಪಟ್ಟಣದ ವ್ಯಾಪಾರ ಕೇಂದ್ರ ತೇರದಾಳ. ಈ ಪ್ರಾಚೀನ ಐತಿಹಾಸಿಕ ನೆಲೆಯಲ್ಲಿ ಪ್ರಾಗೈತಿಹಾಸಿಕ ಕಾಲಕ್ಕೆ ಸಂಬಂಧಿಸಿದ ಅನೇಕ ಬೃಹತ ಶಿಲಾಗೋರಿಗಳು ಕಡ್ಲಿಪಲ್ಲಿ ಎಂಬ ಹೆಸರಿನ ಗುಡ್ಡದಲ್ಲಿ ಲಭ್ಯವಾಗಿವೆ. ಅಲ್ಲದೇ ಐತಿಹಾಸಿಕ ಪ್ರಾಚೀನ ತೇರದಾಳ ಕಂಪಣ ಅಥವಾ ಆಡಳಿತ ವಿಭಾಗವಾಗಿ ಪ್ರಮುಖ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿದ್ದು ಸುಮಾರು ಕ್ರಿ.ಶ. ೧೨ನೇ ಶತಮಾನದಿಂದಲೂ ಅಸ್ತಿತ್ವದಲ್ಲಿರುವ ಪ್ರಾಚೀನ ಪ್ರಸಿದ್ಧಿಯನ್ನು ಪಡೆದ ಐತಿಹಾಸಿಕ ಸ್ಥಳವಾಗಿದೆ. ಈ ಕಂಪಣವನ್ನು ಆಳಿದ ಅರಸು ಮನೆತನಗಳಾದ ಕಲ್ಯಾಣದ ಚಾಲುಕ್ಯರು, ಸೌದತ್ತಿಯ ರಟ್ಟರು, ಶಿಲಾಹಾರರು ಮತ್ತು ಯಾದವರ ಮನೆತನಗಳ ಉಲ್ಲೇಖವನ್ನು ನೀಡುವ ಕೆಲ ಪ್ರಮುಖ ಶಾಸನಗಳು ಈ ಐತಿಹಾಸಿಕ ಪ್ರಾಚೀನ ತೇರದಾಳದಲ್ಲಿ ಲಭ್ಯವಾಗಿವೆ.

ಕಲ್ಯಾಣದ ಚಾಲುಕ್ಯರ ಮನೆತನದ ಶ್ರೇಷ್ಠ ದೊರೆ ಆರನೆಯ ವಿಕ್ರಮಾದಿತ್ಯನಿಗೆ ಸಂಬಂಧಿಸಿದ ಕ್ರಿ.ಶ. ೧೧೨೩ ರ ತೇರದಾಳ ಶಾಸನವೊಂದು ಚಾಲುಕ್ಯ ಮನೆತನದ ವಂಶಾವಳಿಯ ಕುರಿತು ವಿವರಿಸುವದರೊಂದಿಗೆ ಚಾಲುಕ್ಯರ ದೊರೆ ಪೆರ್ಮಾಡಿಯೆಂಬ ಅರಸನು (ಕ್ರಿ.ಶ. ೧೦೭೬–೧೧೨೬) ವೈರಿಗಳಾದ ಗುಜರಾತ ಚೋಳ ದೇಶಗಳ ಅರಸರನ್ನು ಗೆದ್ದು ಬಂದ ಬಳಿಕ ತೇರದಾಳ ಗ್ರಾಮವನ್ನು ಕಟ್ಟಿಸಿದನು ಎಂಬ ಉಲ್ಲೇಖವನ್ನು ಶಾಸನಗಳ ಮೂಲಕ ತಿಳಿಯಬಹುದು.

> **ದಂ ವಿಖ್ಯಾತಂ ತ್ರೈಲೋಕ್ಯಮಲ್ಲನಾಹವಮಲ್ಲಂ ॥ ವ ॥ ಅನ್ತು ಸಮಸ್ತ ಧಾತ್ರೀವಲ್ಲಭಗೆ ವಲ್ಲಭನಾದಾಹವಮಲ್ಲದೇವನ ಪ್ರಿಯತನೂಜನ್ ॥ ಘನ ದೋರ್ವ್ವಿಕ್ರಾಂತದಿಂ ಗೂರ್ಜ್ಜರ ನ್ರಿಪಬಳಮಂ ಗೆಲ್ದು ದುಾಜಾಂತ ಚೋಳಾವನಿಪಂಗಾಭೀಳ ಕಾಳಾ.**

ನನಮುನೊಸೆದು ಸಂಗ್ರಾಮದೊಳು ತೋಱ ಬೀತಾವನಿಪರ್ಗ್ಗಾತಂಕಮಂ ಪುಟ್ಟಿಸದ ನುನಯದಿಂ ವಿಶ್ವ ಭೂಚಕ್ರಮಂ ಸಜ್ಜನವಾಗಲು ರಾಯಕೋಳಾಹಳನೆನೆ ತಳೆದಂ ರಾಯ ಪೆರ್ಮಾಡಿರಾಯಂ ॥ ವ ॥ ಅನ್ತು ಕುನ್ತಳ.

ಮಹೀತಳ ಕಾಂತಾಕಾಂತಾನೆನಿಸಿದ ವೀರಪೆರ್ಮ್ಮಾಡಿರಾಯನ ಕಟ್ಟಿದಲಗೆನಿಸಿದ ತೇರಿದಾಳದ ವೀರಗೊಂಕ ಕ್ಷಿತೀಶ್ವರನನ್ವಯದೊಳೆನೆಬರಾನುಂ ಸಲೆ ನಿಜಜನನಿಗಂ ಜನಕರ್ಗ್ಗೆ ಪೂರ್ವ್ವ ಪುಣ್ಯವೆಂಬ ಕಳ್ಪಾವನಿಜನಕೆ ಫಲವುದಯಿಸುವಂ[೧].

ಇದು ಜಮಖಂಡಿಯಿಂದ ಪಶ್ಚಿಮಕ್ಕೆ ೨೯ ಕಿ.ಮೀ. ದೂರದಲ್ಲಿದ್ದು, ಚಾಲುಕ್ಯ ಚಕ್ರವರ್ತಿ ನಾಲ್ಕನೇ ವಿಕ್ರಮಾದಿತ್ಯನ ಸಾಮಾಂತನಾದ ಗೊಂಕದೇವ ಹಾಗೂ ಆರನೇ ವಿಕ್ರಮಾದಿತ್ಯನ ಮಾಂಡಲಿಕನಾಗಿದ್ದ ರಟ್ಟ ಕಾರ್ತವಿರ್ಯನ ರಾಜದಾನಿಯಾಗಿತ್ತೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ಶಾಸನಗಳಲ್ಲಿ ಈ ಊರನ್ನು '**ರಾಜಧಾನಿ ತೇರದಾಳ**' ಎಂದು ಉಲ್ಲೇಖಿಸಲಾಗಿದೆ.

ಈ ಊರಿನ ಪರಿಸರದಲ್ಲಿ ಕಡ್ಲಿಪಲಿ ಎಂಬ ಹೆಸರಿನ ಗುಡ್ಡದಲ್ಲಿ ಪ್ರಾಗೈತಿಹಾಸಿಕ ನೆಲೆಗಳಲ್ಲಿ ಬೃಹತ ಶಿಲಾಗೋರಿ ಕಾಣುತ್ತೇವೆ. ಊರಿನ ಪಶ್ಚಿಮಕ್ಕೆ ಐದು ಕಿ.ಮೀ. ದೂರದಲ್ಲಿ ಬೂದಿಮಣ್ಣು ಹಾಗೂ ಇತರ ಜನವಸತಿಯ ನೆಲಗಟ್ಟುಗಳು ಇದ್ದ ಅವಶೇಷಗಳು ತುಂಬಿರುವ ದಿಬ್ಬವಿದೆ. ಉತ್ತರ ಗುಡ್ಡ ಪ್ರದೇಶದಲ್ಲಿ ಸಮೀಪದ ಹನಗಂಡಿ, ಹಳಿಂಗಳಿ, ಮದನಮಟ್ಟಿ ಮತ್ತು ಆಸಂಗಿ ಪರಿಸರದೊಳಗೆ ನೂರಾರು ಬೃಹತ ಶಿಲಾಗೋರಿಗಳು ಐದು ಕಿ.ಮೀ. ಪ್ರದೇಶದಲ್ಲಿ ಕಂಡು ಬರುತ್ತವೆ. ತೇರದಾಳವು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಪ್ರಮುಖ ಜೈನ ಕೇಂದ್ರವಾಗಿತ್ತೆಂದು ತಿಳಿದು ಬರುತ್ತದೆ. ಇಲ್ಲಿರುವ ನೇಮಿನಾಥ ಬಸದಿಯ ಹೊರಗಿನ ಮಂಟಪದ ಗೋಡೆಯಲ್ಲಿರುವ ಆರನೇ ವಿಕ್ರಮಾದಿತ್ಯನ ಕ್ರಿ.ಶ. ೧೧೨೫ರ ಶಾಸನವು ಆತನ ಮಾಂಡಲಿಕಾನಾಗಿದ್ದ ರಟ್ಟ ಕಾರ್ತವೀರ್ಯನು ಆಳುತ್ತದ್ದಾಗ ರಾಜಧಾನಿ ತೇರದಾಳದ ಗೊಂಕದೇವರಸನು ಇಲ್ಲಿ ಗೊಂಕ ಜಿನಾಲಯ ಮತ್ತು ನೇಮಿನಾಥ ತೀರ್ಥಂಕರರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದುದರ ಬಗ್ಗೆ ಉಲ್ಲೇಖಿಸಿರುದನ್ನು ಕಾಣುತ್ತೇವೆ[೨]. ಈ ಶಾಸನವು ಅಯ್ಯಾಹೊಳೆ ಐನೂರ್ವರ ಧರ್ಮಮನೋಭಾವನೆ ಮತ್ತು ತೇರದಾಳದ ಆರ್ಥಿಕ ಸಮೃದ್ಧಿಯ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆ[೩].

ಯಾದವ ದೊರೆ ಸಿಂಘಣನ ಆಳ್ವಿಕೆಗೆ ಸಂಬಂಧಿಸಿದ ಕ್ರಿ.ಶ. ೧೧೮೧ರ ಕಾಲದ ಶಾಸನವೊಂದು ತೇರದಾಳ ಗ್ರಾಮದ ನೇಮಿನಾಥ ಬಸದಿಯ ಹೊರಗಿನ ಮಂಟಪದ ಗೋಡೆಯ ಮೇಲೆ ಲಭ್ಯವಾಗಿದ್ದು ಶಾಸನದಲ್ಲಿ ಸಿಂಘಣನ ದಂಡನಾಯಕನಾದ ತೇಜುಗಿ ಮತ್ತು ಅವನ ಮಗನಾದ ಭಾಯಿದೇವನ ವರ್ಣನೆಯಿಂದ ಆರಂಭವಾಗುತ್ತದೆ. ಈ ಭಾಯಿದೇವನು ಕೊಂಡಿ ೩೦೦೦ ಕೊಂಡಾಡುವ ಹಾಗೆ ಆಳ್ವಿಕೆಯನ್ನಡೆಸುತ್ತಿದ್ದ. ಈ ಭಾಯಿದೇವ ದಂಡನಾಥನಿಗೆ

ರಾಯದಂಡನಾಥ ಗಂಡಪೆಂಡಾರಂ ಎಂಬ ವಿಶೇಷ ಬಿರುದು ಇತ್ತು. ಈ ಭಾಯಿದೇವನು ತೇರದಾಳದ ಗೊಂಕಜಿನಾಲಯಕ್ಕೆ ಹಿಂದೆ ಗೊಂಕರಸನು ಬಿಟ್ಟದ್ದ ೭೨ ಮತ್ತರಿನ ಉತ್ತರಕ್ಕೆ ಬಡಗಲ ಕೋಲಲ್ಲಿ ೩೬ ಮತ್ತುರು ಭೂಮಿಯನ್ನು ದಾನವಾಗಿ ನೀಡಿರುತ್ತಾರೆ. ಇದರೊಂದಿಗೆ ಅಂಗಡಿಗೇರೆಯಲ್ಲಿ ನಿವೇಶನವೊಂದನ್ನು ನೀಡಿದಂತೆ ಉಲ್ಲೇಖವಿದೆ[೪].

ಕ್ರಿ.ಶ. ೧೭೪೮ರ ಕಾಲದ ತೇರದಾಳ ಶಾಸನವೊಂದು ನೇಮಿಜಿನೇಂದ್ರ ವಿಗ್ರಹದ ಪಾದ ಪೀಠದಲ್ಲಿ ಬರೆಯಲ್ಪಟ್ಟದ್ದು.

ಶ್ರೀ ಮನ್ನೇಮಿಜಿನೇಂದ್ರನ ಪ್ರತಿಮೆಯಂ ಸಮ್ಯಕ್ತ್ವ ಚೂಡಾಮಣಿಗಳಾದಂ
ಥಾ ಶ್ರೀಮತ್ತೇರಿದಳದ ದೇಶಾಯಿ ಸತ್ಯೌವ್ವ ತತ್ಪುತ್ರ ಜಕ್ಕಪ್ಪ ಸಹವಾಗಿ
ಮಾಡಿಸಿ ಶ್ರೀ ಗೊಂಕಜಿನಾಲಯದಲ್ಲಿ ಪ್ರತಿಷ್ಠೆಯನ್ನು ಮಾಡಿದ ಶ
ಕವರ್ಷ। ೧೬೭೦ ವಿಭವನಾಮ ಸಂವತ್ಸರ ಮಾರ್ಗ್ಗಶಿರದ
ಶುಕ್ಲ ದಶಮಿ ಶುಕ್ರವಾರದಲ್ಲಿ ಭದ್ರಂ ಭೂಯಾತ್ ಶ್ರೀ ಶ್ರೀ ಶ್ರೀ.

ಶಾಸನದಲ್ಲಿ ಕಾಲವನ್ನು ಶಕವರ್ಷ ೧೬೭೦, ವಿಭಜ, ಮಾರ್ಗಶಿರ, ಶು ದಶಮಿ ಎಂದಿದ್ದು ಇದು ಕ್ರಿ.ಶ. ೧೮-೧೧-೧೭೪೮ ಕ್ಕೆ ಸರಿಹೊಂದುತ್ತದೆ.

ತೇರದಾಳದ ದೇಸಾಯಿ ಸತ್ಯೌವ್ವ ಮತ್ತು ಆಕೆಯ ಮಗನಾದ ಜಕ್ಕಪ್ಪ ಸೇರಿ ಗೊಂಕ ಜಿನಾಲಯದಲ್ಲಿ ನೇಮಿನಾಥ ಸ್ವಾಮಿ ತೀರ್ಥಂಕರಿನ ಮೂರ್ತಿ ಪ್ರತಿಷ್ಠಾಪನೆ ಮಾಡಿಸಿದುದನ್ನು ತಿಳಿಸುತ್ತದೆ[೫].

ಹೀಗೆ ಹಲವು ವೈಭಗಳಿಂದ ಮೆರೆದ ತೇರದಾಳ ಗ್ರಾಮದ ಐತಿಹಾಸಿಕ ಹಿನ್ನೆಲೆಯನ್ನು ತಿಳಿದುಕೊಳ್ಳಲು ತೇರದಾಳ ಗ್ರಾಮದ ಪ್ರಮುಖ ಶಾಸನಗಳು ಅಧ್ಯಯನಕ್ಕೆ ಸಹಾಯಕಾರಿಯಾಗಿ ಬರುವಂತೆ ತೇರದಾಳದ ಇತಿಹಾಸ ನಿರೂಪಿಸುವಲ್ಲಿ ಅದರ ಭೌಗೋಳಿಕ ಅಂಶಗಳ ಪಾತ್ರವೂ ಪ್ರಮುಖವಾಗಿದೆ.

೨.೧ ಭೌಗೋಳಿಕ ಲಕ್ಷಣಗಳು :

ಪ್ರಾಚೀನ ಐತಿಹಾಸಿಕ ನಗರವಾದ ತೇರದಾಳ ಸಾವಿರಾರೂ ವರ್ಷಗಳ ಹಿರಿಮೆ, ಗರಿಮೆ ಗತವೈಭವಗಳ ಇತಿಹಾಸವನ್ನು ಹೊಂದಿದೆ. ಯಾವುದೇ ಒಂದು ಸ್ಥಳದ ಅಥವಾ ದೇಶದ ಸಮಗ್ರವಾದ ಚರಿತ್ರೆಯನ್ನು ತಿಳಿಯಬೇಕಾದರೆ ಭೌಗೋಳಿಕ ಲಕ್ಷಣಗಳ ಬಗ್ಗೆ ಮೊದಲು ತಿಳಿಯುವದು ತುಂಬಾ ಮಹತ್ವವಾಗಿದೆ. **"ಮಾನವ ನಿಸರ್ಗದ ಶಿಶು" "ಇತಿಹಾಸ & ಭೂಗೋಳ**

ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ" "ಇತಿಹಾಸವೆಂಬ ನಾಟಕ ಪ್ರದರ್ಶನಕ್ಕೆ ರಂಗಸಜ್ಜಿಕೆಯುಂತಿರುವದೇ ಭೂಗೋಳ" ಈ ದಿಸೆಯಲ್ಲಿ ತೇರದಾಳ ಐತಿಹಾಸಿಕ ಹಿನ್ನಲೆ ಪ್ರತಿಯೊಂದು ಜನಾಂಗದ ಜೀವನವು ಆಯಾ ಭೌಗೋಳಿಕ ಅಂಶಗಳಾದ ಬೆಟ್ಟ-ಗುಡ್ಡ, ನದಿ-ಸರೋವರ, ಪರ್ವತ, ಹವಾಗುಣ, ಅರಣ್ಯಗಳು, ಪೃಥ್ವಿಯ ಮೇಲೆ ಆ ಪ್ರದೇಶ ಸ್ಥಾನ, ಅದರ ಆಕಾರ ಮತ್ತು ವಿಸ್ತಾರ ಮುಂತಾದ ನೈಸರ್ಗಿಕ ಸಂಪನ್ಮೂಲಗಳನ್ನು ಅವಲಂಬಿಸಿರುತ್ತದೆ. ಅಂತೆಯೇ ಆಡಳಿತದ ಅನುಕೂಲಕ್ಕಾಗಿ ವಿಭಾಗ ಅಥವಾ ಕಂಪಣಗಳನ್ನು ಮಾಡುವಾಗ ಪ್ರಾಚೀನ ಕಾಲದಿಂದ ಇಂದಿನವರೆಗೂ ನೈಸರ್ಗಿಕ ಅಂಶಗಳನ್ನು ಅವಲಂಬಿಸಿರುವುದು ಕಂಡು ಬರುತ್ತದೆ. ಈ ಮೇಲಿನ ಭೌಗೋಳಿಕ ಅಂಶಗಳಿಗೆ ತೇರದಾಳ ಗ್ರಾಮವು ಹೊರತಾಗಿಲ್ಲವೆಂದು ಮೂಲಾಧಾರಗಳಿಂದ ತಿಳಿಯಬಹುದು.

ಜಂಭೂ ದ್ವೀಪದ ಭರತ ಕ್ಷೇತ್ರದಲ್ಲಿನ ಕುಂತಳ ನಾಡಿನಲ್ಲಿ ಬರುವ ಕೂಂಡಿನಾಡು ೩೦೦೦ ನಾಡಿನಲ್ಲಿ ಬರುವ ಕೂಂಡಿನಾಡು ೩೦೦೦ ನಾಡಿನಲ್ಲಿ ತೇರದಾಳ ಸೇರಿದಂತೆ -೧೨ ಕಂಪಣದ ಭೌಗೋಳಿಕ ವರ್ಣನೆ ಈ ರೀತಿಯಾಗಿದೆ.

ನಿರುಪಮ ಗನ್ಧಶಾಲಿ ವನದಿಂ ಬ

ನದಿಂ ಕೊಳಿದಿಂ ತಟಾಕದಿಂ ಗಿರಿವನ ತೋಯ ದುರ್ಗ ಕುಳದಿಂದಗಳಿಂ ಬುಧ
ಮಾಧವಾರ್ಕ್ಕ ಶಂಕರ ಜಿನ ಸದುಮದಿಂ ವಿಫ(ಪ)ಣಿ ಮಾರ್ಗದಿನೊಪ್ಪುವ
ತೇರಿದಾಳ ಪಂನೆರಡಱ ಚೆಲ್ವನೇಯ ಪೊಗಳಲುಕಜ

ನುಂ ನೆಱಯುಂ ದರಿತ್ರಿಯೊಳು[1].

ಅಂದರೆ ಈ ಗ್ರಾಮವೂ ಕೂಂಡಿನಾಡು ೩೦೦೦ ನಾಡಿನಲ್ಲಿ ಪ್ರಮುಖ ವ್ಯಾಪಾರಿ ಕೇಂದ್ರಗಳಲ್ಲಿ ಒಂದಾಗಿದ್ದು ಅದು ಗಿರಿ, ವನ, ದುರ್ಗಗಳಿಂದ, ಕೆರೆ, ಬಾವಿಗಳಿಂದ ಶೋಭಿಸುತ್ತಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಇಂತಹ ಅತಿಶಯ ಭೌಗೋಳಿಕ ಸಂಪತ್ತನ್ನು ಹೊಂದಿದ ತೇರದಾಳ ಗ್ರಾಮದಲ್ಲಿಯೇ ಅದರ ಕುರುಹಗಳು ಸಹ ಸ್ಪಷ್ಟವಾಗಿದ್ದು. ೧೨ನೇ ಶತಮಾನದ ಪ್ರಾರಂಭಿಕ ಭಾಗದಲ್ಲಿಯೇ ತೇರದಾಳ - ೧೨ ಕಂಪಣ ಎಂದು ಪ್ರಸಿದ್ಧವಾದ ಪ್ರಾಚೀನ ಪಟ್ಟಣ ತೇರದಾಳ ಗ್ರಾಮವೂ ಜಮಖಂಡಿ ತಾಲೂಕಿನಿಂದ ೨೯ ಕಿ.ಮೀ. ಅಂತರದಲ್ಲಿ ಪಶ್ಚಿಮ ದಿಕ್ಕಿನಲ್ಲಿದೆ. ಸಹಜವಾಗಿ ಬೆಟ್ಟ-ಗುಡ್ಡ, ನದಿ-ಸರೋಹರ, ಕೆರೆಗಳಿಂದ ನಿಸರ್ಗ ಸೌಂದರ್ಯದಿಂದ ಹಾಗೂ ಕೋಟೆಗಳಿಂದ ಆವರ್ತವಾಗಿರುವ ನಿಸರ್ಗದ ಮಡಿಲಲ್ಲಿ ರಮ್ಯ ತಾಣದಲ್ಲಿ ನೆಲೆ ನಿಂತದೆ.

೨.೨ ಪ್ರಾಚೀನ ತೇರದಾಳದ ವರ್ಣನೆ :

ಐತಿಹಾಸಿಕವಾಗಿ ತೇರದಾಳದ ಪ್ರಾಚೀನತೆಯನ್ನು ಕ್ರಿ.ಶ. ೧೨ನೆಯ ಶತಮಾನದ ಪ್ರಾರಂಭಿಕ ಭಾಗದಿಂದಲೇ ಗುರುತಿಸಲಾಗಿದೆ ಎಂದು ಈ ಮೊದಲು ತಿಳಿಯಪಡಿಸಲಾಗಿದ್ದರೂ ಇದರ ಪ್ರಾಚೀನತೆಯು ಪ್ರಾಗೈತಿಹಾಸಿಕ ಕಾಲದಿಂದಲೂ ಸಾಗಿಬಂದಿತ್ತೆಂಬುದಕ್ಕೆ ಆ ಪ್ರದೇಶದಲ್ಲಿ ದೊರೆತ ಸಾವಿರಾರೂ ಬೃಹತ ಶಿಲಾಯುಗದ ಸಂಸ್ಕೃತೀಯ ಅವಶೇಷಗಳು ನಿದರ್ಶನವಾಗಿವೆ.

ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನಲ್ಲಿರುವ ದಕ್ಷಿಣದ ಕೊನೆಯ ಗ್ರಾಮ ತೇರದಾಳ ಪ್ರಾರಂಭದಿಂದಲೂ ಪುಣ್ಯ ನಗರ ಹಾಗೂ ವಿವಿಧ ಧರ್ಮಗಳ ಧಾರ್ಮಿಕ ಕೇಂದ್ರವಾಗಿದ್ದು ಶಾಸನಗಳಲ್ಲಿ ಇದಕ್ಕೆ 'ತೇರದಾಳ' ವನ್ನು 'ತೆರದಾಳ' 'ತೇರಿದಾಳ'ವೆಂದು ಕರೆಯಲಾಗುತ್ತಿದ್ದು. ಇದು ಕೂಂಡಿನಾಡು–೩೦೦೦ ನಾಡಿನಲ್ಲಿ ಹನ್ನೆರಡು ಗ್ರಾಮಗಳನ್ನೊಳಗೊಂಡ ಒಂದು ಚಿಕ್ಕ ಆಡಳಿತ ವಿಭಾಗವಾಗಿತ್ತೆಂದು ಅದಕ್ಕೆ 'ಕಂಪಣ' ಎಂದು ಕರೆಯುತ್ತಿದ್ದರೆಂದು ಕ್ರಿ.ಶ. ೧೧೨೩ರ ಕಾಲದ ತೇರದಾಳ ಶಾಸನವೊಂದರಿಂದ ತಿಳಿದು ಬರುತ್ತದೆ[೬].

ಕ್ರಿ.ಶ. ೧೧೨೩ರ ಶಾಸನದಲ್ಲಿ ಈ ತೇರಿದಾಳ ೧೨ರ ವರ್ಣನೆ ಬಂದಿದೆ. ಕುಂತಳದೇಶದಲ್ಲಿದ್ದ ಕೂಂಡಿದೇಶದ ಒಂದು ಸಣ್ಣ ಭಾಗ ಈ ತೇರಿದಾಳ ೧೨ ಶಾಸನದಲ್ಲಿ ಈ ಊರನ್ನು

ನಿರುಪಮು ಗನ್ಧಶಾಲಿ ವನದಿಂ ಬ

ನದಿಂ ಕೊಳದಿಂ ತಟಾಕದಿಂ ಗಿರಿವನ ತೋಯ ದುರ್ಗ ಕುಳದಿಂದಗಳಿಂ ಬುಧ
ಮಾಧವಾರ್ಕ್ಕ ಶಂಕರ ಜಿನ ಸದುಮದಿಂ ವಿಫ(ಪ)ಣಿ ಮಾರ್ಗದಿನೊಪ್ಪವ
ತೇರಿದಾಳ ಪಂನೆರಡಱ ಚೆಲ್ವನೇಯ ಪೂಗಳಲುಕಜ

ನುಂ ನೆಱೆಯಂ ಧರಿತ್ರಿಯೊಳು ॥

ಧನದನವನೆಂದು ಕೊವಿಬಾಡುವ ತಂಮ ಕಾಚನನಿ
ಚಯುಂಗಳಿಂ ಮಣಿಗಣಂಗಳ ರಾಸಿಗಳಂ ನವೀನಮಣ್ಣನಬಹು
ವಸ್ತ್ರದಿಂ ಪಯಗಳಿಂ ವಹುಧಾನ್ಯಾದಿ ನೊಪ್ಪಿತೋರ್ಪ ನಚ್ಚಿನ
ಪರದರ್ಕ್ಕಳಿಂ ಭರಿತವಾಗಿ ಕರಂ ಸೊಗಯಿಕ್ಕು ತತ್ಪುರಂ
ಎಂದು ಶಾಸನ ತಿಳಿಸುತ್ತದೆ[೭].

ತೇರದಾಳ ಗ್ರಾಮವೂ ಕೂಂಡಿನಾಡು ಮೂಸಾಸುರ ನಾಡಿನಲ್ಲಿ ಪ್ರಖ್ಯಾತವಾದ ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದು. ಅದು ಗಿರಿ-ದುರ್ಗಗಳಿಂದ, ಕೆರೆಭಾವಿಗಳಿಂದ, ಶ್ರೀಮಂತರಿಂದ, ವ್ಯಾಪಾರಿಗಳಿಂದ ಹೊಸ ವಸ್ತ್ರಗಳನ್ನು ಧರಿಸುವವರಿಂದ, ಹಾಲು ಹೈನದಿಂದ, ಧ್ಯಾನ ಸಂಪತ್ತಿನಿಂದಲೂ ಶೋಭಿಸುತ್ತಿತ್ತು ಎಂದು ಕ್ರಿ.ಶ. ೧೧೨೩ರ ಕಾಲದ ಮೇಲಿನ ಶಾಸನದಿಂದ ತಿಳಿದು ಬರುತ್ತದೆ.

ಈ ತೆರನಾಗಿ ಬೃಹತ ಶಿಲಾಯುಗದ ಸಂಸ್ಕೃತಿಯಿಂದ ಹಿಡಿದು ತೇರದಾಳ ಗ್ರಾಮದ ಪ್ರಾಚೀನತೆಯನ್ನು ಕುರಿತು ತಿಳಿದು ಕೊಳ್ಳಬಹುದಾಗಿದೆ.

ಕೆಳವರ್ಣ ಸ್ಥಾನ ಸರ್ವೆನಂ : ೪೭ಪಿ/೩ ಪ್ರಕಾರ ಉತ್ತರ ಅಕ್ಷಾಂಶ ೧೬° ೨೯ ರಿಂದ ೧೬° ೩೧ ಮೀನಿಟ (ಹದಿನಾರು ಡಿಗ್ರಿ ಇಪ್ಪತ್ತರೊಂಬತ್ತು ಮೀನಿಟ, ಹದಿನಾರು ಡಿಗ್ರಿ ಮೂವತ್ತೊಂದು ಮೀನಿಟ) ಮತ್ತು ಪೂರ್ವ ರೇಖಾಂಶ ೭೫° ೨ ರಿಂದ ೭೫° ೪ (ಎಪ್ಪತ್ತೈದು ಡಿಗ್ರಿ ಎರಡು ಮೀನಿಟ, ಎಪ್ಪತ್ತೈದು ಡಿಗ್ರಿ ನಾಲ್ಕು ಮೀನಿಟ) ಮಧ್ಯದಲ್ಲಿ ಹರಡಿದೆ. ಇದು ಸಮುದ್ರ ಮಟ್ಟದಿಂದ ಸರಾಸರಿ ೫೪೬ ಮೀಟರ ಎತ್ತರವಿದೆ. ವಾರ್ಷಿಕ ಮಳೆಯ ಸರಾಸರಿ ಪ್ರಮಾಣ ೫೦೦ ಮಿ. ಮೀ. ಆಗುತ್ತದೆ. ಇಂದಿನ ಪ್ರಾಚೀನ ಐತಿಹಾಸಿಕ ತೇರದಾಳ ಒಟ್ಟು ಭೌಗೋಳಿಕ ವಿಸ್ತೀರ್ಣ ಸುಮಾರು ೫೨೫ ಚ.ಕಿ.ಮೀ. ವಿಸ್ತಾರವನ್ನು ಹೊಂದಿದೆ. ೨೦೧೧ರ ಪ್ರಕಾರ ೨೬,೧೫೩ ರಷ್ಟು ಜನಸಂಖ್ಯೆಯನ್ನು ಹೊಂದಿದೆ.

ಪ್ರಾರಂಭದಿಂದಲೂ ತೇರದಾಳ ಗ್ರಾಮವು ಮಹಾಮೇಧಾವಿಗಳಿಂದ ಮುನಿಗಳಿಂದ (ಪಂಡಿತರಿಂದ) ಕನಕನಂದಿ ಪಂಡಿತ, ಶ್ರುತ ಕೀರ್ತಿ ತ್ರೈವಿದ್ಯಬ್ರತಿ, ಚಂದ್ರಕೀರ್ತಿ ಪಂಡಿತ, ಪ್ರಭಾಚಂದ್ರ ಪಂಡಿತ, ತ್ರೈವದ್ಯೆ ವಿದ್ಯಾಧರ ಮಹಾಜ್ಞಾನಿಗಳಾದ ಶ್ರೀ ಅಲ್ಲಮ ಪ್ರಭು ದೇವರು, ಕವಿಗಳಾದ ಮಗಿಯ ನರೇಂದ್ರರಂತಹ ಹಾಗೂ ತುಕಾರಾಮರಂತಹ ಹಾಡುಗಾರರಿಂದ ಶೋಭಿಸಿದ ಪುಣ್ಯ ಭೂಮಿಯಾಗಿದೆ. ಈಗಲೂ ಕೂಡಾ ಐತಿಹಾಸಿಕ ತೇರದಾಳ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಪದವಿ ಪೂರ್ವ ವಿದ್ಯಾಲಯ, ಪದವಿಯ ಮಹಾವಿದ್ಯಾಲಯ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆ, ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ವಿವಿಧ ಭಾಷೆಯಲ್ಲಿ ಶಿಕ್ಷಣ ಪ್ರಸಾರವನ್ನು ಕೈಗೊಳ್ಳುತ್ತಿವೆ. ಅಲ್ಲದೇ ಈ ಐತಿಹಾಸಿಕ ತೇರದಾಳ ಖಾಸಗಿ ವಾಹನಗಳ ಸೌಲಭ್ಯ ಹಾಗೂ ಸರಕಾರಿ ಬಸ್ಸುಗಳ ಸೌಲಭ್ಯವನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿದೆ.

: ಅಡಿ ಟಿಪ್ಪಣಿಗಳು :

೧) ಕೆ.ಇನ್ಸ ಸಂಪುಟ ೫. ಸಂ–೨೧ ತೇರದಾಳ ತಾ॥ ಜಮಖಂಡಿ ಕ್ರಿ.ಶ. ೧೧೨೩ ರ ಶಾಸನ ಮತ್ತು ಕಟ್ಟಿ ವೆಂಕಟರಂಗೂ ಅನು : ಮುಂಬಯಿ ಇಲಾಖೆಗೆ ಸೇರಿದ ಗ್ಯಾಝೆಟಿರಿಯರ್, ಪುಟ ಸಂಖ್ಯೆ – ೬೩೩.

೨) ಕರ್ನಾಟಕ ರಾಜ್ಯ ಗ್ಯಾಝೆಟಿರಿಯರ್ – ಪುಟ ಸಂಖ್ಯೆ – ೧೯೧ ವಿಜಾಪೂರ ಜಿಲ್ಲೆ ಬಾಗಲಕೋಟ ಜಿಲ್ಲೆಯೂ ಸೇರಿದಂತೆ ಡಾ॥ ಆರ್. ಮುನಿಸ್ವಾಮಿ.

೩) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ – ೯೧ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪) ಕೆ. ಇನ್ಸ ಸಂಪುಟ–೫ ಪುಟ ಸಂಖ್ಯೆ – ೯೮ ತೇರದಾಳ (ತಾ) ಜಮಖಂಡಿ. ಕ್ರಿ.ಶ. ೧೧೮೧ರ ಕಾಲದ ಶಾಸನ.

೫) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ – ೮೪ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ – ೮೪ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭) ಕೆ. ಇನ್ಸ ಸಂಪುಟ – ೫ ಪುಟ ಸಂಖ್ಯೆ – ೨೧, ತೇರದಾಳ (ತಾ) ಜಮಖಂಡಿ. ಕ್ರಿ. ಶ. ೧೧೨೩ ಕಾಲದ ಶಾಸನ.

೮) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ – ೮೪ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

* * *

ಅಧ್ಯಾಯ - ೩

ತೇರದಾಳ ಒಂದು ಪುರಾತತ್ವನೆಲೆ

ಅಧ್ಯಾಯ – ೩

ತೇರದಾಳ ಒಂದು ಪುರಾತತ್ವನೆಲೆ

ಈ ಭೂಮಿಯು ಸುಮಾರು ೪.೫ ಬಿಲಿಯನ್ ವರ್ಷಗಳ ಹಿಂದೆ ಜನ್ಮ ತಾಳಿದ್ದು ಎಂದು ವೈಜ್ಞಾನಿಕವಾಗಿ ಹೇಳಲ್ಪಟ್ಟಿದೆ. ಅದು ಹೇಗೆ? ಮತ್ತು ಯಾವುದರಿಂದ ಅಸ್ಥಿತ್ವವನ್ನು ಪಡೆಯಿತು ಎಂಬದು ಇನ್ನು ರಹಸ್ಯವಾಗಿಯೇ ಉಳಿದಿದೆ. ಚರಾಚರ ಜೀವ ಪ್ರಾಣಿಗಳು ವಾಸಿಸತಕ್ಕಂತಹ ವಾತಾವರಣವನ್ನು ಇದೊಂದೆ ವಸ್ತುಕಾಯ ಹೊಂದಿದೆ. ಭೂಮಿಯ ಮೇಲೆ ಜೀವಜಂತು ಮೊದಲು ಕಾಣಿಸಿಕೊಂಡವು. ಒಂದು ಕಾರ್ಯದ ಮೇಲೆ ಅಕಶೇರುಕಗಳು ಹುಟ್ಟಿಕೊಂಡವು. ಕಾಲಾನಂತರ ಜೀವ ಜಂತುಗಳಾದ ಬೃಹತ್ ಗಾತ್ರದ ಡೈನೋಸಾರ್ ನಂತಹ ಪ್ರಾಣಿಗಳು ಹುಟ್ಟಿಕೊಂಡು ನಂತರ ಇವೆಲ್ಲ ಒಂದಿಲ್ಲ ಒಂದು ಕಾರಣಕ್ಕೆ ಪ್ರಕೃತಿಯ ವಿಕೋಪದಡಿಯಲ್ಲಿ ನಶಿಸಿ ಹೋದವು. ಆನಂತರ ಕೋಟ್ಯಾಂತರ ವರ್ಷಗಳ ಅವಧಿಯಲ್ಲಿ ವಿವಿಧ ತೆರನಾದ ಹೊಸ ಜೀವಿಗಳು ಜನ್ಮ ತಾಳಿದವು. ವಿಕಾಸದ ಹಂತದಲ್ಲಿ ಐದು ಕೋಟಿ ವರ್ಷಗಳ ಹಿಂದೆ ಸಸ್ತನಿ ಪ್ರಾಣಿಗಳು ಮೂಡಿ ಬಂದವು. ಇಂತಹ ಸುದೀರ್ಘ ಕಾಲಮಾನವಿರುವ ಸುಮಾರು ಐದು ಲಕ್ಷ ವರ್ಷಗಳ ಹಿಂದೆ ಚಿಂಪಾಜಿ, ಗೋರಿಲ್ಲಾ, ಮಂಗ ಇವೇ ಹೋಲುವ ಮನುಷ್ಯ ಜನ್ಮ ತಾಳಿದ್ದು. ಮುಂತಾದ ವಿವಿಧ ರೂಪಗಳನ್ನು ಹೋಲುವ ಮನುಷ್ಯನ ಹುಟ್ಟಿನಿಂದ ಹಿಡಿದು ಬರವಣಿಗೆಯ ಕಾಲದವರೆಗಿನ ಕಾಲವನ್ನು **'ಇತಿಹಾಸ ಪೂರ್ವಕಾಲ'** ಎಂದು ಇತಿಹಾಸಕಾರರು ಕರೆದಿದ್ದಾರೆ.

ಸುಮಾರು ಕ್ರಿ. ಪೂ. ೨೦೦೦ ದಿಂದ ೮೦೦ ವರ್ಷ ಪೂರ್ವದಲ್ಲಿ ೮೦೦ ದಿಂದ ೨೦೦೦ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಸಗಣಿಯನ್ನು ಸುಟ್ಟ ಬೂದಿಯ ಗುಡ್ಡೆಗಳು ತೇರಿದಾಳದ ಸುತ್ತ-ಮುತ್ತ ದೊರೆಯುತ್ತವೆ. ಇವು ಅಂದಿನ ಯಾವುದೋ ಧಾರ್ಮಿಕ ವಿಧಿಗಾಗಿ ಬಳಸಲ್ಪಡುತ್ತಿರಬೇಕು. ಆದರೆ ಇಂದು ಇದನ್ನು ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದಲ್ಲಿ ಇದನ್ನು ವಿಭೂತಿ ಮಡ್ಡಿ ಎಂದು ಕರೆಯುತ್ತಾರೆ. ವಿಭೂತಿ ಮಡ್ಡಿಯ ಸೂತ್ತಲು ಭೂಮಿಯನ್ನು ಅಗೆದಾಗ ಅಲ್ಲಿ ಬೂದಿಯನ್ನು ಹೋಲುವ ಮಣ್ಣು ದೊರೆಯುವುದನ್ನು ನಾವು ಕಾಣುತ್ತೇವೆ.

ಇದನ್ನು ಪುರಾತತ್ವಶಾಸ್ತ್ರಜ್ಞರು ಮುಖ್ಯವಾಗಿ ಮೂರು ಭಾಗಗಳಲ್ಲಿ ವಿಂಗಡಿಸಿದ್ದಾರೆ.

೧)	ಹಳೆಯ ಶಿಲಾಯುಗ	:	೫೦.೦೦೦ – ೧೦.೦೦೦ ಕ್ರಿ.ಪೂ.
೨)	ಮಧ್ಯೆ ಶಿಲಾಯುಗ	:	೧೦.೦೦೦ – ೨.೦೦೦ ಕ್ರಿ.ಪೂ.
೩)	ನವ ಶಿಲಾಯುಗ	:	೨.೦೦೦ – ೧.೦೦೦ ಕ್ರಿ.ಪೂ.

[illegible]

೨.೧ ಹಳೆ ಶಿಲಾಯುಗ :

ಮಾನವನು ೫ ದಶಲಕ್ಷ ವರ್ಷಗಳಿಂದ ಏಳುತ್ತಾ ಬೀಳುತ್ತಾ ಈ ಒಂದು ಆಧುನಿಕ ಮಾನವನ ಹಂತಕ್ಕೆ ತಲುಪಿದ್ದನ್ನು ವಿಜ್ಞಾನ ಇತಿಹಾಸ ವಿಷಯಗಳಿಂದ ತಿಳಿಯಬಹುದು. ಮನುಷ್ಯ ತನ್ನ ಜೀವನದ ಮೊದಲ ಹಂತದಲ್ಲಿ ಬಂಡೆಗಳ ಆಸರೆಯಲ್ಲೊ ಅಥವಾ ಗುಹೆಗಳಲ್ಲೊ ವಾಸಿಸುತ್ತಿದ್ದ. ಗೆಡ್ಡೆ ಗೆಣಸುಗಳ ಜೊತೆಗೆ, ಬೇಟೆಯಿಂದಲೂ ಹಸಿ ಮೌಸವನ್ನು ತಿಂದು ಕಾಡಿನ ಪೊದರುಗಳಲ್ಲಿ ನೈಸರ್ಗಿಕವಾಗಿ ರಚಿತವಾದ ಗವಿಗಳಲ್ಲಿ ಲಕ್ಷಾಂತರ ರಾತ್ರಿಗಳನ್ನು ಕಳೆದಿದ್ದಾನೆ. ಭಯಂಕರವಾದ ಕಾಡು ಪ್ರಾಣಿಗಳಿಂದ ರಕ್ಷಣೆಯನ್ನು ಪಡೆಯಲು ಮೊದಲು ಬೆಂಕಿಯನ್ನು ಕಂಡುಹಿಡಿದಿದ್ದು ಮಾನವನ ಬೆಳವಣಿಗೆಯ ಹಂತದಲ್ಲಿ ಇದು ಪ್ರಮುಖ ಬೆಳವಣಿಗೆ ಘಟ್ಟವಾಗಿದೆ ಗೆಡ್ಡೆ-ಗೆಣಸುಗಳ ಜೊತೆಗೆ ಬೇಟೆಯಿಂದಲೂ ತನ್ನ ಆಹಾರವನ್ನು ಪೂರೈಸಿಕೊಳುತ್ತಿದ್ದರು. ಈ ಸಾಧನಗಳಲ್ಲಿ ಕಲ್ಲಿನ ಆಯುಧ ಅಧಿಕವಾಗಿ ಬಳಕೆಯಲ್ಲಿ ತಂದಿದ್ದ ಕಲ್ಲಿನ ಆಯುಧವನ್ನು ಮಾಡಿಕೊಂಡು ನೀರನ್ನು ಕುಡಿಯಲು ಬಂದ ಪ್ರಾಣಿಗಳನ್ನು ಅದೇ ಕಲ್ಲಿನ ಆಯುಧಗಳಿಂದ ಕೊಂದು ತನ್ನ ಆಹಾರವನ್ನಾಗಿ ಮಾಡಿಕೊಳ್ಳುತ್ತಿದ್ದನು. ಇದನ್ನೇ ಸಾಮಾನ್ಯವಾಗಿ **"ಹಳೆಯ ಶಿಲಾಯುಗ ಅಥವಾ ಪುರಾತನ ಶಿಲಾಯುಗ"**ವೆಂದು ಕರೆದಿರುವರು. ಈ ಆಧಿಮಾನವನು ಬಿಟ್ಟು ಹೊದ ಕಲ್ಲಿನ ಆಯುಧಗಳು ಮತ್ತು ಉಪಕರಣಗಳ ಆಧಾರದ ಮೇಲೆ ಅವನ ಜೀವನ ಕ್ರಮಗಳನ್ನು ತಿಳಿಯಬಹುದು. ಅವನು ಬಿಟ್ಟು ಹೊದ ವಸ್ತುಗಳು ದೊರೆತಿರುವುದು ತುಂಬಾ ಕಡಿಮೆ ಏಕೆಂದರೆ ಅವುಗಳಲ್ಲಿ ಕೆಲವು ಕಾಲಾನುಕ್ರಮದಲ್ಲಿ ನಶಿಸಿ ಹೋಗಿವೆ.

೨.೨ ಮಧ್ಯ ಶಿಲಾಯುಗ :

ಆಧಿಮಾನವ ತನ್ನ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಕ್ರೂರವಾದ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಮತ್ತು ಪ್ರಾಣಿಗಳನ್ನು ಬೇಟೆಯಾಡಲು ಸಣ್ಣ ಹರಿತವಾದ ಆಯುಧ ಸಲಕರಣೆಗಳನ್ನು ಬಳಸಲಾರಂಭಿಸಿದನು. ಈ ಆಯುಧ ಸಲಕರಣೆಗಳ ತಯಾರಿಕೆಯಲ್ಲಿ ಜಿಗುಟಾದ ಮರದ ಅಂಟನ್ನು ಉಪಯೋಗಿಸುತ್ತಿದ್ದನು ಅಲ್ಲದೇ ಸತ್ತ ಪ್ರಾಣಿಯ ಚರ್ಮವನ್ನು ಸರಿಯಾಗಿ ಬೇರ್ಪಡಿಸಲು ಸೂಕ್ಷ್ಮ ಶಿಲಾಯುಧಗಳನ್ನು ಬಳಸುತ್ತಿದ್ದನ್ನು ಆ ಚರ್ಮವನ್ನೇ ತನ್ನ ರಕ್ಷಣೆಗೆ ಉಪಯೋಗಿಸಿಕೊಳ್ಳುತ್ತಿದ್ದನು. ಈ ಒಂದು ಸಂಸ್ಕೃತಿಯ ಘಟ್ಟವನ್ನು **'ಸೂಕ್ಷ್ಮ ಶಿಲಾಯುಗ'** ಅಥವಾ ಮಧ್ಯ ಶಿಲಾಯುಗವೆಂದು ಇತಿಹಾಸಕಾರರು ಕರೆಯುತ್ತಾರೆ.

೨.೩ ನವ ಶಿಲಾಯುಗ :

ನವ ಶಿಲಾಯುಗದಲ್ಲಿ ಮಾನವನ ಬದುಕಿನ ಘಟ್ಟದಲ್ಲಿ ಒಂದು ಅದ್ಭುತವಾದ ಬೆಳವಣಿಗೆಯನ್ನು ಕಂಡದ್ದನ್ನು ನಾವು ಕಾಣುತ್ತೇವೆ. ನವ ಶಿಲಾಯುಗದಲ್ಲಿ ಮನುಷ್ಯ ಅಲೆಮಾರಿ ಜೀವನವನ್ನು ತೊರೆದು ಒಂದೇ ಸ್ಥಳದಲ್ಲಿ ನೆಲೆಸಲು ಆರಂಭಿಸಿದನು ಅಲ್ಲದೇ ದಿನಾಲು ಪ್ರಾಣಿಬೇಟೆ ನಿತ್ಯದ ಜೀವನದಲ್ಲಿ ತುಂಬಾ ಕಷ್ಟಕರವಾದುದೆಂದು ತಿಳಿದು, ಮಾನವ ಒಕ್ಕಲುತನ (ವ್ಯವಸಾಯ) ಪ್ರಾರಂಭಿಸಿದ್ದಂತು ತುಂಬಾ ಅತ್ಯದ್ಭುತವಾದದ್ದುನ್ನು ಹಾಗೂ ವ್ಯವಸಾಯದ ಕೆಲಸಕ್ಕಾಗಿ ಸಾಧು ಪ್ರಾಣಿಗಳ ಸಾಕಾಣಿಕೆ ಮಾಡಲು ಪ್ರಾರಂಭಿಸಿದನು. ವ್ಯವಸಾಯಕ್ಕೆ ಬೇಕಾದ ಸಲಕರಣೆಳನ್ನು ತಯಾರಿಸುವುದರ ಜೊತೆಗೆ ಬೇಸಿಗೆ, ಮಳೆ, ಚಳಿಗಾಲದಿಂದ ಸುರಕ್ಷತೆಯನ್ನು ಪಡೆಯಲು ಮನೆಗಳನ್ನು ಕಟ್ಟಿಕೊಂಡದ್ದಂತು ಅತೀ ವಿಸ್ಮಯಕಾರಿಯಾದದ್ದು. ತದನಂತರ ಲೋಹಗಳಿಂದ ಆಯುಧೋಪಕರಣಗಳನ್ನು ತಯಾರಿಸಲಾರಂಭಿಸಿದನು. ಇದನ್ನೇ ಹೆಚ್ಚಾಗಿ ಬಳಸುವುದನ್ನು ಪ್ರಾರಂಭಿಸಿದ ಮೇಲೆ **'ಲೋಹ ಸಂಸ್ಕೃತಿ'** ಎಂಬ ಘಟ್ಟ ಮಾನವನ ಇತಿಹಾಸದಲ್ಲಿ ಮಹತ್ವಪೂರ್ಣವಾಗಿ ಹೊಯಿತು. ಇದೇ ಒಂದು ಕಾಲದಲ್ಲಿ ಮಾನವನು ಬರವಣಿಗೆಯನ್ನು ಕಂಡುಕೊಂಡನು. ಆದರೆ ಇದನ್ನು ಇದುವರೆಗೆ ಅರ್ಥೈಸಲು ಸಾದ್ಯವಾಗಿಲ್ಲ.

ಇವುಗಳಲ್ಲದೇ ಸಿಕ್ಕಿರುವ ಕುರುಹುಗಳ ಸಾಮಾನ್ಯ ಗುಣ ಲಕ್ಷಣಗಳಿಂದ ಕೂಡಿದೆ.

೧) ತಾಮ್ರ ಶಿಲಾಯುಗ

೨) ಕಂಚಿನ ಶಿಲಾಯುಗ

೩) "ಬೃಹತ್ ಶಿಲಾಯುಗ"ವೆಂದು ವಿಭಾಗ ಮಾಡಿದ್ದನ್ನು ಕಾಣುತ್ತೇವೆ.

ಬೃಹತ್ ಶಿಲಾಯುಗ :

ಅಧ್ಯಯನದ ವಿಷಯ ಸ್ಥಳವಾದ **'ತೇರದಾಳ'**ವು ಕೂಡಾ ಬೃಹತ್ ಶಿಲಾಯುಗ ಸಂಸ್ಕೃತಿಯ ಲಕ್ಷಣಗಳನ್ನು ಹೊಂದಿದಂತಹ ಬಹು ಮಹತ್ವದ ಕೇಂದ್ರಗಳಲ್ಲಿ ಇದೂ ಕೂಡಾ ಒಂದು. ಆದ್ದರಿಂದ ಪುರಾತತ್ವದ ನೆಲೆಯ ಹಿನ್ನೆಲೆಯಾಗಿ ತೇರದಾಳವನ್ನು ನೋಡುವುದು ತುಂಬಾ ಸಮಂಜಸವಾದದ್ದು. ಮನುಷ್ಯನ ಕೊನೆಯ ಘಟ್ಟವೆಂದರೆ **'ಬೃಹತ್ ಶಿಲಾಯುಗ'** ಅಥವಾ **'ಕಬ್ಬಿಣಯುಗ'** ಎಂದು ಸಾಮಾನ್ಯವಾಗಿ ಕರೆಯುತ್ತಾರೆ. ಈ ಒಂದು ಸಂಸ್ಕೃತಿಯಲ್ಲಿ ಮಾನವನ **"ಇತಿಹಾಸದ ಪೂರ್ವ ಕಾಲದಲ್ಲಿ"** ಮತ್ತು **"ಇತಿಹಾಸ ಕಾಲ"** ದಲ್ಲೆರಡರಲ್ಲೂ ಇದರ ಸಾಮಾನ್ಯವಾದ ಲಕ್ಷಣಗಳು ಕಂಡು ಬರುತ್ತವೆ. ತೇರದಾಳ ಹಾಗೂ ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸುಮಾರು ೧೦೦೦ ಕ್ಕಿಂತ ಹೆಚ್ಚು ಶಿಲಾ ಗೋರಿಗಳು ಕಂಡುಬರುತ್ತವೆ. ಈ ಒಂದು ದೃಷ್ಟಿಯಲ್ಲಿ ಬೃಹತ್ ಶಿಲಾಯುಗದ ಸಾಮಾನ್ಯ ಲಕ್ಷಣ ಹಾಗೂ ಇಂತಹದೇ ಲಕ್ಷಣಗಳನ್ನು ಹೊಂದಿದ ಇತರ ನೆಲೆಗಳೊಂದಿಗೆ ನೋಡುವುದು ತುಂಬಾ ಉಪಯುಕ್ತವಾಗಿದೆ.

ಬಹೃತ ಶಿಲಾಯುಗವೆಂದರೆ : ಸತ್ತ ಮನುಷ್ಯನ ದೇಹ (ನಿರ್ಜೀವವಾದ ದೇಹ) ವನ್ನು ಹೂಳಿ, ಅದರ ಮೇಲೆ ಬೃಹತ ಶಿಲೆಗಳಿಂದ ಅದರ ಮೇಲೆ ಗೋರಿಗಳನ್ನು ಕಟ್ಟುವುದಕ್ಕೆ ಬೃಹತ್ ಶಿಲಾಯುಗದ ಗೋರಿ ಎನ್ನುವರು[೨].

ಮನಷ್ಯನು ಸತ್ತಾಗ ಸಮಾಧಿ ಮಾಡಿ ಆತನಿಗೆ ಬೇಕಾದ ಅತಿ ಅಗತ್ಯದ ದಿನ ನಿತ್ಯದ ವಸ್ತುಗಳನ್ನು ಆತನ ಜೊತೆಗೆ ಹೂಳುವುದು ಪ್ರಸ್ತುತ ಇಂದಿಗೂ ನಡೆದುಕೊಂಡು ಬಂದಿದೆ. ೩೫೦೦ ವರ್ಷಗಳ ಹಿಂದೆಯೂ ಇದು ಆಚರಣೆಯಲ್ಲಿತ್ತು. ಶವ ಸಂಸ್ಕಾರದ ಜೊತೆಗೆ ದಿನನಿತ್ಯದ ವಸ್ತುಗಳ ಜೊತೆಗೆ ತದನಂತರ ಇದರ ಮೇಲೆ ಗೋರಿಯನ್ನು ಬೃಹತ್ ಶಿಲೆಗಳಿಂದ ನಿರ್ಮಾಣ ಮಾಡುತ್ತಿದ್ದರು. ಸಾಮಾನ್ಯವಾಗಿ ಹಳ್ಳಿಯಲ್ಲಿ '**ಪಾಡವರ ಮನೆ, 'ಗಿಡ್ಡರ ಮನೆ ಗೂಡು**' ಇವೇ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಈ ಒಂದು ಸಂಸ್ಕೃತಿಯ ಕುರುಹುಗಳು ಜಗತ್ತಿನಾದ್ಯಂತ ನಾನಾ ಭಾಗಗಳಲ್ಲಿ ಕಂಡು ಬರುತ್ತವೆ. ನವ ಶಿಲಾಯುಗ ಕೊನೆಗೊಂಡ ನಂತರ ಅದರ ಜೊತೆಗೆ ಈ ಸಂಸ್ಕೃತಿಯು ಪ್ರಾರಂಭವಾಯಿತೆಂಬುದು ಆಧಾರಗಳಿಂದ ತಿಳಿಯಬಹುದು. ದಕ್ಷಿಣ ಭಾರತದ ಮಟ್ಟಿಗೆ ಮೊಟ್ಟ ಮೊದಲು ಬೃಹತ್ ಶಿಲಾಯುಗದ ಗೋರಿಗಳನ್ನು ಕಂಡುಕೊಂಡದ್ದ. ಕೇರಳ ರಾಜ್ಯದ ಬವಿಗೆಟನ್ ಎಂಬಲ್ಲಿ[೨] ಅದೇ ರೀತಿಯಾಗಿ ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಈ ಸಂಸ್ಕೃತೀಯ ಕುರುಹುಗಳನ್ನು ಪತ್ತೆಹಚ್ಚಿದವರೆಂದರೆ ಶ್ರೀಯುತ ಮೇಡೋಸ್ ಟೇಲರ್ ಇನೊಬ್ಬರಾದ ಬ್ರಿಟಿಷ ಅಧಿಕಾರಿಯಾಗಿದ್ದ ಕ್ರಿ.ಶ. ೧೮೫೧-೧೮೫೩ ಗುಲ್ಬರ್ಗಾ, ರಾಯಚೂರ, ಬಳ್ಳಾರಿ ಜಿಲ್ಲೆಗಳಲ್ಲಿ ಈ ಕುರುಹುಗಳನ್ನು ಪತ್ತೆ ಹಚ್ಚಿದರು. ಈ ಸಂಸ್ಕೃತಿಯ ಮೇಲೆ ವಿಶೇಷ ಬೆಳಕನ್ನು ಚಲ್ಲಿದವರೆಂದರೆ ಕಾಂಗ್ರೆವ್, ಮೆಕೆನ್ಜೆ, ಅಲೆಗ್ಝಾಂಡರ್, ರೇ ಡಾ|| ವಿ. ಡಿ. ಕೃಷ್ಣಸ್ವಾಮೀ, ಶ್ರೀ ಎಮ್. ಎಚ್. ಕೃಷ್ಣ ಮುಂತಾದ ಇತಿಹಾಸಕಾರರು. ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಉತ್ಖನನಕ್ಕೆ ಒಳಪಟ್ಟ ಇಂತಹ ಸಂಸ್ಕೃತಿಯ ನೆಲೆಯೆಂದರೆ **"ಬ್ರಹ್ಮಗಿರಿ"**. ಡಾ|| ಎಮ್. ಎಚ್. ಕೃಷ್ಣರವರಿಂದ ಉತ್ಖನನವಾಗಲ್ಪಟ್ಟ ಈ ನೆಲೆ ಪ್ರಾಚೀನ ಕಾಲಮಾನದಿಂದಲೂ ಹತ್ತು ಹಲವಾರು ಹಂತಗಳಿಂದ ಇಂದಿಗೂ ಗುರುತಿಸಲ್ಪಡುತ್ತದೆ. ಇದು ನವಶಿಲಾಯುಗ - ಬೃಹತ್ ಶಿಲಾಯುಗ - ಹಾಗೂ ಇತಿಹಾಸ ಕಾಲದ ಕುರುಹುಗಳನ್ನು ಹೊಂದಿರುವ ಪ್ರಮುಖ ನೆಲೆಯಾಗಿದೆ. ಪ್ರಸುತ್ತ ಅಧ್ಯಯನದ ನೆಲೆಯಾದ '**ಪ್ರಾಚೀನ ಐತಿಹಾಸಿಕ ತೇರದಾಳ**' ನೆಲೆಯ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿದವರೆಂದರೆ **"ಕನ್ನಡ ಸಂಶೋಧನ ಕೇಂದ್ರ"** ಧಾರವಾಡದ ಡಾ|| ಎ. ಎಮ್. ಅಣ್ಣಿಗೇರಿಯವರು ಹಾಗೂ ವಿಧ್ವಾಂಸರಾದ ಪ್ರೊ. ಅ. ಸುಂದರರವರು, ತೇರದಾಳ ಹಾಗೂ ಅದರ ಸುತ್ತಲಿನಲ್ಲಿ ಸಿಗುವ ಈ ಗೋರಿಗಳು ಗ್ರೀಕ್ ಅಥವಾ ಲ್ಯಾಟಿನ್ ಮಾದರಿಯ ಪಾಸೆಜ್ ಜೆಂಬರಗಳನ್ನು ಹೊಂದಿದ್ದು ವಿಶೇಷ ಎಂದು ತೋರಿಸಿ ಕೊಟ್ಟಿದ್ದಾರೆ.

ಕಾಲಮಾನ :

ಬೃಹತ್ ಶಿಲಾಯುಗದ ಸಂಸ್ಕೃತಿಯ ಕಾಲಮಾನವನ್ನು ಹಲವಾರು ವಿದ್ವಾಂಸರು ನಿರ್ಧಿಷ್ಟಪಡಿಸಲು ಪ್ರಯತ್ನಿಸಿದ್ದಾರೆ. ಇದರ ಕಾಲಮಾನವನ್ನು ಋಗ್ವೇದ, ಶತಪತ, ಬ್ರಾಹ್ಮಣ ಮತ್ತು ಸಂಗಮ ಸಾಹಿತ್ಯಕ ಆಧಾರಗಳಲ್ಲಿ ಪ್ರಮುಖವಾಗಿ ಗುರುತಿಸಿದ್ದಾರೆ.

ಅನ್ವೇಷಣೆ ಮತ್ತು ಉತ್ಖನನಗಳಲ್ಲಿ ಸಿಕ್ಕಂತ ನಿರ್ಧಿಷ್ಟವಾದ ಆಧಾರಗಳಿಂದ ಪ್ರಾಚ್ಯ ವಿದ್ವಾಂಸರು ಇದರ ಕಾಲಮಾನವನ್ನು ಗುರುತಿಸುವಲ್ಲಿ ಸಾಕಷ್ಟು ಪ್ರಯತ್ನಿಸಿದ್ದಾರೆ. ಡಾ॥ ಎಮ್. ಎಚ್. ಕೃಷ್ಣರವರು ಇದರ ಕಾಲವನ್ನು ಕ್ರಿ. ಪೂ. ೨೫೦೦–೧೦೦೦ ಎಂದು ಹೇಳಿದ್ದಾರೆ.

ಸರ್ ಮಾರ್ಟಿವರ್ ವೀಲ್‌ರವರು ಬ್ರಹ್ಮಗಿರಿಯ ಉತ್ಕನದಲ್ಲಿ ಸಿಕ್ಕಂತಹ ಕುರುಹುಗಳ ಮೇಲಿಂದ ಇದರ ಕಾಲವನ್ನು ಕ್ರಿ. ಪೂ. ೨ನೇ ಶತಮಾನದಿಂದ ಕ್ರಿ. ಶ. ೧ ನೇ ಶತಮಾನವೆಂದು ವಿವರಿಸಿದ್ದಾರೆ.

ಉತ್ತರ ಕರ್ನಾಟಕದಲ್ಲಿ ದೊರೆತ್ತಿರುವ ವಿವಿಧ ಶಿಲೆಗಳ ಪ್ರಕಾರಗಳ ಆಧಾರದ ಮೇಲೆ ಪ್ರಮುಖವಾಗಿ ಎರಡು ಭಾಗಗಳಲ್ಲಿ ಈ ಸಂಸ್ಕೃತಿಯ ಹಂಚಿಕೆ ಮತ್ತು ವಿಸ್ತಾರವನ್ನು ವಿದ್ವಾಂಸರು ಮಾಡಿದ್ದಾರೆ. ಅವುಗಳಲ್ಲಿ –

೧) **ಭೀಮಾ ನದಿಯ ದಂಡೆಯ ಮೇಲೆ ಬರತಕ್ಕಂತ ಸ್ಥಳಗಳು.**

೨) **ಕೃಷ್ಣಾ, ಘಟಪ್ರಭಾ ಹಾಗೂ ಮಲಪ್ರಭಾ ಈ ನದಿಗಳ ದಂಡೆಯ ಮೇಲೆ ಬರತಕ್ಕಂತಹ ಸ್ಥಳಗಳನ್ನು ಸಾಮಾನ್ಯವಾಗಿ 'ಕಲಾದಗಿ' ಶ್ರೇಣಿ ಪ್ರಕಾರ ಎಂದು ವಿಭಾಗಿಸಿದ್ದಾರೆ.**

ಕಲಾದಗಿ ಶ್ರೇಣಿಯು ಹೆಚ್ಚು ಕಡಿಮೆ ರಾಯಚೂರು, ಬೆಳಗಾಂವಿ, ಬಿಜಾಪುರ ಜಿಲ್ಲೆಗಳನ್ನು ಒಳಗೊಂಡಿದೆ. ಹಾಗೂ ಕೃಷ್ಣ, ಘಟಪ್ರಭಾ, ಹಾಗೂ ಮಲಪ್ರಭಾ ಈ ನದಿಗಳ ದಂಡೆಯ ಮೇಲೆ ಬರತಕ್ಕಂತಹ ಸ್ಥಳಗಳನ್ನು ಸಾಮಾನ್ಯವಾಗಿ 'ಕಲಾದಗಿ' ಶ್ರೇಣಿ ಪ್ರಕಾರ ಎಂದು ವಿಭಾಗಿಸಿದ್ದಾರೆ.

ಕಲಾದಗಿ ಶ್ರೇಣಿಯು ಹೆಚ್ಚು ಕಡಿಮೆ ರಾಯಚೂರು, ಬೆಳಗಾಂವಿ, ಬಿಜಾಪೂರ, ಜಿಲ್ಲೆಯ ಪ್ರದೇಶಗಳನ್ನು ಒಳಗೊಂಡಿದೆ. ಹಾಗೂ ಕೃಷ್ಣಾ, ಘಟಪ್ರಭಾ, ಮಲಪ್ರಭಾ, ಹಿರಣ್ಯಕೇಶಿ ಮತ್ತು ಮಾರ್ಕಂಡೇಯ ಇವೇ ಮೊದಲಾದ ನದಿ ದಂಡೆಗಳ ಮೇಲೆ ವಿಶೇಷ ಬೆಳಕು ಬಂದಿದೆ. ಅಧ್ಯಯನದ ಅನೂಕೂಲತೆಯ ದೃಷ್ಟಿಯಿಂದ ಕಲಾದಗಿ ಶ್ರೇಣಿಯನ್ನು ಮುಖ್ಯವಾಗಿ ೫ ಭಾಗಗಳಲ್ಲಿ ವಿಂಗಡಿಸಲಾಗಿದೆ.

೧) **ಕೊಣ್ಣೂರು ಸಮೂಹ**

೨) **ಸೌದತ್ತಿ ಸಮೂಹ**

೩) **ತೇರದಾಳ ಸಮೂಹ**

೪) **ಐಹೊಳೆ ಸಮೂಹ**

೫) **ಕಲಾದಗಿ ಸಮೂಹ**

ತೇರದಾಳ ಸಮೂಹ :

ತೇರದಾಳ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಸಮೂಹ ಸುಮಾರು ೧೦೦೦ ಕ್ಕಿಂತ ಹೆಚ್ಚು ಬೃಹತ್ ಶಿಲಾಯುಗದ ಗೋರಿಗಳನ್ನು ಹೊಂದಿವೆ. ಆದರೂ ಪ್ರಮುಖವಾಗಿ ೫ ನೆಲೆಗಳಲ್ಲಿ ಹೆಚ್ಚಿನ ಕುರುಹುಗಳು ಕಂಡುಬರುತ್ತವೆ. ಅವುಗಳಲ್ಲಿ ತೇರದಾಳ, ಹಳಿಂಗಳಿ, ಹನಗಂಡಿ, ಆಸಂಗಿ ಮತ್ತು ಮದನ ಮಟ್ಟಿ ಗ್ರಾಮಗಳಲ್ಲಿ ಕೃಷ್ಣಾನದಿಯ ದಂಡೆಯ ಮೇಲೆ ಬರುವ ಪ್ರದೇಶಗಳ ಸುಮಾರು ೯ ಕಿಲೋ ಮೀಟರ ಪ್ರದೇಶದ ಅಂತರದಲ್ಲಿ ಬೃಹತ್ ಶಿಲಾಯುಗದ ಗೋರಿಗಳು ಹರಡಿಕೊಂಡಿವೆ. ಇಲ್ಲಿ ವ್ಯವಸಾಯಕ್ಕೆ ವಿಶಾಲವಾದ ಪ್ರದೇಶಗಳಲ್ಲಿ ಕಪ್ಪು ಮಣ್ಣನ್ನು ಹೊಂದಿದ್ದು ಈ ಪ್ರದೇಶದಲ್ಲಿ ಉಸಕು ಮತ್ತು ಕಲ್ಲಿನ ದಿಣ್ಣೆಗಳಿವೆ. (ಸುಣ್ಣಗುಡ್ಡ) ಇವುಗಳ ಪ್ರದೇಶದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿದವರೆಂದರೆ ಪ್ರೊ॥ ಶ್ರೀಯುತ ಎ. ಎಮ್ ಅಣ್ಣಿಗೇರಿಯವರು.

ಈ ಕ್ಷೇತ್ರದ ಪ್ರದೇಶದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಿದ ಪ್ರೊ॥ ಅ. ಸುಂದರರವರು ಪ್ರಮುಖವಾಗಿ ತೇರದಾಳ, ಹನಗಂಡಿ ಮತ್ತು ಹಳಿಂಗಳಿ ಈ ಪ್ರದೇಶಗಳನ್ನು ಇಟ್ಟುಕೊಂಡು ಪ್ರಮುಖವಾಗಿ ಮೂರು ಪ್ರಕಾರದ ಗೋರಿಗಳನ್ನು ವಿವರಿಸಿದ್ದಾರೆ. ಕೊಣ್ಣೂರು ಮತ್ತು ಸವದತ್ತಿಯಲ್ಲಿ ಅನ್ವೇಷಣಾ ಕಾರ್ಯದಲ್ಲಿ ಬಂದಂತಹ ಆಧಾರಗಳು ಬೇರೆ ಶ್ರೇಣಿಗಳಿಗಿಂತ ವಿಶೇಷ ಲಕ್ಷಣಗಳನ್ನು ಹೊಂದಿರುವದನ್ನು ವಿವರಿಸಿದ್ದಾರೆ. ತೇರದಾಳ ಸಮೂಹದ ಗೋರಿ ಲಕ್ಷಣಗಳ ಮೇಲೆ ಈ ಕೆಳಗಿನಂತೆ ವಿವರಿಸಿದ್ದಾರೆ.

೧) **ಹಾದಿ ಕೋಣೆ ಗೋರಿಗಳು.**

೨) **ಚಿಕ್ಕ ಚೌಕಾದ ಕೋಣೆ ಗೋರಿಗಳು.**

೩) **ವೃತ್ತ ಕಲ್ಲುರಾಶಿಗಳನ್ನು ಹೊಂದಿರುವಂತ ಗೋರಿಗಳು.**

ಐತಿಹಾಸಿಕ ತೇರದಾಳ ಪ್ರದೇಶದ ನೆಲೆಗಳಲ್ಲಿ ಹಾದಿ ಕೋಣೆಗೋರಿಗಳನ್ನು ಮತ್ತು ಮೂರು ಪ್ರಕಾರಗಳಲ್ಲಿ ವಿಂಗಡಣೆ ಮಾಡಿದ್ದಾರೆ.

೧) **ಗ್ರೀಕ್ ಅಥವಾ ಲ್ಯಾಟಿನ್ ಮಾದರಿಯ ಅಡ್ಡಾದ ಹಾದಿಕೋಣೆ ಗೋರಿಗಳು**

೨) **ಹಾದಿವುಳ್ಳ ವೃತ್ತಾಕಾರದ ಕೋಣೆ ಗೋರಿಗಳು**

೩) **ಕೊಣ್ಣೂರು ಮಾದರಿಯ ಹಾದಿ-ಕೋಣೆ ಗೋರಿಗಳು**

ತೇರದಾಳ ಬೃಹತ್ ಶಿಲಾಯುಗದ ಪ್ರದೇಶದ ಪಶ್ಚಿಮ ಮತ್ತು ಉತ್ತರಕ್ಕೆ ಗ್ರೀಕ್ ಅಥವಾ ಲ್ಯಾಟಿನ ಮಾದರಿಯ ಅಡ್ಡಾದ ಹಾದಿಕೋಣೆ ಗೋರಿಗಳು ಹೆಚ್ಚಾಗಿ ಕಾಣಬಹುದು.

೧) ಗ್ರೀಕ್ ಅಥವಾ ಲ್ಯಾಟಿನ್ ಮಾದರಿಯ ಅಡ್ಡಾದ ಹಾದಿಕೋಣೆ ಗೋರಿಗಳು :

ಈ ಗೋರಿಗಳು ಸಾಮಾನ್ಯವಾಗಿ ಉದ್ದವಾಗಿದ್ದು ಉತ್ತರ-ದಕ್ಷಿಣವಾಗಿವೆ. ಇದರಲ್ಲಿಯ ಹಾದಿ (ದಾರಿ) ಬಹಳ ಚಿಕ್ಕದಾಗಿರುತ್ತದೆ. ಗೋರಿಯ ಹಾದಿ ಕೋಣೆಯ (ಚೇಂಬರ್)ಗಿಂತ ಮೇಲೆ ರಚಿತವಾಗಿರುತ್ತದೆ. ಸಾಮಾನ್ಯವಾಗಿ ೯ (ಅರ್ತೋಸ್ಟ್ಯಾಟ್ಸ) ಗಳು ಎಂಟು ಕಡೆಗೆ ಇರುತ್ತವೆ. ಗೋರಿಗಳ ಮೇಲ್ಗಡೆಗೆ ಕಲ್ಲು ಚಪ್ಪಡಿಗಳನ್ನು ಸರಿಯಾಗಿ ಇರುತ್ತವೆ. (ಕೆಪ್ ಸ್ಟೋನ್) ಪೂರ್ವ, ಪಶ್ಚಿಮ, ಮತ್ತು ಉತ್ತರಕ್ಕೆ ಕಲ್ಲನ್ನು ನಿಲ್ಲಿಸಿ ಮೇಲೊಂದು ಕಲ್ಲನ್ನು ಇಟ್ಟಿರುತ್ತಾರೆ. ಇದಕ್ಕೆ **'ಟೋಪಿಕಲ್ಲು'** ಎಂದೂ ಕೂಡಾ ಕರೆಯುತ್ತಾರೆ. ಮೇಲಿನ ಕಲ್ಲು ಗೋರಿಯ ಆಕಾರಕ್ಕೆ ತಕ್ಕಂತೆ ವಿಶಾಲವಾಗಿರುತ್ತದೆ. ಕೆಲವೊಂದು ಗೋರಿಗಳಲ್ಲಿ ನಾಲ್ಕುಕಡೆ ಕಲ್ಲು ಚಪ್ಪಡಿಗಳಿಟ್ಟು ಜೋಡಿಸಲಾಗಿದೆ. ರಂಧ್ರಕೂಡಾ ಇರುವದಿಲ್ಲ.

ಹಾದಿ ಕೋಣೆ ಗೋರಿಗಳು ಕೆಲವು ಸಲ ಕಲ್ಲು ರಾಶಿಗಳಿಂದ ಮೇಲಿನ (ಟೋಪಿ ಕಲ್ಲಿನ) ವರೆಗೆ ಮುಚ್ಚಿರುತ್ತಾರೆ. ಈ ಹಾದಿಕೋಣೆ ಗೋರಿಗಳು ಮೇಲಿನ ಕಲ್ಲು ರಾಶಿಗಳು ಆಯತಾಕಾರಗಳಾಗಿದ್ದರೆ ಕೆಲವೊಮ್ಮೆ ವೃತ್ತಾಕಾರವಾಗಿರುತ್ತವೆ. ಮೇಲಿನ ಟೋಪಿ ಕಲ್ಲಿಗೆ ಆಧಾರವಾಗಿ ಕಂಬಗಳನ್ನು ನಿಲ್ಲಿಸುತ್ತಿದ್ದರು. ಐತಿಹಾಸಿಕ ಪ್ರಾಚೀನ ತೇರದಾಳದಲ್ಲಿ ೨೪ ಮೀಟರ X ೮ ಮೀಟರ ಅಳತೆಯನ್ನು ಹೊಂದಿರುವ ಗೋರಿಯೊಂದನ್ನು ಪ್ರೊ॥ ಅ. ಸುಂದರವರು ಪತ್ತೆ ಹಚ್ಚಿದ್ದಾರೆ[೪].

ಕೆಲವು ಸಲ ಅದೇ ವೃತ್ತದಲ್ಲಿಯ ಗೋರಿಗಳನ್ನು ಕಲ್ಲು ರಾಶಿಗಳಿಂದ ಸುತ್ತವರಿಸುತ್ತಿದ್ದರು. ಈ ಕಲ್ಲು ರಾಶಿಗಳ ಸುತ್ತೂವರೆಗೆ ಆಯಾ ಗೋರಿಗಳ ಅಳತೆಯನ್ನು ಹೊಂದಿರುತ್ತಿದ್ದವು.

೨) ಹಾದಿ ವುಳ್ಳ ವೃತ್ತಾಕಾರದ ಕೋಣೆಗೋರಿಗಳು :

ವೃತ್ತಾಕಾರದ ಈ ಕೋಣೆಗೋರಿಯು ಸಹ ಚಿಕ್ಕದಾದ ಹಾದಿಯನ್ನು ಹೊಂದಿರುತ್ತದೆ. ಅಲ್ಲದೇ ಒಳಗಿನ ಗೋರಿಯು (ವೃತ್ತಾಕಾರದಲ್ಲಿನ) ಆಯತಕಾರದಲ್ಲಿರುತ್ತದೆ. ಇದರ ಮೇಲಿನ ಟೋಪಿ ಕಲ್ಲಿಗೆ ಆಧಾರವಾಗಿ ಕಂಬಗಳನ್ನು ನಿಲ್ಲಿಸುತ್ತಿದ್ದರು. ಇವುಗಳಿಗೆ ಸಂಪೂರ್ಣ (ರಂಧ್ರವಿಲ್ಲದ) ಶಿಲಾ ಫಲಕಗಳು ಸುತ್ತಲೂ ಕಟ್ಟಲ್ಪಟ್ಟಿರುತ್ತದೆ. ಈ ಹಾದಿವುಳ್ಳ ವೃತ್ತಾಕಾರದ ಕೋಣೆ ಗೋರಿಗಳು ಸಾಮಾನ್ಯವಾಗಿ ಎರಡು ಮೀಟರ ಸುತ್ತಳತೆಯನ್ನು ಹೊಂದಿದೆ.

೩) ಕೊಣ್ಣೂರು ಮಾದರಿಯ ಹಾದಿಕೋಣೆ ಗೋರಿಗಳು :

ಆಯತಾಕಾರದಲ್ಲಿರುವ ಈ ಗೋರಿಗಳು ಸಹ ದಕ್ಷಿಣದಲ್ಲಿ ಚಿಕ್ಕದಾದ ಹಾದಿಯನ್ನು ಇವು ಹೊಂದಿರುತ್ತವೆ. ಇವುಗಳು ಕೂಡಾ ಆಯತಾಕಾರದಲ್ಲಿ ಅಥವಾ ವೃತ್ತಾಕಾರದಲ್ಲಿದಲ್ಲಿರುತ್ತವೆ. ಇದರ ಮೇಲಿನ ಟೋಪಿಗೆ ಆಧಾರವಾಗಿ ಒಂದಕ್ಕಿಂತ ಹೆಚ್ಚಿನ ಕಂಬಗಳು ಆಧಾರವಾಗಿರುತ್ತವೆ. ಇವು ಸಾಮಾನ್ಯವಾಗಿ ೨ ಮೀಟರ ೧ X ೧ ಮೀಟರ, ಬಿ X ೬೦ ಸೆಂ. ಮೀಟರ ೮೦ ಸೆಂ. ಮೀಟರ ಎಚ್ ಇದರ ಹಾದಿ ೬೦ ಸೆಂ. ಮೀಟರ ದಿಂದ ೮೦ ಸೆಂ. ಮೀಟರ ೧ X ೪೦ ಸೆಂ. ಮೀಟರ ದಿಂದ ೫೦ ಸೆಂ. ಮೀಟರ ಬಿ ಹೀಗೆ ಅಳತೆಯ ವಿಸ್ತಾರವಾಗಿದೆ'.

ಇಂತಹ ಸುಮಾರು ೨೦ ಗೋರಿಗಳ ಮಾದರಿ ಹಳಿಂಗಳಿಯಲ್ಲಿ ಹಾಗೂ ೫ ಗೋರಿಗಳ ಮಾದರಿಗಳು ಐತಿಹಾಸಿಕ ಪ್ರಾಚೀನ ತೇರದಾಳದಲ್ಲಿ ಕಂಡು ಬಂದಿವೆ. ಆದರೆ ಇವುಗಳಲ್ಲಿ ಹೆಚ್ಚಿನವುಗಳು ನಾಶವಾಗಿದ್ದನ್ನು ನಾವು ಕಾಣುತ್ತೇವೆ.

೨) ಚಿಕ್ಕ ಚೌಕಾದ ಕೋಣೆ ಗೋರಿಗಳು :

ಇಂತಹ ಮಾದರಿಗಳು ಕೊಣ್ಣೂರು ಪ್ರದೇಶದಲ್ಲಿ ಹೆಚ್ಚಾಗಿ ಕಂಡು ಬಂದಿದೆ. ಇವು ಹಾದಿಯನ್ನು (ಪ್ಯಾಸೇಜ್) ಹಾಗೂ ಅದಕ್ಕೆ ರಂಧ್ರಗಳನ್ನು (ಪೋರ್ಟ–ಹೋಲ್) ಹೊಂದಿರುವದಿಲ್ಲ. ಕೆಲವು ಸಲ ಎರಡು–ಮೂರು ವೃತ್ತಗಳು ಕೂಡಿಕೊಂಡು ಒಂದು ಕೋಣೆ ಗೋರಿಯಾಗಿರುತ್ತವೆ.

ಸಾಮಾನ್ಯವಾಗಿ ಕೋಣೆಗಳು ೬೦ ಸೆಂಟಿಮೀಟರದಿಂದ ಒಂದು ಸೆಂಟಿಮೀಟರ ವರೆಗೆ ಚೌಕಾಕಾರವಾಗಿರುತ್ತವೆ. ಇದರ ಸುತ್ತಳತೆ ೨ ಮೀಟರದಿಂದ ೩ ಮೀಟರ ವಿಸ್ತೀರ್ಣದಲ್ಲಿರುತ್ತದೆ.

೩) ವೃತ್ತ ಕಲ್ಲುರಾಶಿಗಳನ್ನು ಹೊಂದಿದಂತಹ ಕಲ್ಲು ಗೋರಿಗಳು :

ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದ ಸಮೀಪದ ಹಳಿಂಗಳಿಯ ದಕ್ಷಿಣ ಭಾಗದ ದಿಣ್ಣೆಯ ಪ್ರದೇಶದ ಮೇಲೆ ಇಂತಹ ಸುಮಾರು ೧೮ ಮಾದರಿಯ ಗೋರಿಗಳು ಕಂಡುಬಂದಿವೆ. ಇಂತಹ ಗೋರಿಗಳು ಬೇರೆ ಪ್ರದೇಶದಲ್ಲಿಯೂ ಕಂಡುಬಂದ ಈ ಶಿಲಗೋರಿಗಳು ಬೇರೆ ಬೇರೆ ಅಳತೆಯನ್ನು ಹೊಂದಿವೆ. ಅತೀ ಚಿಕ್ಕ ಗೋರಿ ಎಂದರೆ ಸುಮಾರು ಎರಡು ಮೀಟರದ್ದಾಗಿದ್ದು ಅತೀ ಹೆಚ್ಚೆಂದರೆ ಹನ್ನೆರಡು ಮೀಟರ ಸುತ್ತಳತೆಯನ್ನು ಹೊಂದಿದೆ. ಇವುಗಳಲ್ಲಿ ೪ ರಿಂದ ೬ ಮೀಟರ ಸುತ್ತಳತೆಯನ್ನು ಹೊಂದಿರುವ ಶಿಲಾ ಗೋರಿಗಳು ಸಾಮಾನ್ಯವಾಗಿವೆ. ವೃತ್ತ ಶಿಲಾಗೋರಿಗಳು ದೊಡ್ಡ ಕಲ್ಲುಗಳಿಂದ ಅಥವಾ ಆಯತಾಕಾರದ ಶಿಲಾಫಲಕಗಳಿಂದ ಸುತ್ತವರೆದಿರುತ್ತವೆ. ಇದರ ವೃತ್ತ ಮಾತ್ರ ಸರಿಸಮನಾಗಿರುತ್ತದೆ.

ಇವುಗಳನ್ನು ಕಟ್ಟಲು ಸಾಮಾನ್ಯವಾಗಿ ಉಸಕು ಮತ್ತು ಕಲ್ಲುಗಳನ್ನು ಹೆಚ್ಚಾಗಿ ಉಪಯೋಗಿಸಿದ್ದಾರೆ. ವೃತ್ತಗಳ ಸುತ್ತಗಳಲ್ಲಿ ಬಳಿಸಿದ ಕಲ್ಲುಗಳು, ಬಿಳಿ, ಬೂದುಬಣ್ಣ (ವೈಟಿಷಗ್ರೇ ಸ್ಟೋನ್) ದಿಂದ ಕೂಡಿದೆ. ಆದರೆ ಇಲ್ಲಿಯ ಗ್ರೀಕ್ ಅಥವಾ ಲ್ಯಾಟಿನ್ ಮಾದರಿಯ ಗೋರಿಗಳಲ್ಲಿ ಬಿಳಿಯ ಬೆಣಚು ಕಲ್ಲನ್ನು ಬಳಿಸಿದ್ದಾರೆ. ಸುತ್ತಳತೆಯ ಕಲ್ಲುರಾಶಿ ಗೋರಿಗಳಲ್ಲಿ ದಖನ್ ಪ್ರಸ್ಥಭೂಮಿ ಶಿಲೆಯನ್ನು ಬಳಸಲಾಗಿದೆ. ಅಲಂಕಾರರಹಿತ ಆಯತಾಕಾರದ ಶಿಲಾಫಲಕಗಳನ್ನು ಹೆಚ್ಚಾಗಿ ಬಳಸಿದ್ದಾರೆ.

: ಅಡಿ ಟಿಪ್ಪಣಿಗಳು :

೧) ಸುಂದರ "ದ ಅರ್ಲಿ ಚೇಂಬರ್ ಟೊಂಬ್ಸ್ ಆಪ್ ಸೌಥ ಇಂಡಿಯಾ ಪುಟ – ೦೩

೨) ಅದೇ ಪುಟ – ೦೩

೩) ಅದೇ ಪುಟ – ೨೮

೪) ಅದೇ ಪುಟ – ೨೯

* * *

ಅಧ್ಯಾಯ – ೪

ಆರ್ಥಿಕ ಸ್ಥಿತಿಗತಿಗಳು

ಅಧ್ಯಾಯ – ೪
ಆರ್ಥಿಕ ಸ್ಥಿತಿಗತಿಗಳು

ಸಮಾಜದ ಪ್ರಮುಖ ಭಾಗವೆಂದರೆ ಆರ್ಥಿಕ ವ್ಯವಸ್ಥೆಯಾಗಿದೆ. ಈ ಅರ್ಥವ್ಯವಸ್ಥೆಯು ತನ್ನ ವಿಶಾಲವಾದ ವ್ಯಾಪ್ತಿ & ವೈವಿಧ್ಯತೆಯಿಂದ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದೆ. ಅರ್ಥವ್ಯವಸ್ಥೆಯು ಒಂದು ಸ್ಥಳದ ವಿವಿಧ ಆರ್ಥಿಕ ಚಟುವಟಿಕೆಗಳ ರೀತಿಯನ್ನು ಅಲ್ಲಿಯ ಜನರು ಜೀವನೋಪಾಯಕ್ಕಾಗಿ ಕೈಗೊಂಡ ಮಾರ್ಗವನ್ನು ಸೂಚಿಸುತ್ತದೆ. ಆ ಪ್ರದೇಶದ ವಸ್ತುಗಳ ಮತ್ತು ಸೇವೆಗಳ ಉತ್ಪಾದನೆ, ವಿತರಣೆ, ವಿನಿಮಯ ಮತ್ತು ಬಳಕೆ ಅನುಭೋಗಗಳನ್ನು ಆರ್ಥಿಕ ಚಟುವಟಿಕೆಗಳೆಂದು ಕರೆಯುತ್ತಾರೆ. ಒಂದು ನಾಡಿನ ಇಲ್ಲವೇ ಪ್ರದೇಶದ ಪ್ರಗತಿಯು ಅಲ್ಲಿನ ಪ್ರಮುಖವಾಗಿ ಅರ್ಥವ್ಯವಸ್ಥೆಯನ್ನು ಅವಲಂಭಿಸಿರುತ್ತದೆ. ಯಾವುದೇ ಪ್ರದೇಶ ಆರ್ಥಿಕವಾಗಿ ಸಂಪದ್ಭರಿತವಾದಾಗ ಮಾತ್ರ ಸಮೃದ್ಧವಾಗಿ ಹಾಗೂ ಸ್ವಾಭಿಮಾನದ ಬದುಕನ್ನು ನಡೆಸಿ ಸಮಗ್ರವಾಗಿ ಆ ಪ್ರದೇಶವನ್ನು ಉತ್ತಮಗೊಳಿಸಲು ಸಾಧ್ಯವಾಗುತ್ತದೆ.

೪.೧ ಅರ್ಥವ್ಯವಸ್ಥೆ :

ಅರ್ಥವ್ಯವಸ್ಥೆಯಲ್ಲಿ ಪ್ರಮುಖವಾಗಿ ಅಲ್ಲಿರುವ ನೈಸರ್ಗಿಕ ಸಂಪನ್ಮೂಗಳ ಹಂಚಿಕೆಯ ಜೊತೆಗೆ ಅವುಗಳನ್ನು ಸರಿಯಾಗಿ ಸದುಪಯೋಗಪಡಿಸಿಕೊಳ್ಳುವ ಅಲ್ಲಿರುವ ಜನರ ಸಂಘಟನಾ ಮನೋಭಾವ ಮತ್ತು ಪರಿಶ್ರಮದ ದುಡಿಮೆಯು ಸಹ ಅತ್ಯಂತ ಪ್ರಮುಖವಾದದ್ದು. ಇದರಿಂದಾಗಿ ಆರ್ಥಿಕ ಅಭಿವೃದ್ಧಿಯು ಆ ಪ್ರದೇಶದ ನೈಸರ್ಗಿಕ ಸಂಪನ್ಮೂಲಗಳ ಪ್ರಮಾಣ ಅವುಗಳ ಗುಣಮಟ್ಟ ಹಾಗೂ ಅಲ್ಲಿರುವ ಜನರು ಅವುಗಳನ್ನು ಬಳಸಿಕೊಳ್ಳುವ ಸಾಮರ್ಥ್ಯಗಳಿಗೆ ಅನುಗುಣವಾಗಿ ನಿರ್ಧರಿತವಾಗುತ್ತದೆ.

ಪ್ರಮುಖವಾದವುಗಳು ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಇವರು ನಡೆಸಿಕೊಂಡು ಬಂದ ಆರ್ಥಿಕ ವ್ಯವಸ್ಥೆಯ ತರುವಾಯ ಐತಿಹಾಸಿಕ ತೇರದಾಳವನ್ನು ಕಂಪಣವಾಗಿ (ವಿಭಾಗವನ್ನಾಗಿ) ಮಾಡಿಕೊಂಡು ಕಲ್ಯಾಣದ ಚಾಲುಕ್ಯರು, ಸೌದತ್ತಿಯ ರಟ್ಟರು, ಶಿಲಾಹಾರರು, ದೇವಗಿರಿಯ ಯಾದವರು ಪ್ರಮುಖ ಅರಸು ಮನೆತನಗಳು ತಮ್ಮ ಈ ಅರ್ಥವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಬಂದವರಾಗಿದ್ದಾರೆ. ವ್ಯವಸಾಯ ಅವರ ಪ್ರಮುಖವಾದ ವೃತ್ತಿಯಾಗಿದ್ದು ಇವುಗಳ ಜೊತೆಗೆ ಪಶುಪಾಲನೆ, ವಾಣಿಜ್ಯ ವ್ಯಾಪಾರ, ವರ್ತಕ ಶ್ರೇಣಿ (ಸಂಘಗಳು) ನಾಣ್ಯಗಳು, ಭೂಮಾಪನ,

ನೀರಾವರಿಗಳ ಜೊತೆಗೆ ವ್ಯವಸಾಯವನ್ನು ಆದರಸಿದ ಹಲವಾರು ವೃತ್ತಿಗಳಿಂದ ಬರುವ ತೆರಿಗೆಗಳು ರಾಜ್ಯದ ಆದಾಯದ ಮೂಲಗಳಾದ್ದವು. ಐತಿಹಾಸಿಕ ತೇರದಾಳ ಗ್ರಾಮದ ಮೊದಲಾದ ಆರ್ಥಿಕ ಅಂಶಗಳ ಕುರಿತು ಹಲವಾರು ಶಾಸನಗಳು ಬೆಳಕನ್ನು ಚಲ್ಲುತ್ತವೆ. ಹಾಗೇಯೆ ಶಾಸನಗಳು ನೀಡುವ ಮಾಹಿತಿಯನ್ನು ಆದರಸಿ ಐತಿಹಾಸಿಕ ತೇರದಾಳ ಗ್ರಾಮದ ಅರ್ಥವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಬಹುದು.

೪.೨ ವ್ಯವಸಾಯ :

ಭಾರತವು ಮೂಲತ : ಕೃಷಿ ಪ್ರಧಾನವಾದ ದೇಶ ಹಾಗೂ ವ್ಯವಸಾಯವು ಭಾರತದ ಅರ್ಥವ್ಯವಸ್ಥೆಯ ಬೆನ್ನೆಲಬು. ಭಾರತದ ಇತಿಹಾಸ ಪೂರ್ವ ಕಾಲದಲ್ಲಿ ಕೃಷಿ ಅಥವಾ ವ್ಯವಸಾಯ ಈ ಪ್ರದೇಶದ ಜನರ ಪ್ರಮುಖವಾದ ಉದ್ಯೋಗವಾಗಿತ್ತು. ಒಕ್ಕಲುತನವು ತೇರದಾಳ ಪ್ರದೇಶದ ಜೀವನಾಡಿಯಾಗಿದ್ದು. ಬಹುಜನರು ಮುಖ್ಯ ಕಸಬುವಾಗಿದೆ. ಅದನ್ನು ಆದರಸಿ ಇತರೇ ಉದ್ಯೋಗಳಾದ ವ್ಯಾಪಾರ ಮತ್ತು ಕೈಗಾರಿಕೆಗನ್ನು ಒಳಗೊಂಡಿದ್ದು, ದೇಶದ ಸಮಸ್ತ ಆಧಾಯಕ್ಕೆಲ್ಲ ಮೂಲ ಕೇಂದ್ರ ಬಿಂದುವಾಗಿದ್ದಿತು. ವ್ಯವಸಾಯವನ್ನು ಕುರಿತಂತೆ ನಮಗೆ ಈ ಪ್ರದೇಶದಲ್ಲಿ ದೊರೆತ ಶಾಸನಗಳು ಮಾಹಿತಿಯನ್ನು ನೀಡುವಲ್ಲಿ ನೇರವಾಗಿವೆ.

ಕ್ರಿ.ಶ. ೧೧೨೩ ರ ಕಾಲದ ಶಾಸನವೊಂದು **"ಆರವತ್ತೊಕ್ಕಲುಂ ಹನ್ನಿ ದಾನ್ಯಕ್ಕೆ ರಾಸಿಗೊಳಗವಂ ಬಿಟ್ಟರು ಎಂದು ತಿಳಿಸುತ್ತದೆ"**[೧]. ಇದರಿಂದ ಆರತ್ತೂ ಕುಟುಂಬಗಳಿಂದೊಡಗೂಡಿದ ಒಕ್ಕಲುತನದ ಸಂಘವೊಂದಿತ್ತೆಂದು ತಿಳಿದು ಬರುತ್ತದೆ.

ಪ್ರಾಚೀನ ಐತಿಹಾಸಿಕ ತೇರದಾಳ ಗ್ರಾಮದಲ್ಲಿ ವ್ಯವಸಾಯವನ್ನು ಆದರಸಿ ಹಲವಾರು ವೃತ್ತಿಗಳು ಉದಾ : ಕುಂಬಾರಿಕೆ, ಕಂಬಾರಿಕೆ, ಬಡಿಗತನ, ಚಮ್ಮಾರಿಕೆ ಹಾಗೂ ಹಲವಾರು ವೃತ್ತಿಗಳು ಅಸ್ಥಿತ್ವದಲ್ಲಿ ಇರುವದನ್ನು ನಾವು ಕಾಣುತ್ತೇವೆ. ಪ್ರಾಚೀನ ಕಾಲದಲ್ಲಿ ಕುಂಬಾರರು ಚಕ್ರದ ಸಹಾಯದಿಂದ ಮಣ್ಣಿನ ಮಡಿಕೆಗಳನ್ನು ಮಾಡುತ್ತಿದ್ದರು ಪ್ರಾಚೀನ ಕಾಲದಲ್ಲಿ ಆಹಾರವನ್ನು ಬೇಯಿಸಲು ಹಾಗೂ ನೀರನ್ನು ಸಂಗ್ರಹಿಸಲು ಹಾಗೂ ಆಹಾರ ಧಾನ್ಯವನ್ನು ಸಂಗ್ರಹಿಸಲು ಗಡಿಗೆ, ಮಡಿಕೆಗಳನ್ನು ಬಳಕೆ ಮಾಡುತ್ತಿದ್ದರು. ಆದ್ದರಿಂದ ಮಣ್ಣಿನ ಗಡಿಗೆ, ಹರವಿ, ಕೊಡ, ಮಗಿ ಹಾಗೂ ಪ್ರಾಚೀನ ತೇರದಾಳ ಗ್ರಾಮದಲ್ಲಿ ಮಡಿಕೆಗಳಿಗೆ ಭಾರೀ ಬೇಡಿಕೆ ಇದ್ದಿತ್ತು. ತೇರದಾಳ ಗ್ರಾಮದ ಶ್ರೀ ನೇಮಿನಾಥ ಬಸದಿಯ ಮಂಟಪದ ಗೋಡೆಯ ಮೇಲೆ ದೊರೆತ ಕ್ರಿ.ಶ. ೧೧೨೩ರ ಕಾಲದ ಶಾಸನವೊಂದರಲ್ಲಿ ಕುಂಬಾರರ ಬಗ್ಗೆ ಉಲ್ಲೇಖವಿದೆ.

ನರುವತ್ತಿಗರು ತೆಗೆದ ಹೇಚಿಗಂ ನೋಱಿಲೆ ಯಿನ್ತಿನಿತುವಂ ಬಿಟ್ಟರು ತೆಲ್ಲಿಗರು ಮಾನ್ಯ ಸಾಮ್ಯವೆನ್ನದೆ ದೇವರ ಸಂಜೆ ಸೊಡರಿಂಗಂ ಧೂಪಾರತಿಗಂ ಗಾಣಕ್ಕೆ ಸೊಲ್ಲಗೆ ಹೋಱಗನಿಂ ಬಂದ ಎಣ್ಣೆಯ ಕೊಡಕ್ಕೆ ಸೊಲ್ಲಗೆ ಯಿನ್ತವಂ

ಬಿಟ್ಟರು ಗಣ ಕುಂಭಾಱರು ದೇವರ ಅಷ್ಟವಿಧಾರ್ಚನೆ ಆಹಾರದಾನ ನಡವನ್ತಾಗಿ ದಾನಶಾಲೆಗೆ ಆವಗೆ ಗಳನ ಬಿಟ್ಟರು[೬].

೪.೩ ಭೂಮಿಯ ಪ್ರಕಾರಗಳು :

ಭೂಮಿಯನ್ನು ಅವರು ಬೆಳೆಯುತ್ತಿದ್ದ ಫಲವತ್ತತೆಯ ಆಧಾರದ ಮೇಲೆ ಅನೇಕ ಪ್ರಕಾರವಾಗಿ ವಿಂಗಡಿಸಿದ್ದಾರೆ. ತೇರದಾಳ ಗ್ರಾಮದ ಶಾಸನಗಳಿಂದ ಅಲ್ಲಿ ಕಂಡು ಬರುವ ಭೂಮಿಯನ್ನು ೨ ಪ್ರಕಾರವಾಗಿ ವಿಂಗಡಿಸಿದ್ದಾರೆ.

೧) **ಒಣ ಭೂಮಿ**

೨) **ತೋಟದ ಭೂಮಿ**

೧) ಒಣ ಭೂಮಿವೆಂದರೆ :

ನೀರಾವರಿಯ ಸಹಾಯವಿಲ್ಲದೇ ಮಳೆಯನ್ನೇ ಅವಲಂಬಿಸಿ ವ್ಯವಸಾಯವನ್ನು ಮಾಡುವ ಭೂಮಿಯೇ ಒಣ ಭೂಮಿ ಅಥವಾ ಹಕ್ಕಲು ಭೂಮಿಯಾಗಿದೆ.

ತೇರದಾಳದಲ್ಲಿ ದೊರೆತ ಕ್ರಿ.ಶ. ೧೧೨೩ ಕಾಲದ ಶಾಸನವೊಂದು ಈ ರೀತಿಯಗಿ ವಿವರಿಸುತ್ತದೆ. ಅದು ಏನೆಂದರೆ –

ಗುತ್ತ ಮುಖ್ಯ ಸಮಸ್ತ ನಕರಂಗಳುಮಂ ಬರಸಿ ನೇಮಿತೀರ್ಥೇಶ್ವರನ ಬಸದಿಯ ರಿಷಿಯ ರಾಹರದಾನಕ್ಕಂ ದೇವರಷ್ಟವಿಧಾರ್ಚನೆಗಂ ಖಂಡಪ್ಪು(ಸು)ಟಿತ ಜೀರ್ಣೋದ್ಧಾರಕ್ಕೆ ಪೆಸಗ್ಗೊಂಡು ತನುಮುನೀಶ್ವರ ದಿವ್ಯಶ್ರೀ ಪಾದಪದ್ಮಂ

ಗಳಂ ದಿವ್ಯತೀರ್ಥ ಜಳಂಗಳಿಂ ತೊಳೆದು ಶಾತಕುಂಭ ಕುಂಭಸಂಭೃತ ಜಳಂಗಳಿಂ ಧಾರಾಪೂರ್ಬಕಂ ಮಾಡಿ ತೇರಿದಾಳದ ಪಶ್ಚಿಮ ಭಾಗದೊಳು ಹಾರುನಗೇರಿಯ ಬಟ್ಟೆಯಿಂ ಬಡಗಲು ಯಿಪ್ಪತ್ತನಾಲ್ಗೇಣ ಕೋಲೊಳು

ಕೊಟ್ಟ ಮತ್ತರ್ ಅ(ಎ)ಪ್ಪತ್ತೆರಡು ದೇವಿಯಣ ಬಾವಿಯಂ ತೆಂಕಲಾ ಕೋಲಲು ಕೊಟ್ಟ ತೋಂಟ ಮತ್ತರೊನ್ದು ಅನ್ತು ಮತ್ತರು ೭೨ ತೊಂಟ ಮತ್ತ ೧ ಅಲ್ಲಿಯ ಪನ್ನಿರ್ಪ್ಪ ರ್ಗಾವುಣ್ಡಗಳುಂ ಅಱವತ್ತೊಕ್ಕಲುಂ ಹನ್ನಿಧಾನ್ಯಕ್ಕ ರಾಸಿಗೊಳಗವಂ ಬಿಟ್ಟ[೭].

ಅಂದರೆ ಗೊಂಕದೇವನು ತನ್ನ ರಾಜಧಾನಿ ತೇರದಾಳದಲ್ಲಿ ಗೊಂಕ ಜಿನಾಲಯವನ್ನು ನಿರ್ಮಿಸಿ, ನೇಮಿಜಿನನನ್ನು ಪ್ರತಿಷ್ಠೆ ಮಾಡಿಸಿದ. ಆಗ ಕೊಲ್ಲಾಪೂರದ ರೂಪನಾರಾಯಣ

ಬಸದಿಯ ಆಚಾರ್ಯನಾದ ಮಾಘನಂದಿಯನ್ನು ಕರೆಯಿಸಿ, ಬಸದಿಯ ರಿಸಿಯರಾಹಾರ ದಾನಕ್ಕೆ, ದೇವರ ಪೂಜೆ ಮುಂತಾದವಕ್ಕೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆಂದು ಮುನಿಯ ಕಾಲನ್ನು ತೊಳೆದು ೨೪ ಗೇಣ ಕೋಲನಲ್ಲಿ ೬೨ ಮತ್ತರು ಭೂಮಿ ಒಂದು ಮತ್ತರು ತೋಟ ಭೂದಾನ ನೀಡುತ್ತಾನೆ. ಅಲ್ಲಿಯ ಗಾವುಂಡಗಳು ಸೆಟ್ಟರು ಮುಂತಾದವರು ಬೇರೆ ಬೇರೆ ದಾನ ನೀಡುತ್ತಾರೆ. ಉಲ್ಲೇಖವನ್ನು ನೋಡಿದರೆ ಒಣಭೂಮಿ ಅಥವಾ ಹಕ್ಕಲು ಭೂಮಿಯ ಮತ್ತು ತೋಟದ ಭೂಮಿಯು ಸಾಗುವಳಿಯಲ್ಲಿತ್ತೇಂದು ಮನವರಿಕೆಯಾಗುತ್ತದೆ.

೨) **ತೋಟದ ಭೂಮಿ :**

ಭಾವಿ, ಕೆರೆ, ನದಿಗಳನ್ನು ಆಶ್ರಯಿಸಿ ಏತ್ತದ ಸಹಾಯದಿಂದ ನೀರು ಉಣಿಸುವ ಭೂಮಿಯನ್ನು **ತೋಟದ ಭೂಮಿ** ಎಂದು ಹೆಸರಿಸಲಾಗಿದೆ. ಐತಿಹಾಸಿಕ ತೇರದಾಳ ಪ್ರದೇಶದಲ್ಲಿ ತೋಟದ ಭೂಮಿಯಲ್ಲಿ ಹಲವಾರು ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದರು.

ಬೆಳೆಗಳು :

ತೇರದಾಳ ಗ್ರಾಮದ ಶಾಸನಗಳನ್ನು ಅವಲೋಕಿಸಿದಾಗ ತೇರದಾಳ ಪ್ರದೇಶವು ಹಲವಾರು ರೀತಿಯ ಬೆಳೆಗಳನ್ನು ಬೆಳೆಯಲಿಕ್ಕೆ ಅನೂಕೂಲಕರವಾದ ಭೂಮಿಯನ್ನು ಹೊಂದಿತ್ತು ಎಂದು ತಿಳಿಯಬಹುದು.

ಕ್ರಿ. ಶ. ೧೧೨೩ರ ಕಾಲದ ತೇರದಾಳದ ಶಾಸನವೊಂದು ಅಲ್ಲಿಯ ಜನರು ಕಟ್ಟಿಸಿದ ನೇಮಿನಾಥ ಜಿನಾಲಯದ ಶ್ರೀ ನೇಮಿತೀರ್ಥೇಶ್ವರ ದೇವರಿಗೆ ದತ್ತಿ ಬಿಟ್ಟ ಉಲ್ಲೇಖವನ್ನು ನೀಡುತ್ತದೆ. ಉದಾ : ೧೨ ಗೌಡರು ಮತ್ತು –

> **"ಅಱುವತ್ತೊಕ್ಕಲುಂ ಹನ್ನಿಧಾನ್ಯಕ್ಕ ರಾಸಿಗೊಳಗವಂ ಬಿಟ್ಟ**
> **ರು ಅಲ್ಲಿಯ ಸೆಟ್ಟಿಗುತ್ತ ಮುಖ್ಯನಗರಂಗಳು ತಾವು ಮಾಱಿಕೊಣ್ಣ ಭಣ್ಣ ಮಾಣಿಕ ಪಟ್ಟ**
> **ಸೂತ್ರವಾದಡಂ ಹೊ[೦]ಗೆ ವೀಸ ಲಾಭಾಯದ ಅಡಕೆ ಹೊಗೆ ಹನ್ನೊಂದು ತಾವು**
> **ತೆಗೆದ ಯೆಲೆಯ ಹೇಱಿಗಂ ಅಗದ"**

> **"ನ್ತರುವತ್ತಿಗರು ತೆಗೆದ ಹೇಱಿಗಂ ನೂಱಿಲೆ ಯಿನ್ತಿನಿತುವಂ ಬಿಟ್ಟರು ತೆಲ್ಲಿಗರು ಮಾನ್ಯ**
> **ಸಾಮ್ಯವೆನ್ನದೆ ದೇವರ ಸಂಜೆ ಸೊಡರಿಂಗಂ ಧೂಪಾರತಿಗಂ ಗಾಣಕ್ಕೆ ಸೊಲ್ಲಗೆ**
> **ಹೊಱಗನಿಂ ಬಂದ ಎಣ್ಣೆಯ ಕೊಡಕ್ಕೆ ಸೊಲ್ಲಗೆ ಯಿನ್ತವಂ"**

"ಬಿಟ್ಟರು ಗಣ ಕುಂಭಾಱಿರು ದೇವರ ಅಷ್ಟವಿಧಾರ್ಚನೆ ಆಹಾರದಾನ ನಡವನ್ತಾಗಿ ದಾನಶಾಲೆಗೆ ಆವಗೆ ಗಳನ ಬಿಟ್ಟರು ಹಲಸಿಗೆ ಹನ್ನಿರ್ಚ್ಚಾಸಿರದ ಹೆಬ್ಬಟ್ಟೆಯಲು ನಡೆವ ಗಾತ್ರಿಗರು ದೇವರಿಗೆ ಅಷ್ಟವಿದಾರ್ಚನೆ ನಡೆವನ್ತಾಗಿ ಹೇಱಿಂಗೆ ನೂಱುವೊ"[೪].

ಈ ಶಾಸನದಿಂದ ತಿಳಿದು ಬರುವದೇನೆಂದರೆ ಐತಿಹಾಸಿಕ ತೇರದಾಳ ಗ್ರಾಮದಲ್ಲಿ ಎಲೆ, ಅಡಿಕೆ, ಬಾಳೆ ಮುಂತಾದವುಗಳನ್ನೂ ಬೆಳೆಯುತ್ತಿದ್ದರು. ಅಲ್ಲದೇ ಎಣ್ಣೆ ಉತ್ಪಾದನೆಯಾಗುವ ಬೆಳೆಗಳನ್ನೂ ಬೆಳೆಯುತ್ತಿದ್ದರು. ಇವುಗಳ ಜೊತೆಗೆ ಹಲವಾರು ದವಸ ಧಾನ್ಯಗಳನ್ನು ಬೆಳೆಯುತ್ತಿದ್ದರು ಎಂಬದುನ್ನು ತಿಳಿದು ಬರುತ್ತದೆ.

೪.೪ ಪಶುಪಾಲನೆ :

ಮಾನವನೊಂದಿಗೆ ವ್ಯವಸಾಯಕ್ಕೆ ಶ್ರಮವಹಿಸಲು ಸಹಾಯಕವಾಗಲು ದನಕರುಗಳ ಪಾತ್ರವು ಅತ್ಯಂತ ಮಹತ್ವ ಪೂರ್ಣವಾಗಿದೆ. ಇದರ ಕುರಿತು ಕ್ರಿ.ಶ. ೧೧೮೧ರ ಕಾಲದ ತೇರದಾಳ ಶಾಸನದ ವಿವರ –

> **"ದೇವರಷ್ಟವಿಧಾರ್ಚನೆ ಚಂದ್ರಾರ್ಕ್ಕ ತಾರಂಬರಂ ನಡೆವಂತಾ**
>
> **ಗಿ ಕೊಟ್ಟ ಶಾಸನ ಮರ್ಯ್ಯಾದೆ ಯೆನ್ತೆಂದಡೆ ಚತುಸ್ಸಮುದ್ರ ಪರ್ಯ್ಯನ್ತಂಬರಂ ನಡವನ್ತಾಗಿ ೧೨೦ ನೊಱಪ್ಪತ್ತೆತ್ತು ಕತ್ತೆ, ಕೋಣ, ಭಂಡಿ ಭೈತ್ರ ದೋಣಿ ದುರ್ಗ್ಗಿಗಳ ಪಥಮೆಂಬಿವಱೊಳು ಆನೆ ಮಾಣಿಕ ವಸ್ತುವೇನಾದಡಂ ಪೇಱ ಜಳಸ್ಥಳ ಯಾ**
>
> **ತ್ರೆಯಲು ನಡೆವಡಂ ಸುಂಕಪರಿಹಾರವಾಗಿ ಕೊಟ್ಟರು"**[೫].

ಪ್ರಾಣಿಗಳು ಮಾನವನ ಆರ್ಥಿಕ ಅಭಿವೃದ್ಧಿಗೆ ಸಹಾಯಕಾರಿಯಾಗಿದ್ದವು. ಭೂಮಿಯನ್ನು ಹದ (ಸಾಗುವಳಿ) ಮಾಡಲು ಹಾಗೂ ಭೂಮಿಯಲ್ಲಿರುವ ಭಾವಿಯಿಂದ ನೀರೆತ್ತಲು ಹಾಗೂ ಸಾರಿಗೆ ಸಂಪರ್ಕದಲ್ಲಿ ಎತ್ತು ಮತ್ತು ಇತರೆ ಪ್ರಾಣಿಗಳನ್ನು ಉಪಯೋಗಿಸುತ್ತಿದ್ದರೆಂದು ಶಾಸನ ಆಧಾರಗಳಿಂದ ತಿಳಿಯಬಹುದು.

೪.೫ ಪ್ರಾಚೀನ ವ್ಯಾಪಾರಿ ಕೇಂದ್ರ ತೇರದಾಳ (ವಾಣಿಜ್ಯ & ವ್ಯಾಪಾರ) :

ವಾಣಿಜ್ಯ ವೃತ್ತಿ ಪ್ರಮುಖವಾಗಿ ಕೈಗಾರಿಕೆಗಳ ಉತ್ಪಾದನೆಯನ್ನು ವಿತರಿಸುವ ಪ್ರಮುಖ ಮಾಧ್ಯಮವಾಗಿದೆ. ಸಾಮಾನ್ಯವಾಗಿ ರಾಜಧಾನಿ, ಉಪವಿಭಾಗಗಳು, ಮುಖ್ಯ ಪಟ್ಟಣಗಳು, ಪ್ರಮುಖ

ಸ್ಥಳಗಳು, ಸುತ್ತ ಮುತ್ತಲಿನ ಸ್ಥಳಗಳು ಇವು ಪ್ರಮುಖ ವ್ಯಾಪಾರಿ ಕೇಂದ್ರಗಳು ಆಗಿದ್ದವು. ಇದು ಬೆಲ್ಲ ಸಕ್ಕರೆಯ ಸವಿನಾಡು ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು. ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದರಿಂದ ವ್ಯಾಪಾರಿ ಪ್ರಸಿದ್ಧಿಯಿಂದ ಸಂಪತ್ತಿನ ಸಂಗ್ರಹದಿಂದ ತೇರದಾಳ ಗ್ರಾಮದ ಶಾಸನಗಳಲ್ಲಿ

" ಶ್ರೀಮಂತ ಕೊಂಡಿ ಮೂಱುಸಾಸಿರದೊಳಗೆ ಹನ್ನರಡಕ್ಕಂ

ಮೊದಲಬಾಡಂ ಬಣಂಜು ವಟ್ಟಣಂ ನಡವೆಯ ಮನೆ ತೇರಿದಾಳಲು ಎಂಬ

ವಿಷಯ ನಿರಪಿತವಾಗಿದೆ"[೪].

ಅಂದರೇ ತೇರದಾಳ ಗ್ರಾಮವು ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತೆಂದು ಭಾವಿಸಿಕೊಳ್ಳ ಬಹುದಾಗಿದೆ. ಇಲ್ಲಿನ ಮಾರ್ಗಗಳು ವ್ಯಾಪಾರ ವಹಿವಾಟಿಗಾಗಿ ಮತ್ತು ವಿವಿಧ ಪ್ರದೇಶದ ಜನರ ಸಂಪರ್ಕಕ್ಕಾಗಿ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿವೆ. ಐತಿಹಾಸಿಕ ತೇರದಾಳ ಮಾರ್ಗ ಪ್ರಮುಖವಾಗಿ ೨ ಪ್ರಕಾರವಾಗಿ ವಿಂಗಡಿಸಿದ್ದಾರೆ.

ಅ) ಭೂಮಾರ್ಗ :

ಅಂದಿನ ಕಾಲದಲ್ಲಿ ಭೂಮಾರ್ಗದ ಸಾರಿಗೆಗಾಗಿ ಎತ್ತು, ಕತ್ತೆ, ಕೋಣ & ಬಂಡಿಗಳನ್ನು ಬಳಸುತ್ತಿದ್ದರು.

ಆ) ಜಲಮಾರ್ಗ :

ಜಲಮಾರ್ಗದ ಸಂಪರ್ಕಕಾಗಿ ದೋಣಿ & ಹಡಗಗಳನ್ನು ಬಳಸುತ್ತಿದ್ದರು.

ಉದಾ : ಕ್ರಿ.ಶ. ೧೧೮೧ರ ಕಾಲದ ಶಾಸನದ ಪ್ರಕಾರ –

ಕತ್ತೆ, ಕೋಣ, ಭಂಡಿ ಭೈತ್ರ, ದೋಣಿ, ದುರ್ಗ್ಗಿಗಳ

ಪಥಮೆಂಬಿವಱೊಳು ಆನೆ ಮಾಣಿಕ ವಸ್ತುವೇನಾದಡಂ ಘೇಟಿ ಜಳಸ್ಥಳ ಯಾ

ತ್ರೆಯಲು ನಡೆವಡಂ ಸುಂಕ ಪರಿಹಾರವಾಗಿ ಕೊಟ್ಟರು[೬].

ಅಂದರೆ ವ್ಯಾಪಾರದಲ್ಲಿ ಎತ್ತು, ಕತ್ತೆ, ಕೋಣ, ಭಂಡಿ, ದುರ್ಗ್ಗಿ, ಭೈತ್ರ, ದೋಣಿಗಳ ವ್ಯಾಪಾರದ ಸಲುವಾಗಿ ಭೂಮಾರ್ಗ ಮತ್ತು ಜಲಮಾರ್ಗದಲ್ಲಿ ಬಳಸುತ್ತಿದ್ದರು.

ವರ್ತಕರು :

ಪ್ರಾಚೀನ ಐತಿಹಾಸಿಕ ತೇರದಾಳ ಗ್ರಾಮದಲ್ಲಿ ಹಲವಾರು ವರ್ತಕರ ಗುಂಪುಗಳು ಅಸ್ಥಿತ್ವದಲ್ಲಿ ಇದ್ದವು. ಇವರು ವ್ಯಾಪಾರವನ್ನೇ ತಮ್ಮ ಪ್ರಮುಖ ವೃತ್ತಿಯಾಗಿಸಿಕೊಂಡಿದ್ದರು. ತೇರದಾಳ

ಗ್ರಾಮದ ಶಾಸನೋಲ್ಲೇಖಿತ ವರ್ತಕರು – ಸೆಟ್ಟಿ, ಸೆಟ್ಟಿಗುತ್ತರು, ನಖರರು, ಗವರೆ, ಗಾತ್ರಿಗರು ಮೊದಲಾದವರು ಈ ಪ್ರದೇಶದಲ್ಲಿ ವ್ಯಾಪಾರವನ್ನು ವೃತ್ತಿಯಾಗಿಸಿಕೊಂಡು ಬಾಳಿ ಬೆಳಗಿದ ವರ್ತಕರ ಗುಂಪುಗಳಾಗಿದ್ದವು. ಅವುಗಳಲ್ಲಿ ಪ್ರಮುಖವಾದದ್ದನ್ನು ಈ ಕೆಳಗಿನಂತೆ ಹೆಸರಿಸಿ ವಿವರಿಸಲಾಗಿದೆ.

ಸೆಟ್ಟಿ :

ಪ್ರಾಚೀನ ಕಾಲದಲ್ಲಿ ಇದು ಪ್ರಮುಖವಾಗಿ ವೃತ್ತಿಯನ್ನು (ವ್ಯಾಪಾರವನ್ನು ಸೂಚಕವಾಗಿ ಇತ್ತು. ಅನಂತರ ಕ್ರಮೇಣವಾಗಿ ಜಾತಿ ಸೂಚಕವಾಗಿ ಬೆಳೆಯಿತು).

ಸೆಟ್ಟಿ ಇದರ : ಸಂಸ್ಕೃತ ಪದ – ಶ್ರೇಷ್ಠಿನ್
ಶ್ರೇಷ್ಠಿನ ಪದದ : ಕನ್ನಡ ರೂಪ – ಸೆಟ್ಟಿ
ಶ್ರೇಷ್ಠಿನ ಮೂಲದಲ್ಲಿ ಪ್ರತಿಷ್ಠಾಸೂಚಿ ಪದವಾಗಿದ್ದನು ಕಾಣುತ್ತೇವೆ[೮].

ಪ್ರಾಚೀನ ಕನ್ನಡ ನಾಡಿನಲ್ಲಿ ಅನೇಕ ಶಾಸನಗಳಲ್ಲಿ ಇಂತಹ ಸೆಟ್ಟಿಯರ ಉಲ್ಲೇಖವು ಕಂಡು ಬರುತ್ತದೆ. ಕ್ರಿ.ಶ. ೧೧೮೧ ರ ಕಾಲದ ತೇರದಾಳ ಶಾಸನದಲ್ಲಿ ಈ ರೀತಿ ವಿವರಣೆಯನ್ನು ನಾವು ಕಾಣುತ್ತೇವೆ.

"ನಾನಾ ದೇಶಾಭ್ಯನ್ತರದ ಗವರೆಗಾತ್ರಿಗರಂ ಸೆಟ್ಟಿಗುತ್ತರುಂ ಮಹಾನಾಡಾಗಿ ನೆರೆದ ಸ್ಥಳದಲು"[೯].

ಎಂದು ಈ ರೀತಿಯಾಗಿ ಶಾಸನಗಳಲ್ಲಿ ಸೆಟ್ಟಿಯರ ಉಲ್ಲೇಖವಿದೆ. ಇವರು ಪ್ರಮುಖವಾಗಿ ವ್ಯಾಪಾರ ವೃತ್ತಿಯನ್ನೇ ಜೀವನೋಪಾಯವನ್ನಾಗಿಸಿಕೊಂಡಿದ್ದರು. ಈ ಸೆಟ್ಟಿಗಳು ಸರಕುಗಳನ್ನು ಎತ್ತು, ಕತ್ತೆ, ಕೋಣದ ಮೇಲೆ ಕೆಲವೊಂದು ಬಾರವನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗಿ ವ್ಯಾಪಾರವನ್ನು ನಿರ್ವಹಿಸುತ್ತಿದ್ದರೆಂಬ ಅಂಶ ಶಾಸನಗಳಿಂದ ಮನವರಿಕೆಯಾಗುತ್ತದೆ.

ಸೆಟ್ಟಿಗುತ್ತರು :

ಐತಿಹಾಸಿಕ ತೇರದಾಳ ಶಾಸನಗಳಲ್ಲಿ ಕಾಣಬರುವ ವರ್ತಕರ ಪ್ರಕಾರಗಳಲ್ಲಿ ಸೆಟ್ಟಿಗುತ್ತವು ಪ್ರಮುಖವಾದದ್ದು.

ಸೆಟ್ಟಿಗುತ್ತರ ಪೂರ್ವ ಪದ : **'ಸೆಟ್ಟಿ'** ಅಂದರೆ **'ವರ್ತಕ'** ಅರ್ಥವುಳ್ಳದ್ದು.
ಉತ್ತರಪದ : **'ಗುತ್ತ'** ಅಂದರೆ **'ಎತ್ತರವಾದ ಸ್ಥಳ'** ಎಂಬರ್ಥದಲ್ಲಿ ಬಳಕೆಯಾಗುತ್ತದೆ.
ಗುತ್ತ ಶಬ್ಧದ ಅರ್ಥ : **ಉನ್ನತವಾದ, ಶ್ರೇಷ್ಠವಾದ, ಹಿರಿಯ** ಎಂದಾಗುತ್ತದೆ.

ಇದರಿಂದ ಸೆಟ್ಟಿಗುತ್ತ ಹಿರಿಯ ವರ್ತಕ ಅಥವಾ ವರ್ತಕರಲ್ಲಿ ಉಚ್ಛ ಶ್ರೇಣಿಯವನೆಂದಾಗುತ್ತದೆ. ಒಟ್ಟಿನಲ್ಲಿ **'ಸೆಟ್ಟಿ'** ಯರಲ್ಲಿಯೇ **"ಉನ್ನತ ವರ್ಗ"** ಸೂಚಕ ಪದ ಸೆಟ್ಟಿಗುತ್ತವಾಗಿರುತ್ತದೆ[೧೦].

ಆದ್ದರಿಂದ ಪ್ರಾಚೀನ ಐತಿಹಾಸಿ ತೇರದಾಳದ ಕ್ರಿ.ಶ. ೧೧೨೩ ರ ಕಾಲದ ಶಾಸನದಲ್ಲಿ ಸೆಟ್ಟಿಗುತ್ತ ಪದದ ಹೆಸರನ್ನು ಸೂಚಿಸುತ್ತಿದ್ದು[೧೧]. ಇವರು ಸರಕು ಸೇವೆಗಳನ್ನು ಪ್ರಾಣಿಗಳ ಮೇಲೆ ಹೇರಿಕೊಂಡು ಗ್ರಾಮ ಪ್ರಮುಖವಾದ ಪಟ್ಟಣಗಳಿಗೆ ಹೋಗಿ ವ್ಯಾಪಾರವನ್ನು ಕೈಕೊಳ್ಳುವವರಾಗಿದ್ದ ವರ್ತಕರ ಪ್ರಕಾರಗಳಲ್ಲಿ ಒಬ್ಬರಾಗಿದ್ದಾರೆ.

ನಕರರು :

ಪ್ರಾಚೀನ ಕನ್ನಡ ನಾಡಿನಲ್ಲಿ ಇದೊಂದು ಪ್ರಮುಖವಾದ ವರ್ತಕ ಪ್ರಕಾರ ನಕರ ಎಂಬ ಪದವು ಶಾಸನಗಳಲ್ಲಿ ಪ್ರಸ್ಥಾಪವಿದೆ. ನಕರ ವೆಂದರೆ–ಅಂಗಡಿಯ ಸೆಟ್ಟಿಯರೆಂದು ಕರೆದಿರುವುದರಿಂದ ಸಂತೆ ಪಟ್ಟಣಗಳಲ್ಲಿ ಸ್ಥಿರವಾದ ಅಂಗಡಿ ವ್ಯಾಪಾರಿಗಳಿರುವರೆಂದು ಹೇಳಬಹುದು. ಇವರು ವಿವಿಧ ಸಂತೆ ಪೇಟೆಗಳಿಗೆ ಹೋಗಿ ಅಲ್ಲಿಂದ ವಿವಿಧ ಬಗೆಯ ಸರಕುಗಳನ್ನು ಖರೀದಿಸಿ ಬಯಲು ಅಂಗಡಿ ಹಾಗೂ ಮಳಿಗೆಗಳಲ್ಲಿಟ್ಟು ಮಾರಾಟ ಮಾಡುತ್ತಿದ್ದರು[೧೨]. ಇದೇ ರೀತಿಯ ಅರ್ಥ ನಕರ, ನಗರ, ಸಮಸ್ತ ನಕರ ಪದಗಳು ಶಾಸನಗಳಲ್ಲಿ ಕಂಡು ಬರುತ್ತದೆ.

ಕ್ರಿ.ಶ. ೧೧೨೩ ರ ಕಾಲದ ತೇರದಾಳ ಶಾಸನವು ಈ ಕೆಳಗಿನಂತೆ ತಿಳಿಯ ಪಡಿಸುತ್ತದೆ.

> **"ಸಕವಷ(ರ್ಷ) ೧೦೪೫ ನೆಯ ಶುಭಕ್ರಿತ್ಸಂವತ್ಸರದ ವೈಶಾಖದ ಪುಣ್ಣಮಿ ಬ್ರಹಸ್ಪತಿ ವಾರದಲು ಗೊಂಕ ಜಿನಾಲಯಕ್ಕೆ ಪನ್ನಿರ್ವ್ವಗ್ಗಾವುಂಡುಗಳುಮಂ ಸಮತ್ತ ಪರಿವಾರ ಪ್ರಜೆಗಳಮುಂ ಆ ಸ್ಥಳದ ಸೆಟ್ಟಿ"**

ಗುತ್ತ ಮುಖ್ಯ ಸಮಸ್ತ ನಕರಂಗಳುಮಂ ಬರಿಸಿ ನೇಮಿತೀರ್ತ್ಥೇಶ್ವರನ ಬಸದಿಯ ರಿಷಿಯ ರಾಹಾರದಾನಕ್ಕಂ ದೇವರಷ್ಟವಿಧಾರ್ಚನೆಗಂ ಖಡಪ್ಪು(ಸು)ಟಿತ ಜೀರ್ಣ್ಣೋದ್ಧಾರಕ್ಕೆ ಪೆಸರ್ಗ್ಗೊಂಡು ಎಂದಿದೆ[೧೩].

ಹೀಗೆ ನಕರರು ಪಟ್ಟಣ ಪ್ರದೇಶಗಳಲ್ಲಿ ಇದ್ದುಕೊಂಡು ಸತತ ಪರಿಶ್ರಮ ಪ್ರಯತ್ನಗಳ ಮೂಲಕ ವ್ಯವಹಾರ ಕಾರ್ಯಗಳಿಗೆ ಜೀವ ತುಂಬುವುದರೊಂದಿಗೆ ದಾನ-ದತಿಗಳನ್ನು ನೀಡುವುದರ ಮೂಲಕ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವುದರ ಮೂಲಕ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ.

ಗವರೆ :

ಪ್ರಾಚೀನ ಕಾಲದಲ್ಲಿ ವ್ಯಾಪಾರ ಮಾಡುವ ಪ್ರಮುಖ ವರ್ತಕರ ಪ್ರಕಾರ ಪ್ರಾಚೀನ ಐತಿಹಾಸಿಕ ತೇರದಾಳ ಗ್ರಾಮದ ಸುತ್ತಮುತ್ತಲ್ಲಿನಲ್ಲಿ ಹೆಚ್ಚಾಗಿ ವೀಳ್ಯದೆಲೆಯನ್ನು ಬೆಳೆಯುತ್ತಿದ್ದರು. ಇವರು ಕತ್ತೆ ಮೊದಲಾದ ಪ್ರಮುಖ ಪ್ರಾಣಿಗಳ ಮೇಲೆ ವೀಳ್ಯದೆಲೆಯನ್ನು ಹೆರಿಕೊಂಡು ಸುತ್ತಮುತ್ತಲ್ಲಿನ ಊರಿಂದೂರಿಗೆ ಅಲೆಯುತ್ತ ವ್ಯಾಪಾರ ಮಾಡುವ ವರ್ತಕರ ಪ್ರಕಾರವಾಗಿದು[೧೪].

ಪ್ರಾಚೀನ ಮಧ್ಯಕಾಲೀನ ಕನ್ನಡ ನಾಡಿನ ಅನೇಕ ಶಾಸನಗಳಲ್ಲಿ ಗವರೆ ವರ್ತಕರ ಉಲ್ಲೇಖ ಬರುತ್ತಿದ್ದು ತೇರದಾಳ ಗ್ರಾಮದ ಕ್ರಿ.ಶ. ೧೧೮೧ರ ಕಾಲದ ಶಾಸನದಲ್ಲಿ **"ನಾನಾ ದೇಶಭ್ಯನ್ತರದ ಗವರೆ ಗಾತ್ರಿಗರುಂ"** ಎಂಬ ಉಲ್ಲೇಖವಿದೆ[೧೫].

ಗಾತ್ರಿಗರು :

ವೀಳ್ಯೆದೆಳೆಯನ್ನು ವ್ಯವಸ್ಥಿತವಾಗಿ ಜೋಡಿಸಿ ಅದರ ಸುತ್ತಲು ಬಾಳೆಗೆಜ್ಜೆ ಸುತ್ತಿ ಅವುಗಳನ್ನು ಚೆನ್ನಾಗಿ ಕಟ್ಟಿ ತೆಲೆಯ ಮೇಲೆ ಹೆಗಲು ಮೇಲೆ ಹೊತ್ತು ಇಲ್ಲವೇ ಪ್ರಾಣಿಗಳ ಮೇಲೆ ಹೇರಿಕೊಂಡು ವ್ಯಾಪಾರ ಮಾಡುವವರು ಗಾತ್ರಿಗರು ಆಗಿದ್ದರು. ಶಾಸನೋಕ್ತ ಎಲೆಯ ಗಾತ್ರಿಗರು[೧೬] ಕುರಿತು ತೇರದಾಳ ಗ್ರಾಮದ ಶಾಸನಗಳು ಪರಿಚಯಿಸುತ್ತವೆ. ಉದಾಹರಣೆಗಾಗಿ ಕ್ರಿ.ಶ. ೧೧೨೩ ರ ಕಾಲದ ಶಾಸನದಲ್ಲಿ –

> **ಹಲಸಿಗೆ ಹನ್ನಿಬ್ಚಾಸಿರದ ಹೆಬ್ಬಟ್ಟೆಯಲು ನಡೆದ ಗಾತ್ರಿಗರು**
> **ದೇವರಿಗೆ ಅಷ್ಟವಿದಾರ್ಚನೆ ನಡೆವನ್ತಾಗಿ ಹೇಱಿಂಗೆ ನೂಱುವೊ**
> **ಳ್ಳೆಲೆಯಂ ಬಿಟ್ಟರು**[೧೭].

ಎಂಬ ಅಂಶ ಕಂಡುಬರುತ್ತದೆ. ಒಟ್ಟಿನಲ್ಲಿ ವೀಳ್ಯದಲೆ ವ್ಯಾಪಾರವನ್ನು ನಾಡಿನ ತುಂಬ ಬೆಳೆಸಿದ ಕೀರ್ತಿ ಇವರದು. ಎಲೆಯ ಉತ್ಪಾದನೆ ಹಾಗೂ ಮಾರಾಟಗಳಲ್ಲಿ ಗಣನೀಯ ಪಾತ್ರ ಸಾಧಿಸಲು ಈ ಗವಱೆ ಗಾತ್ರಿಗರು ಅವಿರತವಾಗಿ ದುಡಿದಿರುವದನ್ನು ಕಾಣುತ್ತೇವೆ.

೪.೬ ಶ್ರೇಣಿಗಳು (ಸಂಘಗಳು) :

ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದಲ್ಲಿ ಕುಶಲಕರ್ಮಿ ಹಾಗೂ ವರ್ತಕರು ತಮ್ಮ ತಮ್ಮ ವೃತ್ತಿಗಳಿಗೆ ಸಂಬಂಧಿಸಿದ ವಿವಿಧ ಬಗೆಯ ಶ್ರೇಣಿಗಳನ್ನು ರಚಿಸಿಕೊಂಡಿದ್ದರು. ಕುಶಲಕರ್ಮಿಗಳು ತಮ್ಮ ಜಾತಿಗಳಿಗೆ & ವೃತ್ತಿಗಳ ಆಧಾರದ ಮೇಲೆ ಶ್ರೇಣಿಗಳನ್ನು ರಚಿಸಿಕೊಂಡಿದ್ದರು. ಕುಶಲಕರ್ಮಿಗಳು ಹೆಚ್ಚಾಗಿ ಅಗತ್ಯ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿದ್ದರು.

ವರ್ತಕ ಶ್ರೇಣಿ (ಸಂಘಗಳು) :

ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದಲ್ಲಿ ವೃತ್ತಿಗಳು ಹುಟ್ಟಿ ಬೆಳೆದ ತರುವಾಯವೇ ಸಂಘಗಳ ರಚನಾಕಾರ್ಯಗಳು ಆರಂಭಗೊಂಡವು. ಕೆಲವೊಂದು ಪ್ರಮುಖ ವೃತ್ತಿಯವರು ಮಾತ್ರ ಸಂಘಗಳನ್ನು ಸಂಯೋಜಿಸಿಕೊಂಡರು. ಅದರಲ್ಲಿ ಪ್ರಮುಖವಾಗಿ ಹೆಚ್ಚಾಗಿ ಕುಶಲ ಕರ್ಮಿಗಳು ಅಗತ್ಯ ವಸ್ತುಗಳು ಉತ್ಪಾದನೆಯಲ್ಲಿ ತೊಡಗಿದ್ದರೆ ವರ್ತಕ ಶ್ರೇಣಿಗಳು ಅವುಗಳ ಅಗತ್ಯ ಸಾಗಾಣಿಕೆ ಮತ್ತು ಮಾರಾಟದಲ್ಲಿ ತೊಡಗಿದ್ದರು. ಆರ್ಥಿಕವಾಗಿ ಪ್ರಬಲವಾಗಿದ್ದ ವರ್ತಕ ಶ್ರೇಣಿಗಳು ಕುಶಲ ಕರ್ಮಿಗಳು ಮತ್ತು ಇತರೆ ಸಂಘಗಳಿಗೆ ಸಾಲದ ಸೌಲಭ್ಯಗಳನ್ನು ಒದಗಿಸುತ್ತಿದ್ದವು[೧೮].

ವರ್ತಕ ಶ್ರೇಣಿಗಳ ಮುಖಂಡ ಅಥವಾ ಅಧ್ಯಕ್ಷನನ್ನು ಪಟ್ಟಣಶೆಟ್ಟಿ ಎಂದು ಕೆಲವು ಭಾಗಗಳಲ್ಲಿ ಪಟ್ಟಣ ಸ್ವಾಮಿ ಎಂದು ಕರೆಯಲ್ಪಡುತ್ತಿದ್ದರು. ಶ್ರೇಣಿಗಳ ಕಾರ್ಯಕಲಾಪ ಹಾಗೂ ಸಭೆಗಳು ಹೆಚ್ಚಾಗಿ ಅವರವರ ದೇವಾಲಯಗಳಲ್ಲಿ ನಡೆಯುತ್ತಿದ್ದವು.

ವರ್ತಕ ಸಂಘದ ಪ್ರಕಾರಗಳಲ್ಲಿ ಒಂದಾದ ವಿನಿಮಯ ಸಂಘದಲ್ಲಿ ಸೇರ ಬರುವ "ಅಯ್ಯಾವೊಳೆ ಐನೂರ್ವರ್" ಸಂಘದ ಉಲ್ಲೇಖವು ಕನ್ನಡ ನಾಡಿನ ಹಲವು ಶಾಸನಗಳಲ್ಲಿ ತೋರಿ ಬರುವಂತೆ[೧೯]. ಕ್ರಿ.ಶ. ೧೧೮೧ರ ಕಾಲದ ತೇರದಾಳದ ಶಾಸನದಲ್ಲೆಯೂ ಕಂಡು ಬರುತ್ತದೆ.

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಶತವೀರ ಶಾಸನಲಬ್ಧಾನೇಕ
ಗುಣಗಣಾಲಂಕೃತ ಸತ್ಯ ಶೌಚಾಚಾರ ಚಾರುಚಾರಿತ್ರ ನಯವಿನಯವಿಜ್ಞಾನ ವೀರಬಣಂಜು
ಧರ್ಮ್ಮಪ್ರತಿಪಾಳನ ವಿಶುದ್ಧ

ಗುಡ್ಡಧ್ವಜ ವಿರಾಜಿತನೇಕ ಸಾಹಸಲಕ್ಷ್ಮೀ ಸಮಾಲಿಂಗಿತ ವಕ್ಷಸ್ಥಳ ಭುವನ ಪ್ರಕಾರಮೋನ್ನತರುಂ
ಮುಖಪಟ್ಟೆ ಗುರುಪಟ್ಟೆ ಬಲದೇವ ವಾಸುದೇವ ಖಂಡಳಿ ಮೂಳಭದ್ರೆ ವಂಶೋದ್ಭವರುಂ
ಪದ್ಮಾವತೀದೇವಿ ಲಬ್ಧವರಪ್ರಸಾದರು.

ಮಪ್ಪ ಶ್ರೀಮದಯ್ಯಾವಳೆಯಯ್ನೂರ್ವ್ವಸ್ವಾಮಿಗಳು ಕುತ್ತಳ ವಿಷದೊಳು ಗ್ರಾಮ ನಗರ ಖೇಡ ಕರ್ವ್ವಡ ಮಡಂಬ ದ್ರೋಣಾಮುಖ ಪಟ್ಟಣಂಗಳಿಂದಮನೇಕ ಮಾಟಕೂಟ ಪ್ರಸಾದ ದೇವಾಯತನಂಗಳಿಂದಮೊಪ್ಪು.

ವಗ್ರಹಾರ ಪಟ್ಟಣಂಗಳಿಂದ ಅತಿಶಯವಪ್ಪ ಶ್ರೀಮತು ಕೂಂಡಿ ಮೂಱುಸಾಸಿರದೊಳಗೆ ಹನ್ನೆರಡಕ್ಕಂ ಮೊದಲ ಬಾಡಂ ಬಣಂಜು ವಟ್ಟಣಂ ನಡವೆಯ ಮನೆ ತೇರಿದಾಳದೊಳು[೨೦].

ಹೀಗೆ ಈ ಮೇಲಿನ ಶಾಸನ ಪಾಠದಲ್ಲಿ ಉಲ್ಲೇಖಗೊಂಡಿರುವ ಅಯ್ಯಾವೊಳೆ ಐನೂರ್ವರ್ ಸ್ವಾಮಿಗಳ ಸಂಘಗಳ ಕುರಿತು ಅವರ ವಂಶ, ದೈವ, ಚಿಹ್ನೆ, ಪ್ರಶಸ್ತಿಗಳ ಕುರಿತು ಚರ್ಚಿಸುವುದು ಅತಿ ಅಗತ್ಯವಾಗಿದೆ.

ವಂಶ :

ಬಲದೇವ ವಾಸುದೇವ ಖಂಡಳಿ ಮೂಳಭದ್ರ ವಂಶೋದ್ಭವರುಂ
ವಾಕ್ಯಗಳು ಖಂಡಳಿ ಮೂಲ ಭದ್ರ ವಂಶಜರು.

ಈ ಸಂಘದ ಸದಸ್ಯರು ಅಂತೆಯೇ ಕ್ರಿ.ಶ. ೧೧೮೧ ರ ಕಾಲದ ತೇರದಾಳ ಶಾಸನದಲ್ಲಿ ಬಲದೇವ, ವಾಸುದೇವ ಉಲ್ಲೇಖವಿದೆ[೨೧].

ದೈವ :

ಶ್ರೇಣಿಗಳು ತಮ್ಮದೇ ಆದ ದೈವ ಹಾಗೂ ಚಿಹ್ನೆಗಳನ್ನು ಹೊಂದಿದವು ಹಿಂದೂಗಳಲ್ಲಿ ಶಕ್ತಿಯ ಆರಾಧನೆಗೆ ವಿಶೇಷವಾದ ಸ್ಥಾನವನ್ನು ನೀಡಲಾಗಿದೆ. "ಅಯ್ಯಾವೊಳೆ ಐನೂರ್ವರು ಸ್ವಾಮಿಗಳು" ಹಿಂದೂ ಪರಂಪರೆಯಲ್ಲಿ ನಡೆದು ಬಂದವರು. ಕ್ರಿ.ಶ. ೧೧೮೧ ರ ಕಾಲದ ತೇರದಾಳ ಶಾಸನಗಳಲ್ಲಿ ಇವರನ್ನು ಪದ್ಮಾವತೀದೇವೀಲಬ್ದ ವರಪ್ರಸಾದರು ಜೈನ ವರ್ತಕರ ಶ್ರೇಣಿಗೆ ಪದ್ಮಾವತೀದೇವೀ ಆರಾಧ್ಯ ದೇವತೆಯಾಗಿದ್ದಳು[೨೨] ಎಂದು ಕರೆದಿರುವುದರಿಂದ ಇವರು ಶಕ್ತಿಯ ಪರಮಾರಾಧಕರೆಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಧರ್ಮ ಚಕ್ರ ಅವರ ಪ್ರಮುಖ ವರ್ತಕ ಚಿಹ್ನೆಯಾಗಿದ್ದಿತು.

ಚಿಹ್ನೆಗಳು :

ರಾಜ್ಯ ಚಿಹ್ನೆಗಳನ್ನು ಹೆಚ್ಚಾಗಿ ಪ್ರಭು ವರ್ಗಕ್ಕೆ ಮಾತ್ರ ಸೀಮಿತವಾಗಿದ್ದವು. ಕೆಲವೊದು ಸಲ ಚಿಹ್ನೆಗಳನ್ನು ಸೈಯ್ಯದ ದಂಡನಾಯಕರುಗಳಿಗೆ, ವಿದ್ವಾಂಸರಿಗೆ, ವೀರರಿಗೆ, ಚಕ್ರವರ್ತಿಯ ಬಿರುದುಗಳನ್ನು

ಮತ್ತು ರಾಜ ಚಿಹ್ನೆಗಳನ್ನು ದಯಪಾಲಿಸುತ್ತಿದ್ದರು. ಪ್ರಜಾ ವರ್ಗಕ್ಕೆ ಯಾವುದೇ ಕಾರಣಕ್ಕೆ ಸ್ವತಂತ್ರವಾಗಿ ರಾಜ ಚಿಹ್ನೆಗಳನ್ನು ಹೊಂದುವ ಅಧಿಕಾರವಿರಲಿಲ್ಲ. ಆದರೆ ಇವರಿಗೆ ಸಂಬಂಧಿಸಿದ "ಶ್ವೇತಪತ್ರ ಚಾಮರಾದ್ಯನೇಕ ರಾಜ್ಯಲಕ್ಷಣಾಲಕ್ಷಿತರುಂ" ವಾಕ್ಯ ಅಯ್ಯಾವೊಳೆ ಐನೂರ್ವರು (ಅತಂರ ರಾಜ ಚಿಹ್ನೆ)ಗಳನ್ನು ಹೊಂದಿದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆ. ಕಾರಣ ರಾಜ್ಯದಲ್ಲಿ ಚಕ್ರವರ್ತಿಗೆ ಸಮಾನವಾದ ಸ್ಥಾನಮಾನ, ವಾದ್ಯ, ಧ್ವಜ, ಲಾಂಛನ, ಬಿರುದು-ಬಾವಲಿ ಮುಂತಾದ ಅಧಿಕಾರವನ್ನು ಅಯ್ಯಾವೊಳೆ ಐನೂರ್ವರು ಸ್ವಾಮಿಗಳು ಅಧಿಕೃತವಾಗಿ ಪಡೆದಿದ್ದರೆಂದು ತಿಳಿದು ಬರುತ್ತದೆ.

ಕ್ರಿ.ಶ. ೧೧೮೧ ರ ಕಾಲದ ತೇರದಾಳ ಶಾಸನವು ಅಯ್ಯಾವೊಳೆ ಐನಾರ್ವರ್ ಸ್ವಾಮಿಗಳುಳ್ಳ ಸಂಘವು 'ಗುಡ್ಡ -ಧ್ವಜ' ವನ್ನು ತಮ್ಮ ಚಿಹ್ನೆಯನ್ನಾಗಿ ಮಾಡಿಕೊಂಡಿದರೆಂಬುದನ್ನು ತಿಳಿಯಪಡಿಸುತ್ತದೆ[೨೩].

ಪ್ರಶಸ್ತಿ :

ಪ್ರಶಸ್ತಿ ಎಂಬ ಅಂಶವು ಶಾಸನಗಳಲ್ಲಿ ಇವರನ್ನು ಕುರಿತು ಎದ್ದು ಕಾಣುವ ಭಾಗವಾಗಿದೆ. ಅಯ್ಯಾವೊಳೆ ಐನೂರ್ವರನ್ನು ಪ್ರಸ್ತಾಪಿಸುವ ಶಾಸನಗಳಲ್ಲಿ ಕೆಲವು ಪ್ರಶಸ್ತಿಯಿಂದಲೇ ಪ್ರಾರಂಭವಾಗುತ್ತವೆ. ಇದಕ್ಕೆ ಅತ್ಯುತ್ತಮ ನಿದರ್ಶನವಾಗಿ ಕ್ರಿ.ಶ. ೧೧೮೧ ರ ಕಾಲದ ತೇರದಾಳದ ಶಾಸನವು ಅಯ್ಯಾವೊಳೆ ಐನೂರ್ವರು ಸ್ವಾಮಿಗಳ ಬಗೆಗಿನ ಪ್ರಶಸ್ತಿಗಳ ಕುರಿತು ಸಕಲ ಸಾಮಗ್ರಿ ಒದಗಿಸುತ್ತದೆ. ಈ ವರ್ತಕ ಸಂಘಕ್ಕೆ ಇರುವ ಪ್ರಶಸ್ತಿಗಳ ಕುರಿತು ಈ ಶಾಸನವು ಇಂತು ಮಾಹಿತಿ ಒದಗಿಸುತ್ತದೆ.

> **"ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಶತವೀರ ಶಾಸನಲಬ್ಧಾನೇಕ ಗುಣಗಣಾಲಂಕೃತ ಸತ್ಯ ಶೌಚಾಚಾರ ಚಾರುಚಾರಿತ್ರ ನಯವಿನಯವಿಜ್ಞಾನ ವೀರಬಣಂಜು ದರ್ಮ್ಮಪ್ರತಿಪಾಳನ ವಿಶುದ್ಧ".**

ಎಂಬ ಶಾಸನ ಉಲ್ಲೇಖಿತ ಅಂಶಗಳೆಲ್ಲವೂ ದೊರೆಗಳ ಪ್ರಶಸ್ತಿಯನ್ನು ಎತ್ತಿ ತೋರಿಸುತ್ತವೆ[೨೪].

ಹೀಗೆ ಪ್ರಾಚೀನ ಐತಿಹಾಸಿಕ ತೇರದಾಳ ಶಾಸನ ಉಲ್ಲೇಖಿತ ಅಯ್ಯಾವೊಳೆ ಐನೂರ್ವರ ಸ್ವಾಮಿಗಳ ಗುಣಶೇಷತೆ, ಗುಣಶೀಲತೆ, ಗುಣಶ್ರೀಮಂತಿಕೆಗಳನ್ನು ಕುರಿತು ಶಾಸನಗಳು ಕೊಂಡಾಡುತ್ತವೆ.

ತೂಕ ಮತ್ತು ಅಳತೆಗಳು :

ಕನ್ನಡ ನಾಡಿನ ಅಂದಿನ ಸಮಾಜದ ವ್ಯವಹಾರಗಳಲ್ಲಿ ಬಳಸಲ್ಪಡಬಹುದಾದ ತೂಕ & ಅಳತೆಗಳ ವಿಷಯವಾಗಿ ಶಾಸನಗಳ ಮುಖಾಂತರ ನಮಗೆ ಹೆಚ್ಚಿನ ಮಾಹಿತಿಗಳು ಒದಗಿ ಬರುವದಿಲ್ಲವಾದರೂ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದಲ್ಲಿ ದೊರೆತ ಕೆಲ ಶಾಸನಗಳಲ್ಲಿ ತೂಕಗಳ ವಿವರವನ್ನು ತಿಳಿಯದೇ ಕೇವಲ ಅಳತೆ ಮಾಪನಗಳ ವಿಷಯವಾಗಿ ಶಾಸನಗಳಲ್ಲಿ ಉಲ್ಲೇಖವಿರುವುದನ್ನು ಕಾಣುತ್ತೇವೆ. ತೇರದಾಳದ ಅಂದಿನ ಸಾಮಾಜಿಕ ಪದ್ಧತಿಯಲ್ಲಿ ಕೆಲವು ದಿನನಿತ್ಯದ ಜೀವನಕ್ಕಾಗಿ ಬಳಸಲ್ಪಡುವ ವಸ್ತುಗಳನ್ನು ಅಳತೆಯ ಸಾಧನದಿಂದ ಅಳೆಯುವ ಪದ್ಧತಿಯು ರೂಢಿಯಲ್ಲಿ ಇತ್ತು. ಉದಾಹರಣೆಗೆ ಎಣ್ಣೆಯನ್ನು ವ್ಯಾಪಾರಿಗಳು 'ಸೊಲ್ಲಿಗೆ' ಎಂಬ ಸಾಧನದಿಂದ ಅಳೆಯುವ ವಾಡಿಕೆ ಇತ್ತು.

ಕ್ರಿ.ಶ. ೧೧೨೩ ರ ಕಾಲದ ತೇರದಾಳದ ಶಾಸನವೊಂದು ಎಣ್ಣೆಯನ್ನು ಅಳೆಯುವ ಮಾಪನ ಕರಿತು ಈ ಕೆಳಗಿನಂತೆ ಮಾಹಿತಿಯನ್ನು ನೀಡುತ್ತದೆ.

> .... **ತೆಲ್ಲಿಗರು ಮಾನ್ಯ**
> **ಸಾಮ್ಯವೆನ್ನಟೆ ದೇವರ ಸಂಜೆ ಸೊಡರಿಂಗಂ ಧೂಪಾರತಿಗಂ ಗಾಣಕ್ಕೆ ಸೊಲ್ಲಗೆ**
> **ಹೊಱಗನಿಂ ಬಂದ ಎಣ್ಣೆಯ ಕೊಡಕ್ಕೆ ಸೊಲ್ಲಗೆ ಯಿನ್ತವಂ**
> **ಬಿಟ್ಟರು ಗಣ**[೨೯].

ಎಂಬ ಶಾಸನದ ವಿವರಣೆಯಲ್ಲಿ "ಸೊಲ್ಲಿಗೆ" ಮಾಪನದ ಪದವು ಬಳಕೆಯಲ್ಲಿದ್ದು ಇದು ಎಣ್ಣೆಯನ್ನು ಅಳತೆಯುವ ಒಂದು ಚಿಕ್ಕ ಸಾಧನವಾಗಿದೆ.

ನಾಣ್ಯಗಳು :

ಪ್ರಾಚೀನ ಕಾಲದಲ್ಲಿ ಹಣವು ಚಲಾವಣೆಗೆ ಬರುವ ಪೂರ್ವದಲ್ಲಿ ವ್ಯವಹಾರಗಳಲ್ಲಿ ವಸ್ತು ವಿನಿಮಯ ಪದ್ಧತಿ ಅಸ್ಥಿತ್ವದಲ್ಲಿ ಇತ್ತು.

ವಸ್ತು ವಿನಿಮಯ ಪದ್ಧತಿವೆಂದರೆ : ವಸ್ತುಗಳನ್ನು ಕೊಟ್ಟ ತಮಗೆ ಅಗತ್ಯವಿರುವ ವಸ್ತುಗಳನ್ನು ಪಡೆಯುವ ಪದ್ಧತಿಗೆ ವಸ್ತು ವಿನಿಮಯ ಪದ್ಧತಿ ಎನ್ನುವರು. ಇದು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಬೆಳದು ಬಂದದ್ದಾಗಿದೆ. ಮುಂದೆ ವ್ಯವಹಾರ ಭರದಿಂದ ಬೆಳೆಯಲು ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಹಣದ ಪಾತ್ರ ಪ್ರಮುಖವಾದದರಿಂದ ಹಣ ಅಥವಾ ನಾಣ್ಯಗಳು ಅಸ್ಥಿತ್ವದಲ್ಲಿ ಬಂದವು. ಸಿಂಧೂ ನದಿಯ ನಾಗರಿಕತೆಯ ಕಾಲದಿಂದಲೇ

ನಾಣ್ಯಗಳ ಬಳಕೆ ಕಂಡು ಬಂದಿದ್ದು, ಪ್ರಾಚೀನ ಮಧ್ಯಕಾಲೀನ ಕರ್ನಾಟಕದ ಕೂಂಡಿನಾಡು ೩೦೦೦ ನಾಡಿನ ತೇರದಾಳ ಕಂಪಣದಲ್ಲಿಯೂ ಹಲವು ಪ್ರಕಾರದ ನಾಣ್ಯಗಳು ಬಳಕೆಯಲ್ಲಿರುವುದು ಶಾಸನಾಧಾರಗಳಿಂದಲೇ ತಿಳಿದು ಬರುತ್ತದೆ.

ಕ್ರಿ.ಶ. ೧೧೨೩ ರ ಶಾಸನ ಮತ್ತು ಕ್ರಿ.ಶ ೧೧೮೧ ರ ಕಾಲದಲ್ಲಿ ತೇರದಾಳ ಶಾಸನಗಳು ನಾಣ್ಯಗಳ ಕುರಿತು ವಿವರಣೆ ನೀಡುತ್ತವೆ.

ಅಲ್ಲಿಯ ಸೆಟ್ಟಿಗುತ್ತ ಮುಖ್ಯನಗರಂಗಳು ತಾವು ಮಾಱಿಕೊಣ್ಬ ಭಣ್ಡ ಮಾಣಿಕ ಪಟ್ಟ ಸೂತ್ರವಾದಡಂ ಹೊ[೦]ಗೆ ವೀಸ ಲಾಭದಾಯದ ಅಡಕೆ ಹೊಗೆ ಹನ್ನೊಂದು ತಾವು ತೆಗೆದ ಯೆಲೆಯ ಹೇಱಿಗಂ ಅಗದ

ನರುವತ್ತಿಗರು ತೆಗೆದ ಹೇಱಿಗಂ ನೂಱಲೆ ಯಿನ್ತಿನಿತುವಂ ಬಿಟ್ಟರು.

.. ಮತ್ತಂ ಶಾಸನ

ಪರಿಹಾರಿಗರೆನ್ನದೆ ಪೊಕ್ಕಲೊನ್ದು ಪಣವಂ ಬಿಟ್ಟರು[೨೨].

ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದಲ್ಲಿ ಶಾಸನಗಳ ಆಧಾರದಿಂದ '**ವೀಸ್**' ಮತ್ತು '**ಪಣ**' ಎಂಬ ಹೆಸರಿನ ನಾಣ್ಯಗಳ ಅಸ್ಥಿತ್ವದಲ್ಲಿರುವದನ್ನು ಇವು ಸೂಚಿಸುತ್ತವೆ.

ಭೂ ಮಾಪನ :

ಅತೀ ಪ್ರಾಚೀನ ಕಾಲದಿಂದಲೂ ಭೂಮಿಯನ್ನು ಹೆಚ್ಚಾಗಿ ಕೋಲಿನಿಂದ ಅಳೆಯುವ ಪದ್ಧತಿ ರೂಡಿಯಲ್ಲಿತ್ತು. ಪ್ರಾಚೀನ ಮಧ್ಯಕಾಲೀನಲ್ಲಿ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದ ಶಾಸನಗಳಲ್ಲಿ ಕಂಡು ಬರುವ ಹತ್ತು ಹಲವು ರೀತಿಯ ವಿಧದ ಭೂ ಅಳತೆಯ ಕೋಲುಗಳ ಉಲ್ಲೇಖವನ್ನು ಕಾಣುತ್ತೇವೆ.

ಕ್ರಿ.ಶ. ೧೧೨೩ ರ ಕಾಲದ ಪ್ರಾಚೀನ ಐತಿಹಾಸಿಕ ತೇರದಾಳ ಶಾಸನವೊಂದರಲ್ಲಿ
ತೇರಿದಾಳದ ಪಶ್ಚಿಮ ಭಾಗದೊಳು ಹಾರುನಗೇರಿಯ
ಬಟ್ಟೆಯಿಂ ಬಡಗಲು ಯಿಪ್ಪತ್ತನಾಲ್ಗೇಣ ಕೋಲೊಳು

ಕೊಟ್ಟ ಮತ್ತರ್ ಅ(ಎ)ಪ್ಪತ್ತೆರಡು ದೇವಿಯಣ ಬಾವಿಯಂ ತೆಂಕಲಾ ಕೋಲಲು ಕೊಟ್ಟ ತೋಂಟ ಮತ್ತರೊನ್ದು ಅಸ್ತು ಮತ್ತರು.

ಎಂಬ ಅಂಶ ಈ ಶಾಸನದಲ್ಲಿ ಗೇಣು, ಕೋಲು ಮತ್ತು ಮತ್ತರು ಪದದ ಉಲ್ಲೇಖ ಬರುತ್ತದೆ[೨೭].

೪.೭ ತೆರಿಗೆ :

ಒಂದು ರಾಜ್ಯದ ಇಲ್ಲವೇ ನಾಡಿನ ಆಡಳಿತ ವ್ಯವಸ್ಥೆ ವ್ಯವಸ್ಥಿತವಾಗಿ ನಡೆಯಬೇಕಾದರೆ ವಿವಿಧ ಮೂಲಗಳಿಂದ ಆದಾಯ ಸಂಗ್ರಹವಾಗುತ್ತಿತ್ತು. ಅಂದಿನ ಸಮಾಜದಲ್ಲಿ ಅನೇಕ ರೀತಿಯ ತೆರಿಗೆಗಳು ಬಳಕೆಯಲ್ಲಿದ್ದವು.

ತೆರಿಗೆ ವಸೂಲಿಯನ್ನು **"ಗಿಡಗಳಿಗೆ ಉನವಾಗದಂತೆ ಹೂಗಳನ್ನು ಬಿಡಿಸಿಕೊಳುವ ಕ್ರಮಕ್ಕೆ ಹೋಲಿಸಲಾಗಿದೆ". ಅಧಿಕ ತೆರಿಗೆ ವಸೂಲಿಯಾದರೆ ಮೊಟ್ಟೆ ಇಡುವ ಕೋಳಿಯಿಂದ ನಿತ್ಯ ಒಂದೊಂದೇ ಮೊಟ್ಟೆ ಪಡೆಯುವ ಬದಲು ಒಮ್ಮೆಗೆ ಎಲ್ಲವನ್ನು ಪಡೆಂಯುಬೇಕೆಂದು ಕೋಳಿಯನ್ನೇ ಕೊಯ್ಯದಂತಾಗುತ್ತದೆ.** ಆದ್ದರಿಂದ ತೆರಿಗೆ ವಸೂಲಿ ಅಧಿಕ ಪ್ರಮಾಣವಾಗಿರಲಿಲ್ಲ.

ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದಲ್ಲಿ ತೆರಿಗೆ ಕ್ರಮವನ್ನು ಪ್ರಮುಖವಾಗಿ ಕೇಳಗಿನಂತೆ ವಿಂಗಡಿಸಿದ್ದಾರೆ.

೧) **ಕೃಷಿ ತೆರಿಗೆ**
೨) **ನೀರಾವರಿ ತೆರಿಗೆ**
೩) **ಸಾರಿಗೆ ತೆರಿಗೆ**

೧) ಕೃಷಿ ತೆರಿಗೆ :

ರೈತರಿಗೆ ಹೊರೆಯಾಗದಂತೆ ಇರಬೇಕೆಂಬುದನ್ನು **ಜೇನು ಹುಳುಗಳು ಹೂವಿನಿಂದ ಮಕರಂದವನ್ನು ಸಂಗ್ರಹಿಸುವ ಹಾಗೆ ಕೃಷಿ** ತೆರಿಗೆಯನ್ನು ನಿಗದಿಪಡಿಸಿದ್ದರು.

ಭೂ ತೆರಿಗೆ ಉತ್ಪನಕ್ಕೆ ತಕ್ಕಂತೆ ಹಿತ ಮಿತವಾಗಿ ಅಧಿಕಾರಿಗಳಿಗೆ ಸೇರಬೇಕಾದ ಪಾಲನ್ನು ೧/೮, ೧/೬, ೧/೪, ೧/೨ ರ ದರದಲ್ಲಿ ನಿಗಧಿಗೊಳಿಸಲಾಗಿತ್ತು.

ಅ) ಕೃಷಿಯೇತರ ತೆರಿಗೆ :

ಕೃಷಿಯೇತರ ತೆರಿಗೆಗಳ ವ್ಯಾಪ್ತಿಗೆ ಕುಶಲ ಕಲೆಯ ವಸ್ತುಗಳು, ಹತ್ತಿಬಟ್ಟೆ, ವೀಳ್ಯದೆಳೆ, ಅಡುಗೆಎಣ್ಣೆ, ಬೆಲ್ಲ, ಮರದ ವಸ್ತುಗಳು ಮುಂತಾದವುಗಳ ಮೇಲೆ ತೆರಿಗೆಯನ್ನು ವಿದಿಸಿದ್ದರು.

ಗೌಡ ಶಾನುಭೋಗ ಮೊದಲಾದ ಗ್ರಾಮಾಧಿಕಾರಿಗಳು ಗ್ರಾಮ ಮಟ್ಟದಲ್ಲಿ ತೆರಿಗೆ ಸಂಗ್ರಹಿಸುತ್ತಿದ್ದರು. ಈ ಎಲ್ಲ ಬಗೆಯ ಭೂಮಿಗಳ ವಿವರವನ್ನೊಳಗೊಂಡ ದಾಖಲೆ ಅಥವಾ ಕಡತಗಳನ್ನು ಶಾನುಭೋಗರು (ಕರಣಿಕ, ಕುಲಕರ್ಣಿ) ಬರೆದಿಡುತ್ತಿದ್ದರು. ಗೌಡ ಮತ್ತು ಶಾನುಭೋಗರು ಆನುವಂಶಿಕ ಕಂದಾಯ ಅಧಿಕಾರಿಗಳಾಗಿದ್ದರು. ಒಂದು ಸೀಮೆಯ ಅಧಿಕಾರಿಯನ್ನು ನಾಡಗೌಡ ಅಥವಾ ಪಟ್ಟೆ ನಾಯಕ ಎಂದು ಕರೆಯುತ್ತಿದ್ದರು. ನಾಡಗೌಡ ಬಳಿ ಇಡೀ ಸೀಮೆ ಅಥವಾ ನಾಡಿನ ಗ್ರಾಮಗಳ ಕಂದಾಯ ಪಟ್ಟಿಗಳನ್ನು ಅಥವಾ ದಾಖಲೆಗಳನ್ನಿಡಲಾಗುತ್ತಿತ್ತು.

ಅಂದು ಕಂದಾಯವನ್ನು ವಸೂಲಿ ಮಾಡುವ ನಾಡಗೌಡರ ಆನುವಂಶತೆ ಮನೆತನವನ್ನು ಇಂದು ಕೂಡಾ ತೇರದಾಳ ಪಟ್ಟಣದಲ್ಲಿ ಅವರ ಮನೆತನವು ಬಹಳ ವ್ಯವಸ್ಥಿತಿಯಲ್ಲಿರುವದನ್ನು ನಾವು ಕಾಣುತ್ತೇವೆ.

ಆ) ನೀರಾವರಿ ತೇರಿಗೆ :

ನೀರಾವರಿ ಸೌಲಭ್ಯಕ್ಕೆ ಹೆಚ್ಚಿನ ಆಧ್ಯತೆಯನ್ನು ನೀಡಲಾಗುತ್ತು. ಕೃಷ್ಣಾ & ಘಟಪ್ರಭಾ ನದಿಯ ನೀರನ್ನು ನಾಲೆಗಳ ಮೂಲಕ ಹರಿಸಿ ಕೃಷಿ ಉತ್ಪನ್ನ ಸುಲಭವಾಗಿ ಸಾಧ್ಯವಾಗಿತ್ತು. ಈ ನೀರಾವರಿ ಭೂಮಿಗಳ ಮೇಲೆ ಉತ್ಪನ್ನದ ೫೦% ಭಾಗ ಮಾತ್ರ ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು.

ಇ) ಸಾರಿಗೆ ತೆರಿಗೆ :

ವರ್ತಕರು ತಮ್ಮ ಸರಕು ಸಾಗಾಣಿಕೆಗಳನ್ನು ಪ್ರಾಣಿಗಳ ಮೇಲೆ ಸಾಗುಸುತ್ತಿದ್ದರು. ಆದರೂ ಕೂಡಾ ತೆರಿಗೆಯನ್ನು ವಸೂಲಿ ಮಾಡುತ್ತಿದ್ದರು.

ಕ್ರಿ.ಶ. ೧೧೨೩ ರ ಕಾಲದ ತೇರದಾಳ ಶಾಸನವೊಂದರಲ್ಲಿ 'ಹೇವಿಂಗೆ' ಅಥವಾ 'ಹೆರ್ಜುಂಕ' ಸಾರಿಗೆ ತೆರಿಗೆ ಕುರಿತು ಉಲ್ಲೇಖವಿರುವುದನ್ನು ಕಾಣುತ್ತೇವೆ.

ಹಲಸಿಗೆ ಹನ್ನಿರ್ಚ್ಚಾಸಿರದ ಹೆಬ್ಬಟ್ಟೆಯಲು ನಡೆವ ಗಾತ್ರಿಗರು
ದೇವರಿಗೆ ಅಷ್ಟವಿದಾರ್ಚನೆ ನಡೆವನ್ತಾಗಿ ಹೇಜಿಂಗೆ ನೊಱುವೊ
ಳ್ಳೆಲೆಯಂ ಬಿಟ್ಟರು[೨೮].

ಈ ರೀತಿಯಾಗಿ ಸಾರಿಗೆ ತೆರಿಗೆ ಕುರಿತು ವಿವರನೆಯನ್ನು ಕಾಣುತ್ತೇವೆ.

ಈ ರೀತಿಯಲ್ಲಿ ಒಂದು ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಕಂಡು ಬರುವ ಅನೇಕ ಅಂಶಗಳು ಪ್ರಾಚೀನ ಮಧ್ಯಕಾಲಿನ ಐತಿಹಾಸಿಕ ಪ್ರಾಚೀನ ತೇರದಾಳದ ಕಂಪಣದಲ್ಲಿಯೂ ಕಂಡು ಬರುತ್ತಿದ್ದವಲ್ಲದೇ ಇದು ಕನ್ನಡ ನಾಡಿನಲ್ಲಿ ಅತ್ಯಂತ ಸಮೃದ್ಧಿ ನಾಡುಗಳಲ್ಲಿ ಐತಿಹಾಸಿಕ ಪ್ರಾಚೀನ ತೇರದಾಳವು ಒಂದಾಗಿತ್ತೆಂದು ಹೇಳುವಲ್ಲಿ ಯಾವ ಅನುಮಾನವೂ ಇಲ್ಲ.

: ಅಡಿ ಟಿಪ್ಪಣಿಗಳು :

೧) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೪ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ.

೨) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೪ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೩) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೪ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೪) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೪ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ.

೫) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ೮೯ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ.

೬) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೦೦ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ.

೭) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ೮೯ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ.

೮) ಶ್ರೀ ಹಿರೇಮಠ ಬಿ. ಆರ್. : ಶಾಸನಗಳಲ್ಲಿ ಕರ್ನಾಟಕದ ವರ್ತಕರು : ಪುಟ ಸಂಖ್ಯೆ : ೧೨

೯) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ.

೧೦) ಶ್ರೀ ಹಿರೇಮಠ ಬಿ. ಆರ್. : ಶಾಸನಗಳಲ್ಲಿ ಕರ್ನಾಟಕದ ವರ್ತಕರು : ಪುಟ ಸಂಖ್ಯೆ : ೩೦.

೧೧) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ.

೧೨) ಶ್ರೀ ಹಿರೇಮಠ ಬಿ. ಆರ್. : ಶಾಸನಗಳಲ್ಲಿ ಕರ್ನಾಟಕದ ವರ್ತಕರು : ಪುಟ ಸಂಖ್ಯೆ : ೩೪.

೧೩) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೭–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೧೪) ಶ್ರೀ ಹಿರೇಮಠ ಬಿ. ಆರ್. : ಶಾಸನಗಳಲ್ಲಿ ಕರ್ನಾಟಕದ ವರ್ತಕರು : ಪುಟ ಸಂಖ್ಯೆ : ೫೯

೧೫) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೧೬) ಶ್ರೀ ಹಿರೇಮಠ ಬಿ. ಆರ್. : ಶಾಸನಗಳಲ್ಲಿ ಕರ್ನಾಟಕದ ವರ್ತಕರು : ಪುಟ ಸಂಖ್ಯೆ : ೬೧.

೧೭) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೧೮) ಶ್ರೀ ಹಿರೇಮಠ ಬಿ. ಆರ್. : ಶಾಸನಗಳಲ್ಲಿ ಕರ್ನಾಟಕದ ವರ್ತಕರು : ಪು. ಸಂಖ್ಯೆ : ೭೧.

೧೯) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೩, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೦) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೧) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೨) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೩) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೩, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೪) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪು. ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೫) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೬) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೭) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೮) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ :೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ–೮೮, ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

* * *

ಅಧ್ಯಾಯ - ೫

ಧಾರ್ಮಿಕ ಸ್ಥಿತಿಗತಿಗಳು

ಅಧ್ಯಾಯ – ೫

ಧಾರ್ಮಿಕ ಸ್ಥಿತಿಗತಿಗಳು

ಭಾರತವು ಹಲವು ಜಾಗತಿಕ ಧರ್ಮಗಳ ತವರು ಮನೆಯಾಗಿದೆ. ಇಲ್ಲ ಹಲವಾರು ಬುಡಕಟ್ಟು ಜನಾಂಗದ ಧರ್ಮವನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಭಾರತವು ಅನೇಕ ಧರ್ಮಗಳ ಮತ್ತು ಜನಾಂಗಿಕ ಸಂಗ್ರಹಾಲಯವೂ ಆಗಿದೆ. ಈ ಮಾತು ಸಮಗ್ರ ಭಾರತದಂತೆ ಕರ್ನಾಟಕಕ್ಕೂ ಅನ್ವಯಿಸುತ್ತದೆ.

ಪ್ರಾಚೀನ ಕಾಲದಿಂದಲೂ ಕನ್ನಡ ನಾಡಿನ ಭವ್ಯ ಸಂಸ್ಕೃತಿಯನ್ನು ಹಲವಾರು ಅರಸು ಮನೆತಗಳು ಉಳಿಸಿ ಬೆಳೆಸಸಿಕೊಂಡು ಬಂದಿದೆ. ಕರ್ನಾಟಕದ ವಿವಿಧ ಅರಸು ಮನೆತನಗಳು ಧಾರ್ಮಿಕ ಚರಿತ್ರೆಯ ಜೊತೆಗೆ ರಾಜಕೀಯ ಚರಿತ್ರೆಯನ್ನು ವೈವಿಧ್ಯ ಹಾಗೂ ವೈಶಿಷ್ಟ ಪೂರ್ಣವಾಗಿ ಬೆಳೆಯಿಸಿಕೊಂಡು ಬಂದಿವೆ. ಇವುಗಳ ಒಂದು ವಿಶೇಷ ಲಕ್ಷಣವೆಂದರೆ ಕನ್ನಡ ನಾಡಿನಲ್ಲಿಯೇ ಹುಟ್ಟಿ ಬೆಳೆದ ಮತ ಪಂಥಗಳು ಭಾರತ ಹಾಗೂ ಇತರ ಎಲ್ಲ ಕಡೆಗಳಿಗೂ ಬೆಳೆಯಲು ಅವಕಾಶ ಮಾಡಿದನ್ನು ಕಾಣುತ್ತೇವೆ.

ಪ್ರಾಚೀನ ಧರ್ಮ ಯಾವುದು? ಎಂಬ ಮೂಲಭೂತ ಪ್ರಶ್ನೆಗೆ ಉತ್ತರ : **'ಪೂರ್ವಿಕರ ಸಮಾಧಿಗಳ ಪೂಜೆ'** ಎನ್ನಬಹುದು. ಸಮಾಧಿಗಳ ಪೂಜೆಯನ್ನು ನವ ಶಿಲಾಯುಗದಲ್ಲಿ ಭಾರತದ ಬಹು ಕಡೆಗಳಿಂದ ಕಂಡುಬಂದಿದೆ. ಈ ಸಮಾಧಿಗಳಲ್ಲಿ ಕಲ್ಲು, ಮಣ್ಣು, ಮತ್ತು ತಾಮ್ರದ ದೀಪದ ಕುಡಿಕೆಗಳು ಹಾಗೂ ಪೂರ್ವಿಕರ ಮಣ್ಣಿನ ಗೊಂಬೆಗಳು ಕಂಡುಬರುತ್ತವೆ. ಮುಂದಿನ ಹಂತದಲ್ಲಿ ಕಲ್ಲಿನ ನಾಗರಗಳ ಆರಾಧನೆಯನ್ನು ಕಾಣುತ್ತೇವೆ. ಅದನ್ನು ವಿಶೇಷವಾಗಿ ಮಹಿಳೆಯರು ಸಂತಾನ ಫಲಕ್ಕಾಗಿ ಪೂಜಿಸುವದನ್ನು ಕಾಣುತ್ತೇವೆ. ಕ್ರಮೇಣ ಶಿವಲಿಂಗದ ಪವಿತ್ರ ಕಲ್ಪನೆಯನ್ನು ನೀಡಲಾಯಿತು.

ಕೂಂಡಿನಾಡು ೩೦೦೦ ನಾಡು ಸೇರಿದಂತೆ ಈ ನಾಡಿನ ಹಲವಾರು ಕಂಪಣಗಳಲ್ಲಿ ಒಂದಾದ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮವು ಸಹ ಧಾರ್ಮಿಕ ಕ್ಷೇತ್ರದಲ್ಲಿ ತನ್ನದೇ ಆದ ವಿಶೇಷ ಪ್ರಭಾವವನ್ನು ಬೀರಿತ್ತೆಂಬುದಕ್ಕೆ ಈ ಗ್ರಾಮದಲ್ಲಿ ದೊರೆತ ಶಾಸನಗಳೇ ಜೀವಂತ ಸಾಕ್ಷಿಯಾಗಿವೆ. ಈ ನಾಡನ್ನು ಆಳಿದ ಆಯಾ ಅರಸರ ಕಾಲದಲ್ಲಿ ಬರೆಯಿಸಿದ ಶಾಸನಗಳು ಇಂದಿಗೂ ಕೂಡಾ ಜೀವಂತ

ಸಾಕ್ಷಿಯಾಗಿ ನಿಂತಿವೆ. ಹಲವಾರು ಪ್ರಮುಖ ಶಾಸನಗಳಲ್ಲಿ ಉಕ್ತವಾಗಿರುವ 'ಚತುಸ್ಸಮಯ' ಎಂಬ ಪದವು ಶೈವ, ವೈಷ್ಣವ, ಬೌದ್ಧ ಮತ್ತು ಜೈನ ಧರ್ಮಗಳ ಆಶ್ರಯವನ್ನೇ ಸಾರುತ್ತದೆ. ಕ್ರಿ.ಶ. ೧೧೨೩ರ ಕಾಲದ ತೇರದಾಳ ಗ್ರಾಮದ ಶಾಸನವು ಚತುಸಮಯಮನಾವಗಮೆಸೆವಾಱು ಮೆಸೆವ್[೧] ಎಂದು ಉಲ್ಲೇಖಿಸಿರುವುದರಿಂದ ಪ್ರಾಚೀನ ತೇರದಾಳ ೧೨ ಕಂಪಣಗಳ ಮೇಲೆ ಹೆಸರಿಸಲಾದ ಪ್ರಮುಖ ಧರ್ಮಗಳ ಆಶ್ರಯ ತಾಣವಾಗಿ ಪ್ರಾಚೀನ ಕಾಲದಿಂದಲೂ ತಲೆ ಎತ್ತಿತ್ತೆಂಬ ವಿಷಯಗಳನ್ನು ಶಾಸನಾಧಾರದಿಂದ ಮನದಟ್ಟಾಗುತ್ತದೆ. ಐತಿಹಾಸಿಕ ತೇರದಾಳ ಪ್ರದೇಶದಲ್ಲಿ ಬಾಳಿ ಬೆಳೆಗಿದ ಪ್ರಮುಖ ಧರ್ಮಗಳ ವಿವರಣೆ ಹಾಗೂ ನೀಡಿದ ದಾನ-ದತ್ತಿಗಳು ಹಾಗೂ ಗುರು ಪರಂಪರೆಯ ಇತಿಹಾಸವನ್ನು ಈ ಕೆಳಗಿನಂತೆ ತಿಳಿಯಬಹುದು.

೧) ಶೈವ ಧರ್ಮ
೨) ವೈಷ್ಣವ ಧರ್ಮ
೩) ಬೌದ್ಧ ಧರ್ಮ
೪) ಜೈನ ಧರ್ಮ

೫.೧ ಶೈವ ಧರ್ಮ :

ಅತ್ಯಂತ ಪ್ರಾಚೀನವಾದ ಧರ್ಮಗಳಲ್ಲಿ ಶೈವ ಧರ್ಮವು ಕೂಡಾ ಒಂದಾಗಿತ್ತು. ಇತಿಹಾಸವು ವೇದಗಳಿಗಿಂತಲೂ ಹಿಂದಕ್ಕೆ ಹೋಗುತ್ತದೆ. ಹರಪ್ಪ ಮೊಹೆಂಜೋದಾರಗಳ ಕಾಲದ ಸಂಸ್ಕೃತಿಯಲ್ಲಿ (ಕಾಲ ಸುಮಾರು ಕ್ರಿ.ಶ. ಪೂರ್ವ ೩೨೫೦ ರಿಂದ ೨೭೫೦) ಕಾಲದಲ್ಲಿ ಅಂದು ಸಮಾಜದಲ್ಲಿ ಶೈವ ಧರ್ಮದ ಉಲ್ಲೇಖಗಳಿರುವುದು ದೊರೆತ ಕುರುಹುಗಳಿಂದ ಮಾಹಿತಿಗಳು ತಿಳಿದು ಬರುತ್ತವೆ[೨].

ಕುಶಾಣರ ದೊರೆ ವೆಮ್ಮಕದ್ಧಿಸೆಸ್ ತನ್ನ ನಾಣ್ಯಗಳ ಮೇಲೆ ಶಿವನ ಚಿತ್ರ ಬಿಡಿಸಿ ತಾನು **"ಮಹೇಶ್ವರನ ಭಕ್ತ"**ನೆಂಬ ನೆಂದು ಹೇಳಿಕೊಳ್ಳುತ್ತಾನೆ[೩]. ಇದರಿಂದ ಈ ಧರ್ಮದ ಪ್ರಾಚೀನತೆಯು ಐತಿಹಾಸಿಕವಾಗಿ ಕ್ರಿ.ಶ. ೩ನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ.

ಸಾಮಾನ್ಯವಾಗಿ ಶೈವ ಮತದ ಎಲ್ಲಾ ಅನುಯಾಯಿಗಳೆಲ್ಲರೂ ಸಂಪೂರ್ಣವಾಗಿ ಲಿಂಗೋಪಾಸಕರು ಆಗಿದ್ದರು. ಶೈವ ಮತದ ಪ್ರಮುಖವಾದ ಹೆಗ್ಗುರುತು ಲಿಂಗವು ಆಗಿತ್ತು[೪]. ಕರ್ನಾಟಕದಲ್ಲಿ ಹೆಚ್ಚಾಗಿ ಪ್ರಾಚೀನ ಕಾಲದಿಂದಲೂ **'ಶಿವ'** ಮತ್ತು **'ಲಿಂಗ'**ಗಳನ್ನು ಆರಾದಿಸುತ್ತಿದ್ದರು ಎಂದು ತಿಳಿದು ಬರುತ್ತದೆ.

ಪ್ರಾಚೀನ ಕನಾಟಕದಲ್ಲಿ ಪ್ರಸಿದ್ಧ ಧರ್ಮಗಳಲ್ಲಿ ಒಂದಾದ ಶೈವ ಧರ್ಮವು ಕನ್ನಡ ನಾಡಿನ ತುಂಬಾ ಹರಡಿದಂತೆ ತೇರದಾಳ ಪ್ರದೇಶದಲ್ಲಿಯೂ ಹರಡಿತ್ತೆಂಬದಕ್ಕೆ ಶಾಸನಾಧಾರತೆ

ಉಲ್ಲೇಖವಿದೆ. ಕ್ರಿ.ಶ. ೧೧೮೧ರ ಕಾಲದ ತೇರದಾಳ ಶಾಸನವು ಈ ಕೆಳಗಿನಂತೆ ವಿವರಣೆಯನ್ನು ಒಳಕೊಂಡಿದೆ.

ಸ್ವಸ್ತಿ ಶ್ರೀಮತು ಕೊಣ್ಣಕುಸ್ನಾಚಾರ್ಯ್ಯಾಂನ್ವಯದ
ಶ್ರೀ ಮೂಲಸಂಘದ ದೇಶಿಯಗಣದ ಪೊಸ್ತಕಗಚ್ಛದ ಶ್ರೀ ಕೊಲ್ಲಾಪುರದ ನಿಂಬದೇವ
ಸಾಮನ್ತ ಮಾಡಿಸಿದ ಶ್ರೀ ರೂಪನಾರಾ

ಯಣದೇವರ ಬಸದಿಯ ಪ್ರತಿಬದ್ಧಮಪ್ಪ ತೇರಿದಾಳದ ಗೊಂಕ ಜಿನೇಂದ್ರ ಮಂದಿರಕ್ಕೆ
ಕೊಲ್ಲಾಪುರದಗಸ್ತ್ಯೇಶ್ವರದ ಕಣಗಿಲೇಶ್ವರದ ಮಾಹಾಲಕ್ಷ್ಮೀದೇವಿಯ ಗೋಕಾಗೆಯ
ಮಾಹಾಲಿಂಗದೇವರ ಯಿನ್ತೀ ಘಟಿಕಸ್ಥಾನದಾ

ಚ್ಚಾರ್ಯ್ಯರು ಮುಖ್ಯ ಏಳ್ಕೋಟಿಯ ಸಂಖ್ಯಾ ತಗಣಗಳು ಮಹಾಮಂಡಳಿಯಾಗಿ ತೇರಿದಾಳದ
ಮೂಲಸ್ಥಾನದ ಕಲಿದೇವಸ್ವಾಮಿಗೆ ಪ್ರತಿಬದ್ಧಂ ಮಾಡಿ ಆ ನೇಮಿನಾಥಸ್ವಾಮಿಯ
ಪ್ರತಿಷ್ಠಾ ಕಾಲದಲಾ ಗೊಂಕ ಜಿನಾಲಯದಾ

ಜಿನಾಯದಾಚಾರ್ಯ್ಯರಪ್ಪ ಪ್ರಭಾಚನ್ದ್ರ ಪಂಡಿತದೇವರ್ಗ್ಗಿದೆಮ್ಮ ಜೋಗವಟ್ಟಿಗೆಯ
ಸ್ಥಾನಮೆನ್ದು ಜೋಗವಟ್ಟಿಗೆಯನಿಕ್ಕಿದರು ॥ ಬಸದಿಯ ಮೇಲೆ ಸೂದ್ರಕನ ಸಿಂಹದ
ಚಕ್ರದ ಚಿಹ್ನೆಮೆವಿಂಬಿನ ತಿಸುಳದ ಘಂಟೆ

ಯಂ ಪಱಿಯೆಯನಾಗದೆನಿಪ್ಪವನೇಳುಕೋಟಿ ತಾಪಸರ್ಗ್ಗೆ ಮಹಾವಿರೋಧಿಯವನೀಶ್ವರ
ವೈರಿಯೆನುತ್ತವಿಕ್ಕಿದರ್ಮಿಸುಗುವ ಜೋಗವಟ್ಟಿಗೆಯನಾ ಮುನಿಸಂಕೆಯ ಕೋಟಿತಾಪಸರು
ಮತ್ತಂ".

ಈ ಮೇಲೆ ಉಲ್ಲೇಖಿತವಾದ ಶಾಸನದಿಂದ ತಿಳಿದು ಬರುವುದೇನೆಂದರೆ ತೇರದಾಳದ ನೇಮಿತೀರ್ಥೇಶ್ವರ (ಗೊಂಕ ಜಿನಾಲಯ) ಜೈನ ಬಸದಿಗೆ ಶೈವರ ರಕ್ಷೆಯನ್ನು ಬೇಡಿದ ಒಂದು ಸಂದರ್ಭವನ್ನು ಕುರಿತು ವಿವರಣೆಯನ್ನು ನೀಡುವ ಈ ಶಾಸನ ೧೨ನೇ ಶತಮಾನದ ಉತ್ತರಾರ್ಧದಲ್ಲಿ ಜೈನ ಧರ್ಮದ ಸ್ಥಿತಿ ಹಾಗೇ ಶೈವ ಧರ್ಮವು ಹೆಚ್ಚುತ್ತಿರುವ ಪ್ರಭಾವವನ್ನು ತಿಳಿಯಪಡಿಸುವುದರೊಂದಿಗೆ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದಲ್ಲಿ ಈಗ ಪ್ರಸ್ತುತ ಕಲ್ಮೇಶ್ವರ ದೇವಾಲಯವೆಂದು ಕರೆಯಿಸಿಕೊಳ್ಳುವ ದೇವಾಲಯುವೇ ಪ್ರಾಚೀನ ಶಾಸನೋಲ್ಲೇಖಿತವಾಗಿ 'ತೇರದಾಳದ ಮೂಲಸ್ಥಾನದ ಕಲಿದೇವಿಸ್ವಾಮಿ'ಯ ದೇವಾಲಯವಾಗಿದೆ ಎಂದು ಕಂಡು ಬರುತ್ತದೆ.

ಈ ನಾಡಿನ ಶೈವ ಇತಿಹಾಸದಲ್ಲಿ ಕಾಪಾಲಿಕರ ಸಂಖ್ಯೆ ಬಹಳಷ್ಟು ಕಡಿಮೆ ಇದ್ದು ಪಾಶುಪತ ಕಾಳಮುಖರು ಸಾಕಷ್ಟು ಪ್ರಮುಖರಾಗಿದ್ದು ತಮ್ಮ ಅತ್ಯಂತ ಪ್ರಭಾವಿ ಪಾತ್ರವಹಿಸಿರುವುದು ಸ್ಪಷ್ಟವಾಗುತ್ತದೆ. ಆಚರಣೆಗಳಿಂದ ಮಾಟ, ಮಂತ್ರ (ವಾಮಾಚಾರ) & ಪವಾಡ ಮೂಲಕ ಜನ ಸಾಮಾನ್ಯರ ಮೇಲಿನ ಪ್ರಭಾವದಿಂದ ಈ ಶೈವ ಪಂಥದ ಆಚಾರ್ಯರು ಅಂದಿನ ಅರಸರು ಮತ್ತು (ಮನ್ನೆಯರ) ಗೌರವವನ್ನು ಪ್ರೋತ್ಸಾಹವನ್ನು ವಿಶೇಷವಾಗಿ ಗಳಿಸಿದ್ದರು.

ಪ್ರಸಕ್ತ ವಿವೇಚನಯು ಧಾರ್ಮಿಕ ಶಾಸನಗಳಲ್ಲಿ ಸುಮಾರು ಅರ್ಧದಷ್ಟಾದರೂ ಶೈವ ಪಾಶುಪತಕ್ಕೆ ಸಂಬಂಧಿಸಿದವುಗಳಾಗಿವೆ. ಮೇಲೆ ಉಲ್ಲೇಖಿಸಲಾಗಿರುವ ತೇರದಾಳದ ಶಾಸನಗಳಲ್ಲಿ ಹೇಳಿರುವ ವ್ಯವಸ್ಥೆಯು ಅಂದು ಶೈವ ಪಂಥಗಳು ಬೆಳೆಸಿರುವ ಪ್ರಭಾವಕ್ಕೆ ಒಳ್ಳೆಯ ಸೂಚನೆಯಾಗಿವೆ. ಅದೇ ರೀತಿಯಾಗಿ ಶೈವ ಧರ್ಮಕ್ಕೆ ಸೇರಿರುವ ಸೂರ್ಯ & ಶಂಕರನನ್ನು ಕುರಿತು ಕ್ರಿ.ಶ. ೧೧೨೩ರ ಕಾಲದ ಶಾಸನವು ವಿವರಣೆಯನ್ನು ನೀಡುತ್ತದೆ.

.... ನಿರುಪಮ ಗನ್ಧಶಾಲಿ ವನದಿಂ ಬ

ನದಿಂ ಕೊಳದಿಂ ತಟಾಕದಿಂ ಗಿರಿವನ ತೋಯ ದುರ್ಗ ಕುಳದಿಂದಗಳಿಂ ಬುಧ
ಮಾಧವಾರ್ಕ್ಕ ಶಂಕರ ಜಿನ ಸದುಮದಿಂ ವಿಫ(ಪ)ಣಿ ಮಾರ್ಗದಿನೊಪ್ಪುವ
ತೇರಿದಾಳ ಪಂನೆರಡಱ ಚೆಲ್ವನೇಯ ಪೊಗಳಲುಕಜ
ನುಂ ನೆಱೆಯುಂ ಧರಿತ್ರಿಯೊಳು ॥[೬].

ಈ ಮೇಲಿನ ಒಂದು ಪ್ರಮುಖವಾದ ಶಾಸನಗಳಿಂದ ತಿಳಿದು ಬರುವುದೇನೆಂದರೆ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮ ೧೨ ಕಂಪಣವು ಪ್ರಾಚೀನ ಕಾಲದಲ್ಲಿ ಇತರ ಧರ್ಮಗಳಂತೆ ಶೈವ ಧರ್ಮದ ಪ್ರಮುಖವಾದ ನೆಲೆಯಾಗಿ ಕಂಗೊಳಿಸಿತ್ತು ಎಂಬ ಅಂಶವು ಶಾಸನಗಳಿಂದ ಖಚಿತವಾಗುತ್ತದೆ.

೫.೨ ವೈಷ್ಣವ ಧರ್ಮ :

ವೈಷ್ಣವ ಧರ್ಮ ಕ್ರಿ.ಶ. ಪೂರ್ವದಲ್ಲಿಯೇ ದಕ್ಷಿಣ ಭಾರತವನ್ನು ಪ್ರವೇಶಿಸಿದನು ಎಂದು ಕಾಣುತ್ತೇವೆ[೭]. ತದನಂತರ ಕ್ರಿ.ಶ. ೪ ನೇ ಶತಮಾನದ ಕಾಲದಲ್ಲಿ ವೈಷ್ಣವ ಧರ್ಮ ಕರ್ನಾಟಕದಲ್ಲಿ ಸಾಕಷ್ಟು ಜನಪ್ರೀಯವಾಗಿದ್ದಿತ್ತು[೮]. ವೈಷ್ಣವ ಧರ್ಮದವರು ವಿಷ್ಣುವನ್ನೇ ತಮ್ಮ ಪ್ರಮುಖವಾದ ಆರಾಧ್ಯ ದೈವವೆಂದು (ದೇವರೆಂದು) ಪೂಜಿಸುತ್ತಾರೆ. ವೈಷ್ಣವ ಧರ್ಮದಲ್ಲಿ ಬೌದ್ಧಿಕವಾದ ಜ್ಞಾನಕ್ಕಿಂತ ಯಾವಾಗಲು ಭಾವರೂಪವಾದ ಭಕ್ತಿಯೇ ಅತ್ಯಂತ ಶ್ರೇಷ್ಠವಾದುದ್ದೆಂದು ಒತ್ತಿ ಹೇಳುತ್ತದೆ[೯].

"ಜಾತಿಂತೊಳಗೆಲ್ಲಾ ಉತ್ತಮ ಜಾತಿಂತು ವಿಪ್ರಕುಲಂಗೆ ನಂಬಲೆ" ಅಂದರೆ ಬ್ರಾಹ್ಮಣರಿಗೆ ಪ್ರಾಚೀನ ಕಾಲದಿಂದಲೂ ಸಮಾಜದಲ್ಲಿ ಉನ್ನತವಾದ ಸ್ಥಾನವಿತ್ತೆಂದು ತಿಳಿಯುತ್ತದೆ. ಚಾತುರವರ್ಣಗಳಲ್ಲಿ ಬ್ರಾಹ್ಮಣನೇ ಶ್ರೇಷ್ಠನೆಂದೂ ಅವನು ಬಹು ವಿದ್ವತ್ತುಳ್ಳವನೆಂದು ಹಾಗೂ ಸಮಾಜದಲ್ಲಿ ಗೌರವಸ್ಥನೆಂದೂ ತಿಳಿದುಬರುತ್ತದೆ[೧೦]. ಆದಿಕವಿ ಪಂಪನು ಬ್ರಾಹ್ಮನರು ಜಾತಿಯಲ್ಲಿ ಮೇಲ್ಮೆ (ಉನ್ನತಯಾದ) ಸ್ಥಾನವನ್ನು ಹೊಂದಿರುತ್ತಾರೆ ಹಾಗೂ ರಟ್ಟರ ಸಮಕಾಲೀನ ಒಂದು ಶಾಸನದಿಂದ ಬ್ರಾಹ್ಮನರೆಂದರೆ ಭೂಮಿಯ ಮೇಲಿನ ಪೂಜ್ಯನೀಯರು ಎಂದು ತಿಳಿಸುತ್ತದೆ[೧೧]. ವೈಷ್ಣವ ಧರ್ಮದಲ್ಲಿ ಬ್ರಾಹ್ಮಣರು ಅಗ್ರಹಾರದ ಮಹಾಜನರೆನಿಸಿ ಅಲ್ಲಿನ ಪ್ರಮುಖವಾದ ಆಡಳಿತ ನೊಡಿಕೊಳ್ಳವುದರೊಂದಿಗೆ ವೇದಗಳ ಅಧ್ಯಯನ ಅಧ್ಯಾಪನ, ದಾನ, ಪರಿಗ್ರಹ ಮುಂತಾದ ಷಟ್ಕರ್ಮಗಳಲ್ಲಿ ನಿರತರಾಗಿರುತ್ತಿದ್ದ ಬ್ರಾಹ್ಮಣರು ಮಾಡುವ ಪವಿತ್ರ ಕಾರ್ಯಗಳು ಶಾಸನದಿಂದ ತಿಳಿದು ಬರುತ್ತವೆ[೧೨].

ಶಾಸನವನ್ನು ನಾಶಪಡಿಸಿದವರಿಗೆ ಸಾವಿರ ಬ್ರಾಹ್ಮಣರನ್ನು ಕೊಂದ ಶಾಪ ಬರುವುದು ಮತ್ತು ಪ್ರಸಾದ ನಿಲಯದಲ್ಲಿ ಧರ್ಮ ಪ್ರತಿಷ್ಠಾಪನದಲ್ಲಿ ಬ್ರಾಹ್ಮಣರ ಹೆಣ್ಣುಮಗಳು ಅಡುಗೆಯನ್ನು ಮಾಡಿಸುವಂತವರಿಗೆ ಸುಖ ಹಾಗೂ ಭಾಗ್ಯ ದೊರೆಯುವುದು ಎಂದು ಅವರಲ್ಲಿರುವ ಗೌರವಾದರ ಅಂದಿನ ಕಾಲದ ಜನರಲ್ಲಿದ್ದುದು ತಿಳಿದು ಬರುತ್ತದೆ[೧೩].

ಈ ಮೇಲಿನ ಉಕ್ತವಾದ ಪ್ರಮುಖವಾದ ಅಂಶಗಳಿಂದ ವೈಷ್ಣವ ಧರ್ಮದ ಸ್ಥಾನ ಮಾನ ಪ್ರಜೆಗಳು (ಜನರು) ಆ ಧರ್ಮಕ್ಕೆ ನೀಡುತ್ತಿದ್ದ ಗೌರವಾದರಗಳಿಂದ ತಿಳಿದುಬರುತ್ತದೆ.

ಈ ರೀತಿಯಾಗಿ ವೈಷ್ಣವ ಧರ್ಮವು ಉನ್ನತವಾದ ಸ್ಥಾನವನ್ನು ಪಡೆದಿರುವುದನ್ನು ಕಾಣುತ್ತೇವೆ. ಮುಂದೆ ಕರ್ನಾಟಕವನ್ನು ಆಳಿದ ಅನೇಕ ಅರಸು ಮನೆತನಗಳು ಈ ಧರ್ಮದ ಅನುಯಾಯಿಗಳಾಗಿ ಅನೇಕ ರೀತಿಯ ದಾನ ದತ್ತಿಗಳನ್ನು ನೀಡುವುದರ ಮೂಲಕ ದೇವಾಲಯ, ಗುಹಾಲಯಗಳನ್ನು ಕಟ್ಟಿಸುವುದರ ಜೊತೆಗೆ ಯಜ್ಞ ಯಾಗಾದಿಗಳನ್ನು ಮಾಡುವುದರಿಂದಾಗಲಿ ವೈಷ್ಣವ ಧರ್ಮವನ್ನು ಉಳಿಸಿ, ಬೆಳೆಸಿ ರಕ್ಷಿಸಿಕೊಂಡು ಬಂದಿದ್ದಾರೆ. ಉದಾಹರಣೆಗೆ ಬಾದಾಮಿ ಚಾಲುಕ್ಯರ ದೊರೆ ಮಂಗಳೇಶನು ಬಾದಾಮಿಯಲ್ಲಿ ಸುಪ್ರಸಿದ್ಧವಾದ ವೈಷ್ಣವ ಗುಹಾಂತರ ದೇವಾಲಯಗಳನ್ನು ಕಟ್ಟಿಸಿದನು. ಇಲ್ಲಿಂದ ಮುಂದಿನ ಕಾಲದಲ್ಲಿ ಅನೇಕ ಶಾಸನಗಳಲ್ಲಿ ವಿಷ್ಣು ದೇವಾಲಯಗಳ ರಚನೆ ಮತ್ತು ಅವುಗಳಿಗಾಗಿ ಬಿಟ್ಟ ದಾನಗಳನ್ನು ಕುರಿತು ವಿವರಣೆಯಿಂದ ತಿಳಿಯುವುದು.

ಚತುಸಮಯಮನಾವಗಮೆಸೆವಾಳು[೧೪] ಎಂಬ ಮಾತಿನಂತೆ ಐತಿಹಾಸಿಕ ಪ್ರಾಚೀನ ತೇರದಾಳ ನಗರ ತೇರದಾಳ ೧೨ ಕಂಪಣದಲ್ಲಿ ಚತುಸಮಯಗಳು ಎಂಬ ವಾಕ್ಯಗಳು ತುಂಬಾ ಪ್ರಸಿದ್ಧವಾಗಿದ್ದವು ಎಂದು ತಿಳಿದುಬರುತ್ತದೆ. ಇವುಗಳಲ್ಲಿ ವೈಷ್ಣವ ಧರ್ಮವೂ ಒಂದು. ತೇರದಾಳ ಕಂಪಣದಲ್ಲಿ ವೈಷ್ಣವ ಧರ್ಮವೂ ತಕ್ಕ ಮಟ್ಟಿಗೆ ವಿಶೇಷವಾಗಿ ಪ್ರಸಿದ್ಧಿಯನ್ನು ಪಡೆದಿತ್ತು ಎಂಬುದಕ್ಕೆ ಇದೇ ಶಾಸನದಲ್ಲಿ ಕಂಡು ಬರುವ –

ನಿರುಪಮ ಗನ್ಧಶಾಲಿ ವನದಿಂ ಬ

ನದಿ ಕೊಳದಿಂ ತಟಾಕದಿಂ ಗಿರಿವನ ತೋಯ ದುರ್ಗ ಕುಳದಿಂದಗಳಿಂ ಬುಧ

ಮಾಧವಾರ್ಕ್ಕ ಶಂಕರ ಜಿನ ಸದುಮದಿಂ ವಿಫ(ಪ)ಣಿ ಮಾರ್ಗದಿನೊಪ್ಪುವ

ತೇರಿದಾಳ ಪಂನೆರಡಱ ಚೆಲ್ವನೇಯ ಪೊಗಳಲುಕಜ

ನುಂ ನೆಱೆಯಂ ಧರಿತ್ರಿಯೋಳು[೫].

ಎಂಬ ವಾಕ್ಯದ ವಿವರದಲ್ಲಿನ ವಿಷ್ಣು ಸೂಚಕವಾಗಿದೆ. ಇದು 'ಮಾಧವ' ಎಂಬ ಪದವು ಕುರಿತು ಪುಷ್ಠಿಯನ್ನು ನೀಡುತ್ತದೆ.

ಈ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದ ಉಲ್ಲೇಖಗಳಿಂದ ವೈಷ್ಣವ ಧರ್ಮವು ಹೆಚ್ಚು ಪ್ರಚಲಿತವಿತ್ತೆಂದು ತಿಳಿದು ಬರುತ್ತದೆ.

೫.೩ ಬೌದ್ಧ ಧರ್ಮ :

"ಅರಿವಿನ ದಾರಿ ಕಾಣದೆ ಜನ ಸಮುದಾಯ ನರಳುವಾಗ ಅರಿತು ದಾರಿ ತೋರುವ ಮಹಾಪುರುಷರು ಅವತರಿಸುತ್ತಾರೆ" ಎಂಬ ನಂಬಿಕೆ ಇದೆ. ಅಂತಹ ನಂಬಿಕೆಯನ್ನು ಧೃಡಪಡಿಸಿದ ಮಹಾನ್ ಪುರುಷರಲ್ಲಿ ಬೌದ್ಧ ಧರ್ಮ ಪ್ರವರ್ತಕನಾದ ಗೌತಮ ಬುದ್ಧನು ಬಂದ[೬].

ಬೌದ್ಧ ಮತವು ಮೌರ್ಯ ಚಕ್ರವರ್ತಿ ಅಶೋಕನ ಕಾಲದಿಂದ ಕರ್ನಾಟಕದಲ್ಲಿ ಹೆಚ್ಚಾಗಿ ಪ್ರಭಾವ ಬೀರ ತೊಡಗಿತು. ಇದಕ್ಕೆ ಉದಾಹರಣೆಯಾಗಿ ಕರ್ನಾಟಕದಲ್ಲಿ ಹಲವಾರು ಭಾಗಗಳಲ್ಲಿ ಬೌದ್ಧ ಧರ್ಮದ ವಿಹಾರಗಳ ಉಲ್ಲೇಖಗಳು ನಮಗೆ ದೊರಕುತ್ತವೆಯಾದರೂ ಅದೇ ವೇಳೆಯಲ್ಲಿ ಜೈನ ಮತವು ಕನ್ನಡದ ನೆಲದಲ್ಲಿ ಭದ್ರವಾಗಿ ಬೇರು ಬಿಟ್ಟಿದ್ದರಿಂದ ಬೌದ್ಧ ಧರ್ಮವನ್ನು ತಳ ಕೀಳುವಂತೆ ಮಾಡುವುದು ಸಾಧ್ಯವಾಗಲಿಲ್ಲ. ಆದರೂ ಕೂಡ ಮಂದವಾದ ಮಿಣುಕು ದಿಪದಂತೆಯೇ ಕ್ರಿ.ಶ. ೧೧ ನೇಯ ಶತಮಾನದ ಕೊನೆಯ ಭಾಗದಿಂದ ಕ್ರಿ.ಶ. ೧೬ ನೇಯ ಶತಮಾನದವರೆಗೂ ಬೌದ್ಧ ಮತವು ತೇರದಾಳ ಪ್ರದೇಶದಲ್ಲೂ ಅಸ್ಥಿತದಲ್ಲಿ ಇತ್ತು. ಎಂಬುದಕ್ಕೆ ಐತಿಹಾಸಿಕ ಪ್ರಾಚಿನ ತೇರದಾಳ ಗ್ರಾಮದಲ್ಲಿ ದೊರೆತ ಶಾಸನಗಳೇ ನಮಗೆ ಸಾರಿ ಹೇಳುತ್ತವೆ. ಉದಾಹರಣೆಗೆ ಕ್ರಿ.ಶ. ೧೧೭೩ ರ ಕಾಲದ ತೇರದಾಳ ಗ್ರಾಮದಲ್ಲಿ ದೊರೆತ ಶಾಸನವೊಂದು –

ನಿರುಪಮ ಗನ್ಧಶಾಲಿ ವನದಿಂ ಬ
ನದಿ ಕೊಳದಿಂ ತಟಾಕದಿಂ ಗಿರಿವನ ತೋಯ ದುರ್ಗ ಕುಳದಿಂದಗಳಿಂ ಬುಧ
ಮಾಧವಾರ್ಕ್ಕ ಶಂಕರ ಜಿನ ಸದುಮದಿಂ ವಿಫ(ಪ)ಣಿ ಮಾರ್ಗದಿನೊಪ್ಪುವ
ತೇರಿದಾಳ ಪಂನೆರಡಱ ಚೆಲ್ವನೇಯ ಪೊಗಳಲುಕಜ
ನುಂ ನೆಱೆಯಂ ಧರಿತ್ರಿಯೋಳು[೧೭].

ಐತಿಹಾಸಿಕ ಪ್ರಾಚೀನ ತೇರದಾಳದ ಈ ಶಾಸನದಲ್ಲಿ ಬಂದಿರುವ 'ಬುಧ' ಪದದ ಉಲ್ಲೇಖವು ಇತರ ಧರ್ಮಗಳಂತೆ ಬೌದ್ಧ ಧರ್ಮವೂ ಸಹ ಈ ನೆಲದಲ್ಲಿ ಅಸ್ತಿತ್ವದಲ್ಲಿ ಇತ್ತುವೆಂಬುದನ್ನು ಖಚಿತಪಡಿಸುತ್ತದೆ. ಒಟ್ಟಿನಲ್ಲಿ ಇತರ ಧರ್ಮಗಳು ತೀರಾ ಕಡೆಗಣಿಸಬಹುದಾಗಿದ್ದ ಧರ್ಮವಾಗಿರಲಿಲ್ಲ. ಬೌದ್ಧ ಧರ್ಮ; ತೇರದಾಳದಲ್ಲಿ ಶಂಕರ ಜನರಿಗೆ ದೇವಾಲಯಗಳಿದ್ದಂತೆ ಬುದ್ಧಗೂ ಇದ್ದಿರಬಹುದೆಂದು ತಿಳಿದು ಬರುತ್ತದೆ[೧೮]. ಇಲ್ಲಿಂಯ ಗಾವುಂಡರು ಚತುಸಮಯಗಳನ್ನು ರಕ್ಷಿಸುತ್ತಿದ್ದರು ಎಂದು ಅದೇ ಶಾಸನದಿಂದ ತಿಳಿದು ಬರುತ್ತದೆ.

೫.೪ ಜೈನ ಧರ್ಮ :

ಕ್ರಿ.ಪೂ. ೬ ನೇ ಶತಮಾನವನ್ನು ಭಾರತದ & ಜಗತ್ತಿನ ಇತಿಹಾಸದಲ್ಲಿ 'ಆಶ್ಚರ್ಯಕಾರಕ ಶತಕ' ಎಂದು ಕರೆಯಲಾಗಿದೆ. ಈ ಕಾಲದಲ್ಲಿ ಜರುಗಿದ ಧಾರ್ಮಿಕ, ಸಾಮಾಜಿಕ, ರಾಜಕೀಯ ಘಟನೆಗಳು ಬಹುತೇಕವಾಗಿ ಶಾಶ್ವತ ಪರಿಣಾಮವನ್ನುಂಟು ಮಾಡಿದವು.

ಜಿನದಿಂದ ಬೋಧಿಸಲಾದ ಧರ್ಮವೇ ಜೈನ ಧರ್ಮ. ಶಿವನಾಗಲಿ, ವಿಷ್ಣುವಾಗಲಿ ಇವರು ಯಾವ ಧರ್ಮವನ್ನು ಉಪದೇಶಿಸಿಲ್ಲ. ಇವರು ನಿರಾಕಾರ ರೂಪವಾದ ದೇವರುಗಳು ಮಾತ್ರ. ಜಿನನು ಅವತಾರಿಯ ರೂಪವಲ್ಲ. ತನ್ನ ಸ್ವಂತ ಬಲದಿಂದ ಕಾಮಕ್ರೋದಾಧಿಗಳ ವಿಕಾರಗಳನ್ನು ಜಯಿಸಿ ಜಿನನಾದವನು (**ಜಿನ ಎಂದರೆ ಜಯಶಾಲಿ ಆದವನು**)[೧೯].

ಕ್ರಿ.ಶ. ಪೂರ್ವ ೩೦೦ ರ ವೇಳೆಯಲ್ಲಿ ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತನು ತನ್ನ ಕೊನೆಗಾಲದಲ್ಲಿ ದಕ್ಷಿಣ ಭಾರತವನ್ನು ಪ್ರವೇಶಿಸಿದ್ದ ಕಾಲದಲ್ಲಿ ಜೈನ ಧರ್ಮವು ಕರ್ನಾಟಕದ ಸಮೃದ್ಧ ನೆಲೆಯಾಗಿ ಪರಿಣಮಿಸಿತು. ಅಂದು ಕನ್ನಡ ನಾಡಿನಲ್ಲಿ ಗಂಗರು, ಹೊಯ್ಸಳರಂತಹ ರಾಜಮನೆತನಗಳು ಜೈನ ಧರ್ಮಕ್ಕೆ ವಿಶೇಷವಾಗಿ ಒಲಿದಿರುವುದನ್ನು ಕಾಣುತ್ತೇವೆ. ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರಂತಹ ಪ್ರಮುಖವಾದ ಅರಸು ಮನೆತನಗಳು ಜೈನ ಧರ್ಮವನ್ನು ಪುರಸ್ಕರಿಸಿದ್ದವು.

ಕನ್ನಡ ನಾಡೆಲ್ಲವೂ ಜೈನ ಮಯವಾಗುತ್ತಿದ್ದಂತಹ ಕಾಲದಲ್ಲಿ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮವೂ ಸಹ ಜೈನ ಧರ್ಮದ ಪ್ರಭಾವದಿಂದ ಹೊರತಾಗಿರಲಿಲ್ಲವೆಂಬುದಕ್ಕೆ ಈ ಪ್ರದೇಶದಲ್ಲಿ ಈಗಲೂ ಕಾಣಬರುವ ಜಿನಾಲಯ ಹಾಗೂ ಬಾಳಿ ಬೆಳಗಿದ ಜೈನ ಪರಂಪರೆಗಳು ಕಾರಣಿಭೂತವಾಗಿವೆ.

ಕೂಂಡಿನಾಡು ೩೦೦೦ ನಾಡಿನ ಹಲವು ಕಂಪಣಗಳಲ್ಲಿ ಒಂದಾದ ತೇರದಾಳ ಮಧ್ಯವರ್ತಿ ಸ್ಥಳವಾಗಿ ಆಡಳಿತದ ಕಾರ್ಯ ವೈಖರಿಯನ್ನು ಹೊತ್ತು ಮೆರೆದಂತೆ, ಜೈನ ಧರ್ಮದ ಪ್ರಮುಖ ಕೇಂದ್ರವಾಗಿ ಮೆರೆಯಿತು. ಉದಾಹರಣೆಗಾಗಿ ಕ್ರಿ.ಶ. ೧೧೨೩. ರ ಕಾಲದ ತೇರದಾಳ ಗ್ರಾಮದ ದೊರೆತ ಶಾಸನದ ಪ್ರಾರಂಭಿಕ ಸಾಲುಗಳಿಂದ ತಿಳಿದು ಬರುವುದೇನೆಂದರೆ.

"ಶ್ರೀಮತ್ಪರಮ ಗಂಬೀರಸ್ಯಾದ್ವಾದಾವೋಘ ಲಾಂಛನಂ ಜಿಯಾತ್ರೈ ಲೋಕ್ಯನಾಥಸ್ಯ ಶಾಸನಂ ಜಿನಶಾಸನಮ್ ॥ ಶ್ರೀಮನಮ್ಮ ಸುರಾಸುರೋರಗ ಲಸನ್ಮಾಣಿಕ್ಯ ಮೌಳಿ

ಪ್ರಭಾಸ್ತೋಮಾಲಂಕೃತ ಪಾದಪದ್ಮಯುಗಳಂ ಕೈವಲ್ಯಕಾನ್ತಾಮನಃ ಪ್ರೇಮಂ ಸನ್ನುತಿ ನೇಮಿನಾಥ ಜಿನನಾಥಂ ತೇರಿದಾಳಾತಿಶಯ ಶ್ರೀಮತುಭವ್ಯಜ"[೨].

ಈ ಶಾಸನಗಳಲ್ಲಿ ಐತಿಹಾಸಿ ಪ್ರಾಚೀನ ತೇರದಾಳದ ಜನರು ಜಯಶಾಲಿಯಾಗಲಿ ಎಂದು ಹೇಳಿ ನೇಮಿನಾಥ ಹಾಗೂ ಜಿನೇಶ್ವರನ ಆಶೀರ್ವಾದಗಳನ್ನು ಕೋರಲಾಗಿದೆ.

ನೇಮಿನಾಥೇಶ್ವರ ಜಿನಾಲಯಕ್ಕೆ ದಾನ-ದತ್ತಿ :

ಐತಿಹಾಸಿಕ ಪ್ರಾಚೀನ ತೆರದಾಳ - ೧೩ ಕಂಪಣವನ್ನು ರಾಜಧಾನಿ ಮಾಡಿಕೊಂಡು ವ್ಯವಸ್ಥಿತ ರೂಪದಿಂದ ಆಡಳಿತವನ್ನು ನಡೆಸುತ್ತಿದ್ದ. ಒಮ್ಮೆ ಅಕಸ್ಮಾತಾಗಿ ಗೊಂಕದೊರೆಗೆ ಒಂದು ದಿನ ವಿಷದ ಸರ್ಪ ಕಡಿಯಲು ಗೊಂಕದೊರೆಯುಮಂತ್ರ, ತಂತ್ರದ ಆಸೆ ಬಲಿಬಿಳದೇ ಪಂಚಪರಮೇಷ್ಠಿಗಳನ್ನು ಸ್ಮರಿಸಲಾಗಿ ವಿಷವೂ ದೂರವಾಯಿತಂತೆ. ಇದನ್ನು ಕ್ರಿ. ಶ. ೧೧೨೩ರ ಕಾಲದ ಐತಿಹಾಸಿಕ ತೇರದಾಳ ಶಾಸನದಲ್ಲಿ ಈ ರೀತಿಯ ಉಲ್ಲೆಖಿಸಲಾಗಿದೆ

॥ಪಸಿತಾಹಿ ಸೊಂಕಿದೊಡೆ ಸಂಕಿನ ಮಂತ್ರದ ತಂತ್ರದಾಸೆ
ಯಿಂದಸುವಱಿಯಾಗಿ ಬಿಟ್ಟೆರದೆ ಪಂಚಪದಂಗಳನೋದಿ
ತದ್ವಿಶಪ್ರಸರಮನೆಯ್ದೆ ಪಿಂಗಿಸಿ ಜಿನಬ್ರತದೊಳು ದ್ರಿಡನಾದ ತಂನ
ಪೆಂಪೆಸೆದಿರೆ ತೇರಿದಾಳದರಸಂ ನೆಗಳ್ದಂ ಕಲಿಗೋಂಕ ಭೂಭುಜನೆ ॥[೨].

ಹೀಗೆ ಪಂಚಪರಮೇಷ್ಟಿಗಳ ಮಂತ್ರಗಳನ್ನು ಸ್ಮರಿಸಲು ಗೊಂಕ ಅರಸನಿಗೆ ವಿಷಬಾಧೆಯಿಂದ ಮುಕ್ತವಾಗಿ ತನಗೆ ಪುನರ್ಜನ್ಮವನ್ನು ನೀಡಿ ರಕ್ಷಿಸಿದ ಜಿನನಿಗಾಗಿ ಐತಿಹಾಸಿಕ ತೇರದಾಳದಲ್ಲಿ ಒಂದು ಜಿನಾಲಯವನ್ನು ಕಟ್ಟಿಸಿ ಅದಕ್ಕೆ ಗೊಂಕಜಿನಾಲಯವೆಂದು ಹೆಸರನಿಟ್ಟು ತದನಂತರ ಕೊಲ್ಲಾಪೂರದಿಂದ ತನ್ನ ಗುರುಗಳನ್ನು ಹಾಗೂ ಕೊಲ್ಲಾಪೂರದ ರೂಪನಾರಾಯಣ ಬಸದಿಯ ಆಚಾರ್ಯರಾದ ಶ್ರೀ ಮಾಘಣಂದಿ ಸೈದ್ಧಾಂತಿಕ ದೇವರನ್ನು ಶುಭ ದಿನ, ಶುಭ ಮೂಹರ್ತದಲ್ಲಿ ಬರಮಾಡಿಕೊಂಡು ಆ ಬಸದಿಯಲ್ಲಿ ನೇಮಿನಾಥ ಜಿನೇಶ್ವರರ ಮೂರ್ತಿಯನ್ನು ಪ್ರತಿಷ್ಠೆ ಮಾಡಿದುದ್ದನ್ನು ಈ ಶಾಸನವು ತಿಳಿಸಿ ಹೇಳುತ್ತದೆ.

.... ಶ್ರೀಮತು ಗೊಂಕದೇವರಸರು
ನಿಜರಾಜಧಾನಿಯಪ್ಪ ತೇರಿದಾಳದ ಮಧ್ಯಪ್ರದೇಶ.

ದೊಳು ಗೊಂಕ ಜಿನಾಲಯಮಂ ನಿರ್ಮ್ಮಿಸಿ ಶ್ರೀ ನೇಮಿಜಿನನಾಥ ಪ್ರತಿಷ್ಠೆಯಂ ರಾಷ್ಟ್ರಕೂಟಾನ್ವಯ ಶಿರ[ಃ] ಶಿಖಾಮಣಿ ಕಾರ್ತ್ತಿವೀರ್ಯ್ಯ ಮಹಾಮಂಡಳೇಶ್ವರ ಮುಖ್ಯವಾಗಿ ಸದ್ಘಕಿಯಂ ಶುಭದಿನ ಮುಹೂರ್ತದೊಳು ಮಾಡಿ ತಜ್ಜಿನ

ಮುನಿ ಪ್ರಧಾನರಪ್ಪ ದೇಸಿಗಗಣ ಪೊಸ್ತಕಗಚ್ಛದ ಶ್ರೀ ಕೊಣ್ಣಕುನ್ದಾಚಾರ್ಯ್ಯಾನ್ವಯದ ಕೊಲ್ಲಾಪೂರದ ಶ್ರೀ ರೂಪನಾರಾಯಣ ಬಸದಿಯಾಚಾರ್ಯ್ಯರು[ಂ] ಮಣ್ಡಲಾಚಾರ್ಯ್ಯರು ಮೆನಪ್ಪ ಶ್ರೀ ಮಾಘಣನ್ದಿ ಸೈದ್ಧಾನ್ತಿಕ[೨೩].

ತದನಂತರ ಗೊಂಕರಸನು ತನ್ನ ಗುರುಗಳಾದ ಶ್ರೀ ಮಾಘಣಂದಿ – ಸೈದ್ಧಾಂತಿಕ ದೇವರುಗಳ ಕಾಲವನ್ನು ತೊಳೆದು ತಾನು ಕಟ್ಟಿಸಿದ ಜಿನಾಲಯಕ್ಕೆ ಸಮಸ್ತ ಪ್ರಜೆಗಳ ಸಮ್ಮುಖದಲ್ಲಿ ಎಪ್ಪತ್ತೆರಡು ಮತ್ತರು ಭೂಮಿಯನ್ನು ಹಾಗೂ ಒಂದು ಮತ್ತರು ತೋಟವನ್ನು ದಾನ ಮಾಡಿದನು. ಅದು ಅಲ್ಲದೇ ಅಲ್ಲಿಯ ಗೌಡರು ಮತ್ತು ರೈತರು ಕೂಡಿ ದೇವರಿಗೆ ಎಲ್ಲ ದವಸ ಧಾನ್ಯಗಳಲ್ಲಿ ರಾಸಿಗೊಳಗವನ್ನು ನಖರುಗಗಳು ಕೆಲವು ಆದಾಯವನ್ನು ತೆಲ್ಲಗರು ನಂದಾದೀವಿಗೆಗೆ ಎಣ್ಣೆಯನ್ನು, ಕುಂಬಾರರು ಮಡಿಕೆಗಳನ್ನು ಮತ್ತು ಗಾತ್ರಿಗಳು ವೀಳ್ಯದೆಲೆಗಳನ್ನು ಕೊಟ್ಟರೆಂದು ಮೇಲೆ ಉಲ್ಲೇಖಿತವಾದ ಶಾಸನವು ಹೇಳಿದೆ.

ಆರವತ್ತು ವರ್ಷಗಳ ತರುವಾಯ ಕ್ರಿ.ಶ. ೧೧೮೧ ರಲ್ಲಿ ರಚಿತವಾದ ಎರಡನೆಯ ಶಾಸನವು ಆ ಕಾಲದಲ್ಲಿ ಪ್ರಸಿದ್ಧವಾದ ವ್ಯಾಪಾರಿ ಸಂಘವಾದ ಅಯ್ಯಾವೊಳೆ ಐಯ್ನೂರು ಸಂಘದ ಸದಸ್ಯರು, ನಾನಾ ದೇಶ್ಯಾಭ್ಯನ್ತರದ ಗವರಿ ಗೌತ್ರಿಗರು, ಸೆಟ್ಟಿಯರು, ಸೆಟ್ಟಿಗುತ್ತರು, ಮಹಾಸಾಡಾಗಿ[೨೪] ತೇರದಾಳದಲ್ಲಿ ಮಹಾಸಭೆ ಮಾಡಿ ಗೊಂಕರಸರು ಕಟ್ಟಿಸಿದ ನೇಮಿನಾಥ ಬಸದಿಯನ್ನು ನೋಡಿ ಸಂತೋಷ ಬರಿತವಾಗಿ

ನಮಸ್ಕರಿಸಿ ಆನಂದಭರಿತರಾಗಿ ದೇವರ ಅಷ್ಟ ವಿಧ್ಯಾರ್ಚನೆ ಪೂಜೆ ನಿರಂತರವಾಗಿ ನಡೆಯುವುದರ ಸಲುವಾಗಿ ದೇವಾಲಯಗಳಿಗೆ ಒಂದು ನೂರಾ ಇಪ್ಪತ್ತು ಎತ್ತು, ಕತ್ತೆ, ಕೋಣ, ದೋಣಿ ಮತ್ತು ಘಟ್ಟ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ಉಪಯೋಗಿಸುವ ಸಾಧನಗಳು ಇವುಗಳ ಜೊತೆಗೆ ಸಾಗಿಸುವ ಸರಕುಗಳ ಮೇಲೆ ವಿಧಿಸಲಾಗುವ ಸುಂಕ ಪರಿಹಾರವನ್ನು ದೇವರಿಗೆ ಬಿಟ್ಟ ವಿಷಯವನ್ನು ಶಾಸನವು ಇಂತು ಈ ಕೆಳಗಿನಂತೆ ಹೇಳಿದೆ.

"............ ಶ್ರೀ ಮದಯ್ಯಾವಳೆಯಯ್ಯೂರ್ವ್ವಸ್ವಾಮಿಗಳು ಕುನ್ತಳ ವಿಷಯದೊಳು

"............... ಶ್ರೀ ಮನ್ಮಂಡಳಿಕಂ ಗೊಂಕದೇವರಸಂ ಮಾಡಿಸಿದ ನೇಮಿತೀರ್ಥೇಶ್ವರನ ಚೈತ್ಯಾಲಯಮಂ ಕಂಡು ಬಲಗೊಂಡು ಪೊಡವಟ್ಟು ಹರ್ಷಚಿತ್ತರಾಗಿ ದೇವರಷ್ಟವಿಧಾರ್ಚ್ಚನೆ ಚಂದ್ರಾರ್ಕ್ಕ ತಾರಂಬರಂ ನಡೆವಂತಾ".

"ಗಿ ಕೊಟ್ಟ ಶಾಸನ ಮರ್ಯ್ಯಾದೆ ಯೆನ್ತೆಂದಡ ಚತುಸ್ಸಮುದ್ರ ಪರ್ಯ್ಯನ್ತಂಬರಂ ನಡವನ್ತಾಗಿ ೧೨೦ ನೊಱಿಪ್ಪತ್ತೆತ್ತು ಕತ್ತೆ, ಕೋಣ, ಭಂಡಿ, ಭೈತ್ರ, ದೋಣಿ ದುರ್ಗಿಗಳ ಪಥಮೆಂಬಿವಱೊಳು ಆನೆ ಮಾಣಿಕ ವಸ್ತುವೇನಾದಡಂ ಪೇಱಿ ಜಳಸ್ಥಳ ಯಾ–"

"ತ್ರೆಯಲು ನಡೆವಡಂ ಸುಂಕ ಪರಿಹಾರವಾಗಿ ಕೊಟ್ಟರು ಮತ್ತಂ ಶಾಸನ ಪರಿಹಾರಿಗರೆನ್ನದೆ ವಕ್ಕಲಲೊನ್ದು ಪಣವಂ ಬಿಟ್ಟರು"[೨೪].

ಕ್ರಿ.ಶ. ೧೧೮೭ ರಲ್ಲಿ ರಚಿತವಾದ ಮೂರನೆಯ ಶಾಸನವು ಗೊಂಕ ಜಿನಾಲಯಕ್ಕೆ ದಾನ ದತ್ತಿಗಳನ್ನು ನೀಡಿದ ವಿವರವನ್ನು ಕುರಿತು ಹೇಳಿದೆ. ಸೇವುಣ ಅಥವಾ ಯಾದವ ಅರಸ ಸಿಂಘಣನ ಸೇನಾನಿಯಾಗಿದ್ದ ತೆಜುಗಿ ಮತ್ತು ಅವನ ಮಗ ಭಾಯಿದೇವರು ಕುಂತಳ ಮಹೀವಲ್ಲಭ ಕಲ್ಯಾಣದ ಚಾಲುಕ್ಯ ನಾಲ್ಕನೆಯ ಸೋಮೇಶ್ವರನಿಂದ ಕೂಂಡಿನಾಡನ್ನು ಪಡೆದು ಅದನ್ನು ಆಳುತ್ತಿದ್ದರು. ಆಗ ತೇರದಾಳದ ಗೊಂಕ ಜಿನಾಲಯ ನೇಮಿತೀರ್ಥೇಶ್ವರ ದೇವರಿಗೆ ಕ್ರಿ.ಶ. ೧೧೨೩ ರ ಶಾಸನಗಳಲ್ಲಿ ಗೊಂಕರಸನು ಬಿಟ್ಟಿದ್ದ ಭೂಮಿಯನ್ನು ಪುರ್ನದತ್ತಿ ಮಾಡಿದುದ್ದೇ ಅಲ್ಲದೇ ಹೊಸದಾಗಿ ಬಸದಿಯ ಅಂಗರಂಗಭೋಗಕ್ಕೆ ಅಲ್ಲಿಯ ಮುನಿಗಳ ಆಹಾರಕ್ಕೆ ಬಸದಿಯ ಜೀರ್ಣೋದ್ಧಾರಕ್ಕಾಗಿ ಮೂವತ್ತಾರು ಮತ್ತರ ಭೂಮಿಯನ್ನು ಹಾಗೂ ದೇವಾಲಯಕ್ಕೆ ಒಂದು ನಿವೇಶನವನ್ನು ಬಿಟ್ಟ ವಿಷಯವನ್ನು ಕುರಿತು ಶಾಸನವು ಹೀಗೆ ಹೇಳಿದೆ.

.... ಭಾಯಿದೇವ ದಂಡನಾಯಕರು ಶ್ರೀಮತ್ತೇರಿದಾಳದ ಗೊಂಕ ಜಿನಾಲಯದ ಶ್ರೀ ನೇಮಿ ತೀರ್ಥೇಶ್ವರನ ಅಂಗರಂಗಭೋಗಕ್ಕಂ ರಿಷಿಯಾಹಾರದಾನಕ್ಕಂ ಖಂಡಸ್ಫುಟೀತ, ಜೀರ್ಣ್ನೋಧಾರಕ್ಕಂ ಸಕವರ್ಶಂ ೧೧೧೯ ನೆಯ ಪ್ಲವಂಗ ಸಂವತ್ಸರದ ಚೈತ್ರ ಸು ೧೦ ಬ್ರಿಹಸ್ಪತಿವಾರದನ್ದು ಮುಂನ ಗೊಂಕರಸರು ಬಿಟ್ಟ ಪೂರ್ವ್ವ ವ್ರಿತ್ತ ಯೆ

ಪ್ಪತ್ತೆರಡು ಆ ೭೨೫೦ ಬಡಲಾಗ ಕೋಲಲು ಸರ್ವ್ವಬಾಧ ಪರಿಹಾರವಾಗಿ ಬಿಟ್ಟ ಮತ್ತರು ಮೂವತ್ತಾಱು ೩೬ ಮತ್ತಂ ಧವಳಾರಕ್ಕೆ ಅಂಗಡಿಗೇರಿ ಪರ್ಯಂತ ನಿವೇಶನಮಂ ಬಿಟ್ಟ ಶಾಸನದ ಕಲ್ಲುಗಳಂ ಪ್ರತಿಷ್ಠೆಯಂ ಮಾಡಿದರು[೨೫].

ಇದೇ ರೀತಿಯಾಗಿ ಈ ಪ್ರದೇಶದಲ್ಲಿ ಆಳ್ವಿಕೆಯನ್ನು ನಡೆಸಿದ ಅರಸರು, ಮನ್ನೆಯರು, ಅಧಿಕಾರಿಗಳು, ವ್ಯಾಪಾರಸ್ಥರು ಮತ್ತು ಸಮಸ್ತ ಪ್ರಜೆ ಪರಿವಾರದವರು ನೀಡಿದ ದಾನ – ದತ್ತಿಗಳನ್ನು ನೋಡಿದರೆ ಅವರ ಪರಧರ್ಮ ಸಹಿಷ್ಣುತೆ, ಭಕ್ತಿ ಮತ್ತು ನಂಬಿಕೆಯ ಅರ್ಥವಾಗುತ್ತದೆ.

ನೇಮಿನಾಥ ಪ್ರತಿಮೆಯ ಪೀಠದ ಮೇಲೆ ಬರೆದಿರುವ ಶಾಸನದಲ್ಲಿ ಈ ಕೆಳಗಿನಂತೆ ವಿವರಣೆಯನ್ನು ಕಾಣುತ್ತೇವೆ.

**ಶ್ರೀಮನ್ನೇಮಿಜಿನೇಂದ್ರನ ಪ್ರತಿಮೆಯಂ ಸಮ್ಯಕ್ತ್ವ ಚೂಡಾಮಣಿಗಳಾದಂ
ಥಾ ಶ್ರೀಮತ್ತೇರಿದಳದ ದೇಶಾಯಿ ಸತ್ಯೌವ್ವ ತತ್ಪುತ್ರ ಜಕ್ಕಪ್ಪ ಸಹವಾಗಿ
ಮಾಡಿಸಿ ಶ್ರೀ ಗೊಂಕಜಿನಾಲಯದಲ್ಲಿ ಪ್ರತಿಷ್ಠೆಯನು ಮಾಡಿದ ಶ
ಕವರ್ಷ । ೧೬೭೦ ವಿಭವನಾಮ ಸಂವತ್ಸರದ ಮಾರ್ಗ್ಗಶಿರದ
ಶುಕ್ಲ ದಶಮಿ ಶುಕ್ರವಾರದಲ್ಲಿ ಭದ್ರಂ ಭೂಯಾತ್ ಶ್ರೀ ಶ್ರೀ ಶ್ರೀ** [೨೬].

ಈ ಶಾಸನದಲ್ಲಿ ಕಾಲವನ್ನು ಶಕವರ್ಷ ೧೬೭೦ ವಿಭವ ಮಾರ್ಗಶಿರ ಶುದಶಮಿ ಎಂದಿದ್ದು ಇದು ಕ್ರಿ.ಶ. ೧೮/೧೧/೧೭೪೮ ಸರಿ ಹೊಂದುತ್ತದೆ.

ತೇರದಾಳದ ದೇಸಾಯಿ ಸತ್ಯೌವ್ವ ಮತ್ತು ಆಕೆಯ ಮಗನಾದ ಜಕ್ಕಪ್ಪ ಸೇರಿ ಗೊಂಕ ಜಿನಾಲಯದಲ್ಲಿ ನೇಮಿನಾಥಸ್ವಾಮಿ ತೀರ್ಥಂಕರನ ಪ್ರತಿಷ್ಠೆ ಮಾಡಿಸಿದುದ್ದನ್ನು ತಿಳಿಸುತ್ತದೆ.

ಈ ರೀತಿಯಾಗಿ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದಲ್ಲಿ ಈ ಎಲ್ಲ ಶಾಸನಗಳಿಂದ ಜೈನ ಧರ್ಮ ಬೆಳೆದು ಬಂದ ಪರಂಪರೆಯನ್ನು ತಿಳಿದುಕೊಳ್ಳಬಹುದು.

ಜೈನ ಗುರು ಪರಂಪರೆ :

ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದಲ್ಲಿ ನೇಮಿನಾಥೇಶ್ವರ (ಗೊಂಕ ಜಿನಾಲಯ) ವ್ಯವಸ್ಥಿತ ರೂಪದಲ್ಲಿ ಬಸದಿಗಳು ಕಂಡು ಬರುವಂತೆಯೇ ಸನ್ಯಾಸಿಗಳು ಕೂಡಾ ಈ ಪ್ರದೇಶದಲ್ಲಿ ಬಾಳಿ – ಬೆಳಗಿದರೆಂಬುದಕ್ಕೆ ಹಲವಾರು ಶಾಸನಾಧಾರಿತಗಳು ಜೀವಂತ ನಿದರ್ಶನಗಳುಂಟು ಆಗಿವೆ. ಉದಾಹರಣೆಗಾಗಿ ಕಲ್ಯಾಣದ ಚಾಲುಕ್ಯ ದೊರೆ ಆರನೇಯ ವಿಕ್ರಮಾದಿತ್ಯನ

ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. ೧೧೨೩ ರ ಶಾಸನವು ಜೈನ ಗುರುಪರಂಪರೆಯನ್ನು ಕುರಿತು ಉಲ್ಲೇಖಿಸುತ್ತದೆ. ಅವರುಗಳಲ್ಲಿ ಶ್ರೀ ಮಾಘಣಂದಿ ಸೈದ್ಧಾಂತಿಕ ದೇವರು ಕೊಲ್ಲಾಪೂರದ ಶ್ರೀ ರೂಪನಾರಾಯಣ ಬಸದಿಯ ಆಚಾರ್ಯರೂ ಆ ಭಾಗದ ಮಂಡಳಾಚಾರ್ಯರೂ ಆಗಿದ್ದರಲ್ಲದೇ ಪ್ರಸಿದ್ಧ ನಿಂಬ ಸಾಮಂತನ ಗುರುಗಳಾಗಿದ್ದರು. ಸಾಮಂತ ನಿಂಬದೇವನು ರೂಪನಾರಾಯಣ ಬಸದಿಯನ್ನು ಕಟ್ಟಿಸಿದನು. **'ಮಸ್ತಕಗ್ಛ ದೇಶಿಂಯುಗುಣ ಕೊಸ್ವ ಕುನ್ದಾನ್ವಯಂಯುಕ್ಕೆ'** ಸೇರಿದ ಇವರಿಗೆ ಅನೇಕ ಪ್ರಖ್ಯಾತ ಪಂಡಿತರು ಶಿಷ್ಯರಾಗಿದ್ದರು. ಪರವಾದೀಭ ಪಂಚಾನನನೆನಿಸಿದ ಕನಕನನ್ದಿ ಪಂಡಿತ, ಪರವಾದಿಶಿಖರಿ ಶಿಖರನಿರ್ಭೇದಗೋಚಣ ಪಂಡಿತರೆನಿಸಿದ ಶೃತಕೀರ್ತಿತ್ರೈವಿದ್ಯ, ಪರವಾದಿಮಸ್ತಕಶೂಲ ಚಂದ್ರಕೀರ್ತಿ ಪಂಡಿತ, ಉಜ್ಜಳಕೀರ್ತಿ ಮೂರ್ತಿಪಂಡಿತ, ಪ್ರಭಾಚಂದ್ರ ಪಂಡಿತ, ವರ್ಧಮಾನ ತ್ರೈವಿದ್ಯ ವಿದ್ಯಾಧರ ಈ ಎಲ್ಲ ಮುನಿ ಶ್ರೇಷ್ಠರು ಅವರುಗಳ ಗಣ ಶಿಷ್ಯರಾಗಿದ್ದರು. ಇವರಲ್ಲಿ ಕೊನೆಯವರಾದ ಶ್ರೀ ವರ್ಧಮಾನ ತ್ರೈವಿದ್ಯ ವಿದ್ಯಾಧರ ವಸುದೈಕ ಬಾಂಧವ ಜಿನೇಂದ್ರಾಧೀಶ್ವರರಾಗಿದ್ದರೆಂದು ಈ ವಸುಧೈಕ ಬಾಂಧವ ಜಿನಾಲಯಯಲೊಕ್ಕಿಗುಂಡಿಯಲ್ಲಿದ್ದ ಜಿನಾಲಯಗಳಲ್ಲೊಂದಾಗಿರಬಹುದು. ಈ ಜಿನಾಲಯ ಉಲ್ಲೇಖವನ್ನು ಅಲ್ಲಿಯ ಶಾಸನವೊಂದರಲ್ಲಿದೆ.

ಇದರಿಂದ ತಿಳಿದು ಬರುವುದೇನೆಂದರೆ ಜೈನ ಧರ್ಮವು ಈ ನಾಡಿನಲ್ಲಿ ಪ್ರಭಾವಿ ಧರ್ಮವಾಗಿ ಮೆರೆದಿತ್ತು ಎಂದು ತಿಳಿಯುಬಹುದು. ಆದರೆ ಈ ವಿಷಯಕ್ಕೆ ವ್ಯತರಿಕ್ತವಾಗಿ ಇದೇ ಗ್ರಾಮದ ಕ್ರಿ.ಶ. ೧೧೮೧ರ ಕಾಲದ ಶಾಸನ ಒಂದರಿಂದ ದೊರಕುವ ವಿಷಯ. ಈ ಸಂದರ್ಭದಲ್ಲಿ ಅತ್ಯಂತ ಕೂತೂಹಲಕಾರಿಯಾಗಿದೆ. ಆ ಊರಿನ ನೇಮಿತೀರ್ಥೇಶ್ವರ (ಗೊಂಕಜಿನಾಲಯ) ಜಿನಾಲಯದ ಹಿಂದೆ ಕೊಲ್ಲಾಪುರದ ರೂಪನಾರಾಯಣ ಬಸದಿಯ ಆಡಳಿತ ಕಕ್ಷೆಯಲ್ಲಿತ್ತು. ಆದರೆ ಆ ಊರಿನ ಸಮಸ್ತ ನಖರರುಗಳ ಪ್ರಾರ್ಥನೆಯಿಂತೆ, ಕೊಲ್ಲಾಪುರದ ಘಟಿಕಾಸ್ಥಾನದ ಆಚಾರ್ಯರು ಮತ್ತು ಏಳ್ಕೋಟಿ ಸಂಖ್ಯಾ ತಗಣಂಗಳ ಒಂದುಗೂಡಿ ಆ ಜಿನಾಲಯವನ್ನು ಅದೇ ಊರಿನ 'ಕಲಿದೇವ' ದೇವಾಲಯಕ್ಕೆ ಪ್ರತಿಬದ್ಧ ಮಾಡಿದರು. ಇದಕ್ಕೆ ಕಾರಣ ಆ ಶಾಸನದ ಕೊನೆಯ ವಾಕ್ಯಗಳಿಂದ ನಮಗೆ ಸ್ಪಷ್ಟವಾಗುತ್ತದೆ.

> **"ಬಸದಿಯ ಮೇಲೆ ಸೂದ್ರಕನ ಸಿಂಹದ**
> **ಚಕ್ರದ ಚಿಹ್ನಮೆವಿಂಬಿನ ತಿಸುಳದ ಘಂಟೆ**
> **ಯಂ ಪಱಿೆಯನಾಗದೆನಿಪ್ಪವನೇಳುಕೋಟಿ ತಾಪಸರ್ಗ್ಗೆ**
> **ಮಹಾವಿರೋಧಿಯವನೀಶ್ವರ ವೈರಿ ...."**[೨೬].

ಎಂಬ ವಿಷಯವು ಅಂದು ನಡೆಯುತ್ತಿದ್ದ ಧಾರ್ಮಿಕ ಆಂದೋಲನದ ಚಿತ್ರಣವನ್ನು ನೀಡುತ್ತದೆ. ಅಂತಹ ದುರ್ಘಟನೆ ತೇರದಾಳದ ಬಸದಿಗೆ ಆಗಬಾರದೆಂಬ ಉದ್ದೇಶದಿಂದ ಶೈವ ರಕ್ಷೆಯ ಬೇಡಿದ ಒಂದು ಸಂದರ್ಭವನ್ನು ನಿರೂಪಿಸಿರುವ ಈ ಶಾಸನ ೧೨ ನೇಯ ಶತಮಾನದ ಉತ್ತರಾರ್ಧದಲ್ಲಿ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮವೂ ಸೇರಿದಂತೆ ಉತ್ತರ ಕರ್ನಾಟಕದಲ್ಲಿ ಜೈನ ಧರ್ಮ ಯಾವ ಸ್ಥಿತಿಯಲ್ಲಿತ್ತು ಎಂಬುದರ ಸೂಚಕವಾಗಿದೆ.

: ಅಡಿ ಟಿಪ್ಪಣಿಗಳು :

೧) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೪ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ

೨) ಸರ್ ಜೋನ ಮಾರ್ಶಲ್ : ಮೊಹೆಂಜೊದಾರೊ ಆಂಡ್ ಇಂಡಸ್ ಸಿವಿಲೈಜೇಶನ್ ಆಯ್.ಬಿಡ್. ಪ್ರಪೇಸ್, ಪುಟ ಸಂಖ್ಯೆ : ೭

೩) ತಿಪ್ಪೆರುದ್ರ ಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಪುಟ ಸಂಖ್ಯೆ ೧೯೫

೪) ಅ ನ ಕೃ 'ಭಾರತೀಯ ಸಂಸ್ಕೃತ ದರ್ಶನ' ಪುಟ ಸಂಖ್ಯೆ : ೨೦೮

೫) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೫ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೯ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೬) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೪ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೭) ಇದಕ್ಕೆ ಸಂಬಂಧಪಟ್ಟ ನಾನಾಘಾಟ ಶಾಸನ ಉಲ್ಲೇಖ ಚಿದಾನಂದ ಮೂರ್ತಿ ಎಂ. ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ ಪುಟ ಸಂಖ್ಯೆ : ೧೧೬

೮) ಎನ್ ಎಸ್ ರಾಘವಾಚಾರ : ಮತ ಮತ್ತು ತತ್ವ : ಕರ್ನಾಟಕ ಪರಂಪರೆ ಸಂಪುಟ : ೦೧ ಪುಟ ಸಂಖ್ಯೆ : ೨೫೮

೯) ಎಸ್ ಕೆ ಡಿ : ಅರ್ಲಿ ಹಿಸ್ಟ್ರಿ ಆಪ್ ದಿ ವೈಷ್ಣವಾ ಪೇದ ಆಂಡ್ ಮೂಮೆಂಟೂ ಇನ್ ಬೆಂಗಾಲ ಪುಟ ಸಂಖ್ಯೆ : ೩-೪

೧೦) ಪಂಪ ಭಾರತ ಪುಟ ಸಂಖ್ಯೆ : ೧೪-೪೮

೧೧) ಬೊ.ಕೆ ಇನ್ಸ ಪುಟ ಸಂಖ್ಯೆ : ೧,೨ ಮತ್ತು ೧೩೩, ೧೦೮೭

೧೨) ಸೌ ಇ ಇ ಸಂಪುಟ ೨೦ ಅಗರಖೇಡ (ತಾ) ಇಂಡಿ ಕ್ರಿ.ಶ. ೧೨೪೮ರ ಕಾಲದ ಶಾಸನ ಪುಟ ಸಂಖ್ಯೆ : ೨೧೫

೧೩) ಎ ಪಿ ಇಂ ಸಂಪುಟ ೧೩ ಸೊಗಲ ಕ್ರಿ.ಶ. ೯೮೦ ರ ಕಾಲದ ಶಾಸನ ಪುಟ ಸಂಖ್ಯೆ : ೩

೧೪) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೪ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೧೫) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೪ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೧೬) ಡಾ॥ ಕೆ ಸದಾಶಿವ : ಸಮಗ್ರ ಭಾರತ ಇತಿಹಾಸ ಪುಟ ಸಂಖ್ಯೆ : ೧೨೬

೧೭) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೪ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೧೮) ಇ.ಎ.ಸಂಪುಟ ೧೪ ಕ್ರಿ.ಶ. ೧೧೨೩-೨೪ ರ ಕಾಲದ ಶಾಸನ ಪುಟ ಸಂಖ್ಯೆ ೧೫

೧೯) ಜ್ಞಾನ ಗಂಗೋತ್ರಿ ಸಂಪುಟ ೭ ಪುಟ ಸಂಖ್ಯೆ : ೨೯೭

೨೦) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೪ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೧) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೬ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೨) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೭ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೩) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೪) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೮ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೫) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೯೦ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೬) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೯೧ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨೭) ಡಾ॥ ದೇವರಕೊಂಟಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೮೯ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

* * *

ಅಧ್ಯಾಯ - ೬

ಕಲೆ ಮತ್ತು ವಾಸ್ತುಶಿಲ್ಪ

[illegible]

ಅಧ್ಯಾಯ – ೬

ಕಲೆ ಮತ್ತು ವಾಸ್ತುಶಿಲ್ಪ

ಕಲಾ ಪ್ರಪಂಚಕ್ಕೆ ಅದರಲ್ಲೂ ಭಾರತೀಯ ಕಲೆಗೆ ಅರಸು ಮನೆತನಗಳೂ ಬಹುದೊಡ್ಡದಾದ ಮರೆಯಲಾರದಂತ ಕಾಣಿಕೆಯನ್ನು ನೀಡಿದ್ದಾರೆ. ಒಂದು ದೇಶದ ಸಾಂಸ್ಕೃತಿಕ ಸಂಪತ್ತು ಎನಿಸಿಕೊಂಡಿರುವ ದೇವಾಲಯಗಳು ಮತ್ತು ಮೂರ್ತಿ ಶಿಲ್ಪಗಳು ಆ ದೇಶದ ಸಂಸ್ಕೃತಿಯನ್ನು ಅತ್ಯಂತ ಶ್ರೀಮಂತಗೊಳಿಸುವಲ್ಲಿ ಸಾಕಷ್ಟು ಪ್ರಮುಖವಾದ ಪಾತ್ರವನ್ನು ವಹಿಸಿವೆ. ಈ ನಿಟ್ಟಿನಲ್ಲಿ ಭಾರತವು ಪ್ರಾಚೀನ ಕಾಲದಿಂದಲೂ ಉಜ್ವಲವಾದ ಇತಿಹಾಸವನ್ನು ಭವ್ಯ ಪರಂಪರೆಯನ್ನು ಹಾಗೂ ಶ್ರೀಮಂತಿಕೆಯನ್ನು ಹೊಂದಿದ ದೇಶವಾಗಿದೆ. ಭಾರತ ದೇಶವು ಕೇವಲ ಆರ್ಥಿಕ ಸಂಪತ್ತಿನಿಂದ ಮಾತ್ರ ಶ್ರೀಮಂತವಾಗಿರದೇ ಇಲ್ಲಿರುವ ಧರ್ಮ, ಸಾಹಿತ್ಯ, ಕಲೆ, ವಾಸ್ತು, ಶಿಲ್ಪಕಲೆಗಳು ಸಹ ದೇಶದ ನಿಜವಾದ ಸಾಸ್ಕೃತಿಕ ಆಸ್ತಿ ಎನಿಸಿಕೊಂಡಿವೆ. ಭಾರತವನ್ನು ಆಳಿದ ಪ್ರಮುಖವಾದ ಅರಸ ಮನೆತನಗಳು ಕಲೆ ಮತ್ತು ವಾಸ್ತು ಶಿಲ್ಪದ ಬೆಳವಣಿಗೆಗೆ ಮರೆಯಲಾರದಂತಹ ಕೊಡುಗೆಗಳನ್ನು ನೀಡಿವೆ. ಆದ್ದರಿಂದಲೇ ಭಾರತವು ತನ್ನದೇ ಆದ ಸಂಸ್ಕೃತಿಯನ್ನು ಪಡೆದು ಬಂದು ವೈಶಿಷ್ಟ್ಯ ಪೂರ್ಣವಾದ ಹಾಗೂ ವಿಶಿಷ್ಟವಾದ ಸ್ಥಾನವನ್ನು ಇಂದಿಗೂ ಉಳಿಸಿ ಬೆಳೆಯಿಸಿ ಮುಂದುವರೆಯಿಸಿಕೊಂಡು ಬಂದಿದೆ.

ಭಾರತೀಯರು ಹತ್ತು ಹಲವಾರು ಧಾರ್ಮಿಕ ಕಲ್ಪನೆ ಹಾಗೂ ದೈವತ್ವದಲ್ಲಿ ನಂಬಿಕೆಯನ್ನು ಹೊಂದಿದ ಭಾರತೀಯರು ಭಾರತ ದೇಶದ ತುಂಬೆಲ್ಲ ವೈವಿಧ್ಯಮಯ ಹಾಗೂ ವಿಶಿಷ್ಠವಾದ ದೇವಾಲಯಗಳನ್ನು ನಿರ್ಮಾಣ ಮಾಡಿದರು. ಜಗತ್ತಿನ ಯಾವುದೇ ಭಾಗದಲ್ಲಿ ಕಂಡುಬರದೇ ಇರುವ ದೇವಾಲಯಗಳನ್ನು ಭಾರತದಲ್ಲಿ ಕಾಣುತ್ತೇವೆ. ಈ ದೇವಾಲುಯಗಳು ಕೇವಲ ಧಾರ್ಮಿಕ ಕುರುಹುಗಳಾಗಿರದೇ ಪ್ರಾಚೀನ ಕಾಲದ ಸಾಂಸ್ಕೃತಿಕ ಕೇಂದ್ರಗಳಾಗಿವೆ. ಇವುಗಳು ಅಂದಿನ ಜನರ ಕಲಾಭಿರುಚಿಯನ್ನು ಕಲೆಯ ಅಭಿವೃದ್ಧಿಗಾಗಿ ಅವರು ನೀಡಿರುವ ವಿಶೇಷ ಪ್ರೋತ್ಸಾಹವನ್ನು ಶಿಲ್ಪಿಗಳ ಕೈಚಳಕ ಮತ್ತು ಕಲಾನೈಪುಣ್ಯತೆಯ ಮಹಿಮೆಯನ್ನು ಇಂದಿನ ಜನತೆಗೆ ಸಾರಿ ಸಾರಿ ಹೇಳುವ ಜೀವಂತ ಸಾಕ್ಷಿಗಳಾಗಿವೆ. ಇವುಗಳು ಕಲಾ ಕ್ಷೇತ್ರಕ್ಕೆ ನೀಡಿರುವ ಅಮೋಘವಾದ ಕೊಡುಗೆಗಳಾಗಿವೆ.

ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಂತೂ ಇಂತಹ ದೇವಾಲಯಗಳ ನಿರ್ಮಾಣ ಕಾರ್ಯ ಬರದಿಂದ ಸಾಗಿದನ್ನು ಕಾಣುತ್ತೇವೆ. ಕ್ರಿ.ಶ. ೯–೧೦ ನೇ ಶತಮಾನದಲ್ಲಂತೂ ದೇವಾಲಯಗಳ ನಿರ್ಮಾಣ ಕಾರ್ಯದಲ್ಲಿ ಹೊಸ ಅಧ್ಯಾಯವೇ ಪ್ರಾರಂಭವಾಯಿತ್ತೆಂದು ಹೇಳಬಹುದು. ಭಾರತದಲ್ಲಿಯ ಹಾಗೂ ಕರ್ನಾಟಕದಲ್ಲಿಯ ಕಲಾಸಿರಿಯ ಸಮಗ್ರವಾದ ಪದ್ಧತಿ ಹಾಗೂ ವಿಶಿಷ್ಟವಾದ ಶೈಲಿಯನ್ನು

ತನ್ನಲ್ಲಿ ಹುದುಗಿಸಿಕೊಂಡಿರುವ ಐತಿಹಾಸಿಕ ಪ್ರಾಚೀನ ತೇರದಾಳ ೧೨ರ ನಾಡಿನ ಪ್ರಮುಖವಾದ ಮಧ್ಯವರ್ತಿ ಸ್ಥಳ ತೇರದಾಳವಾಗಿದೆ. ಹಿಂದೆ ಕೆಲವು ಪ್ರಾಚೀನ ದೇವಾಲಯಗಳ ಕೇಂದ್ರ ಸ್ಥಾನವಾಗಿತ್ತು. ಇಂದು ಸಹ ಈ ಪ್ರದೇಶದಲ್ಲಿ ಕೆಲವು ದೇವಾಲಯಗಳು ವಿಶೇಷವಾದ ಅತ್ಯಾಕರ್ಷಕವಾಗಿ ಉಳಿದಿದೆ. ಇಲ್ಲಿರುವ ಬಸದಿಗಳು ಮತ್ತು ಹಲವು ಶೈವ ದೇವಾಲಯಗಳು ಉತ್ಕೃಷ್ಟವಾದ ಕಲೆಯ ಆಗರಗಳಾಗಿವೆ. ಇವುಗಳು ಅಂದಿನ ಜನರ ವಿಶೇಷವಾದ ಭಕ್ತಿ ನಿಷ್ಠೆಗಳು ಹಾಗೂ ಪ್ರಾಮಾಣಿಕತೆಯ ಸಂಕೇತ ಮಾತ್ರವಾಗಿರದೆ, ಕಲಾವೈಭವ ಮತ್ತು ಕಲಾರಸಿಕತೆಯನ್ನು ಸಾರಿ ಹೇಳುವ ಮೂಖ ಜೀವಂತವಾದ ಸಾಕ್ಷಿಗಳಾಗಿವೆ. ಕೆಲವು ದೇವಾಲಯಗಳಲಂತೂ ದೇಗುಲದ ಪ್ರತಿಯೊಂದು ಭಾಗವು ಶಿಲ್ಪಿಯ ಕೈ ಚಳಕಕ್ಕೆ ಸಿಲುಕಿ ಕಲಾ ವಿಶಿಷ್ಟವಾದ ಪರಿಣಿತಿಯನ್ನು ಪಡೆದುಕೊಂಡಿವೆ. ಐತಿಹಾಸಿಕ ಪ್ರಾಚೀನ ತೇರದಾಳದ ನೇಮಿನಾಥ ಜೀನಾಲಯ ಮತ್ತು ಕಲ್ಮೇಶ್ವರ ದೇವಾಲಯಗಳು ಕಲ್ಯಾಣ ಚಾಲುಕ್ಯರ ಶೈಲಿಗಳನ್ನು ಹೊಂದಿದ್ದು. ದೇವಾಲಯಗಳನ್ನು ಒರಟಾದ ದೊಡ್ಡ ದೊಡ್ಡದಾದ ಬಂಡೆಗಲ್ಲು ಹಾಗೂ ಒಳಗಿನ ಭಾಗದಲ್ಲಿ ಮೆದುಗಲ್ಲನ್ನು ಇವರು ದೇವಾಲಯಗಳಲ್ಲಿ ಬಳಸಲಾಗಿದೆ. ನೇಮಿನಾಥ ಜಿನಾಲಯವು ಸೂಕ್ಷ್ಮವಾದ ಕೆತ್ತನೆಯ ಕೆಲಸ ಇವರ ದೇವಾಲಯದ ವಿಶಿಷ್ಟವಾದ ಲಕ್ಷಣವಾಗಿದೆ. ಇನ್ನು ಐತಿಹಾಸಿಕ ಪ್ರಾಚೀನ ತೇರದಾಳ ಹಲವಾರು ದೇವಾಲಯಗಳ ವೈಶಿಷ್ಟಗಳನ್ನು ಈ ಕೆಳಗಿನಂತೆ ಅರಿಯಬಹುದು.

೬.೧ ನೇಮಿನಾಥ ಜಿನಾಲಯ (ಎಕಕೂಟ) :

ಕ್ರಿ.ಶ. ೧೧೨೩ ರ ಕಾಲದಲ್ಲಿ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದ ದೊರೆತ ಶಾಸನದ ೧ ಪ್ರಕಾರ ಗೊಂಕರಸನೆಂಬ ಮಾಂಡಳಿಕ ದೊರೆಯು ಇದೇ ತೇರದಾಳ ಗ್ರಾಮದಲ್ಲಿ ನೇಮಿನಾಥ ಜಿನಾಲಯವನ್ನು (ಬಸದಿಯನ್ನು) ಕಟ್ಟಿಸಿದನು[೧]. ಇದು ಸಾಮಾನ್ಯವಾಗಿ ಗೊಂಕಜಿನಾಲಯವೆಂದೇ ಪ್ರಚಲಿತವಾಗಿರುವ ಈ ಬಸದಿಯು ಉತ್ತರಕ್ಕೆ ಮುಖ ಮಾಡಿದ್ದನ್ನು ಕಾಣುತ್ತೇವೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಜನ್ಮತಾಳಿದ ಚಾಲುಕ್ಯ ಶೈಲಿ (ಕಲ್ಯಾಣ ಚಾಳುಕ್ಯ) ಮನೆತನದ ವಾಸ್ತುಶಿಲ್ಪ ಶೈಲಿಯ ಲಕ್ಷಣಗಳನ್ನೇ ವಿಶೇಷವಾಗಿ ಹೊತ್ತು ನಿಂತಿದೆ. ಈ ಬಸದಿಯು ಬೆಣಚು ಕಲ್ಲಿನಿಂದ ನಿರ್ಮಿತಗೊಂಡಿರುವ ಈ ನೇಮಿನಾಥ ಜಿನಾಲಯವು ಎಕಕೂಟ ತಲಾವಿನ್ಯಾಸವನ್ನು ಹೊಂದಿದ್ದು ಒಂದೇ ಒಂದು ಸುಂದರವಾದ ಗರ್ಭಗೃಹ, ಗರ್ಭಗೃಹಕ್ಕೆ ಹೊಂದಿಕೊಂಡಂತೆ 'ಸುಖನಾಸಿ'. ಈ ಸುಖನಾಸಿಗೆ ಹೊಂದಿಕೊಂಡಂತೆ ವಿಶಾಲವಾದ ಚತುಸ್ರಾಕಾರದ 'ನವರಂಗ' ಹಾಗೂ ಮುಖ ಮಂಟಪವನ್ನು ಒಳಗೊಂಡಿದೆ. ಇಂತಹ ಒಂದು ತಲ ವಿನ್ಯಾಸದ ಮೇಲೆ ನಿಂತಿರುವ ಈ ಜಿನಾಲಯ(ಬಸದಿಯ) ಪ್ರಮುಖವಾದ ಲಕ್ಷಣಗಳು ಈ ಕೆಳಗಿನಂತೆ ಇವೆ.

ನಿವೇಶನ	:	**ಊರ ಮಧ್ಯದಲ್ಲಿ**
ಕಾಲ	:	**೧೨ ನೇ ಶತಮಾನ**
ದಿಕ್ಕು	:	**ಉತ್ತರಾಭಿಮುಖ**
ಅರ್ಪಣೆ	:	**ನೇಮಿನಾಥ(ಜಿನ)**
ಅರಸು ಮನೆತನ	:	**ಕಲ್ಯಾಣಿ ಚಾಲುಕ್ಯರು**
ಮಾದರಿ	:	**ವೇಸರ ಶೈಲಿ**

ಜಗತಿ :

ನೇಮಿನಾಥ ಜಿನಾಲಯದ ಒಂದು ವಿಶಿಷ್ಟ ಲಕ್ಷಣವೆಂದರೆ ಅಲ್ಲಿರುವ ಜಗತಿ. ದೇವಾಲಯದ ಹೊರಗೋಡೆ ನೋಡಿದರೆ, ಹೊಯ್ಸಳ ದೇವಾಲಯಗಳಲ್ಲಿ ಕಾಣುವಂತೆ ಜಿನಾಲಯದ ಹೊರ ಪ್ರದಕ್ಷಿಣೆಯನ್ನು ಹಾಕಲು ೩ ಅಡಿ ಎತ್ತರವಾಗಿ ನಿರ್ಮಿಸಿದ ಅಚ್ಚುಕಟ್ಟಾಗಿ ಕಲ್ಲುಗಳಿಂದ ಜೋಡಿಸಿದ ಜಗತಿಯನ್ನು ನಾವು ಕಾಣಬಹುದು. ಇದು ಜಿನಾಲಯದ ಅಲಂಕರಣೆಯನ್ನು ಹೆಚ್ಚಿಸುವಲ್ಲಿ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಇದರ ಮೇಲೆ ಜಿನಾಲಯದ ಅದಿಷ್ಠಾನ ಭಾಗವನ್ನು ಕಾಣಬಹುದು.

ಅದಿಷ್ಠಾನ :

ಜಿನಾಲಯವು ಅದಿಷ್ಠಾನ ಭಾಗವನ್ನು ಹೊಂದಿದ್ದು ಇದರಲ್ಲಿ ಉಪಾನ, ಪಟ್ಟಿ, ಕಪೋತಗಳ ಮತ್ತು ದಂತಾಕೃತಿಯ ರಚನೆಯನ್ನೊಳಗೊಂಡಿರುವ ಪಟ್ಟಿಯನ್ನು ಹಾಗೂ ಕಪೋತ ಭಾಗವನ್ನು ಕಾಣಬಹುದು.

ಭಿತ್ತಿ ಅಥವಾ ಗೋಡೆ :

ಐತಿಹಾಸಿಕ ಪ್ರಾಚೀನ ತೇರದಾಳದ ನೇಮಿನಾಥ ಜಿನಾಲಯದ ಹೊರ ಗೊಡೆಯು ಅಲಂಕೃತವಾಗಿದ್ದು. ಅನೇಕ ಹಿಂಬಣಿ ಮತ್ತು ಮುಂಬಣಿಗಳಿಂದ ಕೂಡಿದೆ. ಆದರೆ ಇಂದು ನೋಡಲಾಗಿ ಕೇವಲ ಗರ್ಭಗೃಹ ಹಾಗೂ ಅಂತರಾಳದ ಹೊರಗೊಡೆಯು ಮೂಲರೂಪದಲ್ಲಿದ್ದು, ನವರಂಗದ ಹೊರಗೊಡೆಯು ಪುನರಚನೆಗೊಂಡಿದೆ. ಗರ್ಭಗೃಹದ ಹೊರಗೊಡೆಯು ಮೂರು ಬದಿಯಲ್ಲಿ ಮೂರು ಚಿಕ್ಕದಾದ ಸುಂದರವಾದ ದೇವಕೋಷ್ಠಗಳನ್ನು ಮಾಡಿದ್ದಾರೆ. ಒಟ್ಟಿನಲ್ಲಿ ನೇಮಿನಾಥ ಜಿನಾಲಯದ ಹೊರ ಗೊಡೆಗಳ ಭಾಗ ಕಲ್ಯಾಣಿ ಚಾಲುಕ್ಯರ ಕಾಲದ ಲಕ್ಷಣಗಳನ್ನೊಳಗೊಂಡು ರಚನೆಯಾಗಿವೆ ಎಂದು ಹೇಳಬಹುದು.

ಕೋಷ್ಠಗುಡಿಗಳು :

ಐತಿಹಾಸಿಕ ಪ್ರಾಚೀನ ತೇರದಾಳದ ನೇಮಿನಾಥ ಜಿನಾಲಯದ ಗರ್ಭಗೃಹದ ಹೊರ ಗೊಡೆಯು ಪೂರ್ವ, ಪಶ್ಚಿಮ, ದಕ್ಷಿಣ ಮೂರು ಬದಿಗಳಲ್ಲಿ ಅಲಂಕೃತವಾದ ದೇವಕೋಷ್ಠಗಳನ್ನು ಮಾಡಿದ್ದಾರೆ. ಈ ದೇವಕೋಷ್ಠಗಳ ಮೇಲೆ ಅರ್ಧಕಂಬ, ಲತಾಬಳ್ಳಿಯ ಪಟ್ಟಿಗಳನ್ನು ಹಾಗೂ ಮೇಲೆ ದ್ರಾವಿಡ ಶಿಖರದ ಚಿತ್ರಣವನ್ನೊಳಗೊಂಡು ಸುಂದರವಾದ ಅಲಂಕೃತವಾಗಿದೆ.

ಗರ್ಭಗೃಹ :

ಗರ್ಭಗೃಹವು ಚತುಸ್ರಾಕಾರವಾಗಿದ್ದು ಇದರಲ್ಲಿ ನಾಲ್ಕು ಅರ್ಧಕಂಬ ಹಾಗೂ ಕಮಲದ ಕೆತ್ತನೆಯುಳ್ಳ ಭುವನೇಶ್ವರಿಯನ್ನು ಹೊಂದಿದೆ. ಜೊತೆಗೆ ಪೀಠದ ಮೇಲೆ ಪದ್ಮಾಸನದಲ್ಲಿ ನೇಮಿನಾಥ ವಿಗ್ರಹವನ್ನು ಸಹ ಪ್ರತಿಷ್ಠಾಪನೆಯನ್ನು ಮಾಡಲಾಗಿದೆ. ಇದು ೯.೬ X ೯.೬ ಉದ್ದ ಅಗಲವನ್ನು ಹೊಂದಿದೆ. ಗರ್ಭಗೃಹದ ದ್ವಾರ ಬಾಗಿಲವು ಅಲಂಕೃತವಾಗಿದೆ ಹಾಗೂ ಲಲಾಟ ಬಿಂಬವು ಶಿಖರಗಳ ಕೆತ್ತನೆ ಹಾಗೂ ಸುರಳಿಯಾಕಾರದ ಶಿಲ್ಪವನ್ನು ಇದು ಒಳಗೊಂಡಿದೆ.

ಸುಖನಾಸಿ ಅಥವಾ ಅಂತರಾಳ :

ನೇಮಿನಾಥ ಜಿನಾಲಯದ ಗರ್ಭಗೃಹಕ್ಕೆ ಹೊಂದಿಕೊಂಡಿರುವ ಭಾಗವನ್ನು ಸುಖನಾಸಿ ಅಥವಾ ಅಂತರಾಳ ಎನ್ನುವರು. ಇದು ಕೂಡಾ ಗರ್ಭಗೃಹದ ಆಕಾರದಲ್ಲಿಯೇ ಕಟ್ಟಲ್ಪಟ್ಟಿದ್ದು ಇದು ಸಹ ನಾಲ್ಕು ಅರ್ಧಗಂಭಗಳನ್ನು ಒಳಗೊಂಡಿದೆ.

ಸುಖನಾಸಿಯ ದ್ವಾರವು ಸರಳವಾಗಿದ್ದು, ಲಲಾಟಬಿಂಬದ ಮೇಲ್ಗಡೆ ೧೨ ಚಿಕ್ಕ ಜಾಲಂದ್ರಗಳು ದ್ವಾರದ ಬಲಕ್ಕೆ ೧೪ ಹಾಗೂ ಎಡಕ್ಕೆ ೧೪ ಚಿಕ್ಕ ಜಾಲಂದ್ರಗಳಿರುವುದನ್ನು ಕಾಣಬಹುದು.

ನವರಂಗ :

ಸುಖನಾಸಿಯ ಭಾಗಕ್ಕೆ ಹೊಂದಿಕೊಂಡಿರುವ ಭಾಗವೇ ನವರಂಗ ಈ ನವರಂಗವು ಚತುಸ್ರಾಕಾರವಾಗಿದ್ದು, ನಾಲ್ಕು ಪೂರ್ಣಗಂಭಗಳನ್ನು ಮತ್ತು ಹನ್ನೆರಡು ಅರ್ಧಗಂಭಗಳನ್ನು ಇವುಗಳು ಸಂಪೂರ್ಣವಾಗಿ ನವರಂಗ ಮಂಟಪದ ಭಾರವನ್ನು ಹೊತ್ತಿರುವಂತೆ ತೋರುತ್ತದೆ. ನಾಲ್ಕು ಕಂಬಗಳು ಕೆಳಭಾಗವು ಚೌಕಾಕಾರದ್ದು ಮತ್ತೆ ಗೋಲಾಗಿ ಬೋಧಿಗೆಯನ್ನು ಹೊಂದಿದೆ. ಇವು ಸಂಪೂರ್ಣವಾಗಿ ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪದ ಲಕ್ಷಣಗಳನ್ನೊಳಗೊಂಡು ನಿರ್ಮಿತವಾದಂತವುಗಳಾಗಿವೆ.

ನವರಂಗದ ಬಲಕ್ಕೆ ಅತಿ ಸುಂದರವಾಗಿ ಪದ್ಮಾವತಿ ಹಾಗೂ ಎಡಕ್ಕೆ ಕುಷ್ಮಾಂಡಿನಿ ಎಂಬ ಯಕ್ಷಣಿಯ ಎಂಬ ಅತಿ ಸುಂದರವಾಗಿ ಕೆತ್ತಲ್ಪಟ ಅತಿ ಸುಂದರವಾದ ವಿಗ್ರಹಗಳನ್ನು ಕಾಣಬಹುದು.

ನವರಂಗದ ಮೇಲ್ಭಾಗದಲ್ಲಿ ಹೂವು ಮತ್ತು ವಜ್ರಾಕೃತಿಯ ಅಲಂಕರಣೆಯನ್ನು ಕಾಣಬಹುದು. ನವರಂಗದ ಎರಡು ಕಂಬದ ಕೆಳಗೆ ಖಡ್ಗಾಸನದಲ್ಲಿರುವ ತೀರ್ಥಂಕರರ ಮೂರ್ತಿಗಳನ್ನು ಕಾಣಬಹುದು.

**ಶ್ರೀ ಮನ್ನೇಮಿಜಿನೇಂದ್ರನ ಪ್ರತಿಮೆಯಂ ಸಮ್ಯಕ್ತ್ವ ಚೂಡಾಮಣಿಗಳಾದಂ
ಥಾ ಶ್ರೀಮತ್ತೇರಿದಳದ ದೇಶಾಯಿ ಸತ್ಯೌವ್ವ ತತ್ಪುತ್ರ ಜಕ್ಕಪ್ಪ ಸಹವಾಗಿ
ಮಾಡಿಸಿ ಶ್ರೀ ಗೊಂಕಜಿನಾಲಯದಲ್ಲಿ ಪ್ರತಿಷ್ಠೆಯನು ಮಾಡಿದ ಶ
ಕ ವರ್ಷ। ೧೬೭೦ ವಿಭವನಾಮ ಸಂವತ್ಸರದ ಮಾರ್ಗ್ಗಶಿರದ
ಶುಕ್ಲ ದಶಮಿ ಶುಕ್ರವಾರದಲ್ಲಿ ಭದ್ರಂ ಭೂಯಾತ್ ಶ್ರೀ ಶ್ರೀ ಶ್ರೀ ।**[೬]

ಶಾಸನದಲ್ಲಿ ಕಾಲವನ್ನು ಶಕವರ್ಷ ೧೬೭೦ ವಿಭವ ಮಾರ್ಗಶಿರ ಶು.ದಶಮಿ ಎಂದಿದ್ದು. ಇದು ಕ್ರಿ.ಶ. ೧೮-೧೧-೧೭೪೮ಕ್ಕೆ ಸರಿಹೊಂದುತ್ತದೆ. ತೇರದಾಳದ ದೇಶಾಯಿ ಸತ್ಯೌವ್ವ ಮತ್ತು ಆಕೆಯ ಮಗನಾದ ಜಕ್ಕಪ್ಪ ಸೇರಿ ಗೊಂಕ ಜಿನಾಲಯದಲ್ಲಿ ನೇಮಿನಾಥಸ್ವಾಮಿ ತಿರ್ಥಂಕರನ ಖಡ್ಗಾಸನದಲ್ಲಿರುವ ತೀರ್ಥಂಕರರ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿಸಿದುದ್ದನ್ನು ತಿಳಿಸುತ್ತದೆ.

ಮುಖ ಮಂಟಪ :

ನವರಂಗಕ್ಕೆ ಹತ್ತಿಕೊಂಡಿರುವ ಭಾಗವೇ ಮುಖಮಂಪಟ. ಇದರಲ್ಲಿ ನಾಲ್ಕು ಪೂರ್ಣಗಂಬ, ನಾಲ್ಕು ಚಿಕ್ಕ ಕಂಬ, ನಾಲ್ಕು ಅರ್ಧಗಂಬಗಳನ್ನು ನೋಡಬಹುದು. ಈ ಕಂಬಗಳ ಕೆಳಭಾಗವು ಚೌಕಾಕಾರದಿಂದಿದ್ದು ಮತ್ತೆ ಗೋಲಾಗಿರುವ ಬೋಧಿಗೆಯನ್ನು ಹೊಂದಿದೆ. ಇಲ್ಲಿ ಕೆತ್ತಲ್ಪಟ್ಟ ಕಂಬಗಳೆಲ್ಲವೂ ನವರಂಗದಲ್ಲಿರುವ ಕಂಬಗಳ ಕೆತ್ತನೆಯ ಲಕ್ಷಣಗಳನ್ನು ಇವು ಒಳಗೊಂಡಿದೆ. ಮುಖ ಮಂಟಪವು ಆಯತಾಕಾರವಾಗಿದ್ದು ವಿಶೇಷವಾಗಿದೆ.

ಮುಖಮಂಟಪದ ದ್ವಾರದ ಬಲಭಾಗದಲ್ಲಿ ಎರಡು ಅರ್ಧ ಕಂಬಗಳ ಮಧ್ಯದಲ್ಲಿ ೧೧೨೩, ೧೧೮೧, ೧೧೮೬ ಹೀಗೆ ಮೂರು ಮಿತಿಗಳನ್ನೊಳಗೊಂಡ ಸುಂದರವಾಗಿ ಕೆತ್ತಲ್ಪಟ್ಟ ಶಾಸನಗಳು ಇವೆ.

ದ್ವಾರಗಳು :

ನೇಮಿನಾಥ ಜಿನಾಲಯದ ಪ್ರಮುಖವಾದ ಲಕ್ಷಣಗಳಲ್ಲಿ ಒಂದಾದ ದ್ವಾರಗಳು ಅಲಂಕೃತವಾಗಿರುವುದನ್ನು ಕಾಣಬಹುದು. ಗರ್ಭಗೃಹ ಮತ್ತು ಸುಖನಾಸಿಯ ದ್ವಾರಗಳು ನವರಂಗದ ದ್ವಾರಕ್ಕಿಂತ ಚಿಕ್ಕದಾಗಿದ್ದು. ಗರ್ಭಗೃಹದ ದ್ವಾರದ ಚೌಕಟ್ಟು ಅಲಂಕೃತವಾಗಿದ್ದು. ಮೂರು ಪಟ್ಟಿಕೆಗಳಿಂದ ಕೂಡಿದೆ. ಈ ಪಟ್ಟಿಕೆಗಳು ಲತಾಸುರಳಿ ಹಾಗೂ ಅರ್ಧಗಂಬಗಳ ಕೆತ್ತನೆಯನ್ನು ಒಳಗೊಂಡಿದೆ. ಸುಖನಾಸಿಯ ದ್ವಾರವು ಸರಳವಾಗಿದ್ದು ಲಲಾಟಬಿಂಬದ ಮೇಲ್ಗಡೆ ಹಾಗೂ ಈ ದ್ವಾರದ ಬಲಕ್ಕೆ ಮತ್ತು ಎಡಕ್ಕೆ ಎರಡೂ ಬದಿಯಲ್ಲಿ ಜಾಲಂಧ್ರಗಳನ್ನು ನೋಡಬಹುದು.

ನವರಂಗದ ಬಾಗಿಲು ಬೃಹದಾಕಾರವಾಗಿದ್ದು ಸಂಪೂರ್ಣವಾಗಿ ಅಲಂಕೃತಗೊಂಡಿದೆ. ಲಲಾಟ ಬಿಂಬವು ಅಲಂಕೃತವಾಗಿದ್ದು ಶಿಖರ ಹಾಗೂ ಕಂಬಗಳ ಕೆತ್ತನೆಯನ್ನು ಒಳಗೊಂಡಿದೆ. ಜೊತೆಗೆ ಲಲಾಟಬಿಂಬದ ಮಧ್ಯದಲ್ಲಿ ನೇಮಿನಾಥ ವಿಗ್ರಹದ ಕೆತ್ತನೆಯನ್ನು ಕಾಣಬಹುದು. ಈ ದ್ವಾರದ ಚೌಕಟ್ಟುಗಳು ಅಲಂಕೃತವಾಗಿದ್ದು, ಹಲವಾರು ಪಟ್ಟಿಕೆಗಳಿಂದ ಕೂಡಿದೆ. ಇಂತಹ ಪಟ್ಟಿಕೆಗಳಲ್ಲಿ ವಜ್ರಾಕೃತಿಯ ಮತ್ತು ವೃತ್ತಾಕಾರದ ಕೆತ್ತನೆ ಹಾಗೂ ಸುರಳಿಯಾಕಾರದ ಕೆತ್ತನೆ, ಕಂಬ ಮತ್ತು ಇತರ ಪ್ರಾಣಿ ಶಿಲ್ಪಗಳ ಕೆತ್ತನೆಯನ್ನು ನಾವು ಕಾಣಬಹುದು.

ಕಂಬಗಳು :

ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದ ಈ ನೇಮಿನಾಥ ಜಿನಾಲಯದ ಪ್ರಮುಖವಾದ ಲಕ್ಷಣಗಳಲ್ಲಿ ಒಂದಾದ ಕಂಬಗಳು ಸುಂದರವಾಗಿ ಅಲಂಕಾರಯುತವಾದ ಕೆತ್ತನೆಯಿಂದ ನಿರ್ಮಿತವಾಗಿರುವುದನ್ನು ನಾವು ಕಾಣುತ್ತೇವೆ. ನವರಂಗವು ಚತುಸ್ರಾಕಾರವಾಗಿದ್ದು (ಚೌಕಾಕಾರವಾಗಿದ್ದು) ನಾಲ್ಕು ಪೂರ್ಣವಾದ ಕಂಬಗಳನ್ನು ಒಳಗೊಂಡಿದೆ. ಈ ಕಂಬಗಳು ವಿಶೇಷವಾಗಿ ಕಲ್ಯಾಣಿ ಚಾಲುಕ್ಯರ ಕಲೆಯ ಸಂಪೂರ್ಣವಾದ ಲಕ್ಷಣಗಳನ್ನು ಒಳಗೊಂಡಿದ್ದು. ಕೆಳಗಡೆಗೆ ಅಧಿಷ್ಠಾನ ಭಾಗವನ್ನು ಹೊಂದಿದ್ದು ಉಪಾನ, ಕುಮುದ, ಕಪೋತ ಪಟ್ಟಿಯನ್ನು ಈ ಕಂಬಗಳ ಮೇಲೆ ನೋಡಬಹುದು. ಈ ಕಂಬದ ಅಧಿಷ್ಠಾನ ಭಾಗದ ಮೇಲೆ ಚೌಕಾಕಾರದ ಭಾಗವನ್ನು ಅದರ ಮೇಲೆ ಬಹುಭುಜಾಕೃತಿಯ ಹಲವಾರು ಪಟ್ಟಿಕೆಗಳನ್ನು, ಹೂವಿನ ಚಿತ್ರಗಳನ್ನೊಳಗೊಂಡಿರುವ ಪಟ್ಟಿಕೆಗಳನ್ನು ನೋಡಬಹುದು. ಅದರ ಮೇಲೆ ಚೌಕಾಕಾರದ ಪಟ್ಟಿಯ ಮೇಲೆ ಬಹುಭುಜಾಕಾರದ ಪಟ್ಟಿ ಕಮಲದ ಎಸಳದ ಪಟ್ಟಿ, ಗಂಟೆಯಾಕಾರದ ಪಟ್ಟಿ ಹೀಗೆ ಹಲವಾರು ರೀತಿಯ ಪಟ್ಟಿಕೆಗಳನ್ನು ನೋಡಬಹುದು. ಅದರ ಮೇಲೆ ಚೌಕಾಕಾರದ ಪಟ್ಟಿ ಇದ್ದು ಮೇಲೆ ಸರಳವಾಗಿರುವ ತರಂಗ ಬೋಧಿಗೆಯನ್ನು ಕಾಣಬಹುದು.

ಆದರೆ ಇದೇ ನವರಂಗದಲ್ಲಿರುವ ಹನ್ನೆರಡು ಅರ್ಧಗಂಬಗಳು ಬೇರೆ ರೀತಿಯಾದಂತ ಅಲಂಕರಣೆಯನ್ನು ಹೊಂದಿವೆ. ಇವು ನಡುವಿರುವ ಕಂಬಗಳಿಂದ ಪೂರ್ಣ ವ್ಯತ್ಯಾಸವಾಗಿದ್ದು ಸಣ್ಣ ಸಣ್ಣ ಪಟ್ಟಿಕೆಗಳ ಕೆತ್ತನೆಯನ್ನು ಈ ಕಂಬಗಳಲ್ಲಿ ನೋಡಬಹುದು.

ಕಕ್ಷಾಸನಗಳು :

ನೇಮಿನಾಥ ಜಿನಾಲಯದ ಮುಖಮಂಟಪದಲ್ಲಿ ಕಕ್ಷಾಸನಗಳು ಇರುವುದನ್ನು ನೋಡುತ್ತೇವೆ. ಮುಖ ಮಂಟಪವು ಆಯತಾಕಾರವಾಗಿದ್ದು. ಈ ಆಯತಾಕಾರದ ಮುಖ ಮಂಟಪದ ಬಲಕ್ಕೆ ಮತ್ತು ಎಡಕ್ಕೆ ಸಮವಾಗಿ ಎರಡು ಕಕ್ಷಾಸನಗಳು ಇರುವುದನ್ನು ನೊಡುತ್ತೇವೆ. ಆದರೆ ಈ ಕಕ್ಷಾಸನಗಳು ಪ್ರಾಚೀನ ಕಾಲದವೋ, ಪುರುಜ್ಜೀವನಗೊಳಿಸಿದ್ದೋ ಅಥವಾ ಇತ್ತೀಚಿನವೋ ಎಂದು ತಿಳಿಯುವುದು ಕಷ್ಟಕರವಾಗಿದೆ.

ಮಂಜೂರ :

ನೇಮಿನಾಥ ಜಿನಾಲಯುದ ಮುಖಮಂಟಪದ ಹೊರಗಡೆ ಮೇಲ್ಛಾವಣಿಯ ಮುಂದುಗಡೆ ಮಂಜೂರ ಭಾಗವನ್ನು ಕಾಣಬಹುದು. ಅದರ ಮೇಲೆ ನಿಂತುಕೊಂಡರೆ ನೇಮಿನಾಥ ಜಿನಾಲಯುದಲ್ಲಿರುವ ನೇಮಿನಾಥನನ್ನು ನಾವು ಕಾಣಬಹುದು. ಅದು ಚೌಕಾಕಾರದಲ್ಲಿ ಇರುವುದನ್ನು ಕಾಣುತ್ತೇವೆ. ಇದು ಯಾವುದೇ ಅಲಂಕರಣೆಯುನ್ನು ಹೊಂದದೇ ಸರಳವಾಗಿರುವುದನ್ನು ನಾವು ಕಾಣುತ್ತೇವೆ.

ಮಾನ ಸ್ತಂಬ :

ನೇಮಿನಾಥ ಜೀನಾಲಂಯುದ ಎದುರಿಗೆ ಬೃಹದಾಕಾರದ ಸುಂದರವಾದ ಮಾನಸ್ತಂಬವಿರುವುದನ್ನು ಕಾಣುತ್ತೇವೆ. ಸುಮಾರು ೫ ಅಡಿ ಚೌಕಾಕಾರದ ಪೀಠದ ಮೇಲೆ ಸುಮಾರು ೩೫ ಅಡಿ ಎತ್ತರವಾಗಿರುವ ಸ್ತಂಭವನ್ನು ನಿಲ್ಲಿಸಿರುವುದನ್ನು ನೋಡುತ್ತೇವೆ. ಮಾನಸ್ತಂಭವು ಜೈನರ ವಾಸ್ತುಶಿಲ್ಪದಕಲೆಯ ಪ್ರಮುಖವಾದ ಲಕ್ಷಣಗಳಲ್ಲಿ ಒಂದಾಗಿದೆ. ಅದರ ಮೇಲೆ ಹೋದಂತೆ ವೃತಾಕಾರದ ಕೆತ್ತನೆಯನ್ನು ಒಳಗೊಂಡು, ವೃತಾಕಾರದ ಬೋಧಿಗೆಯನ್ನು ಹೊಂದಿದೆ. ಹಾಗೂ ಮೇಲ್ಭಾಗವು ಪುನಃ ವಿಶಾಲವಾಗುತ್ತಾ ಹೋಗಿ ಮಾನಸ್ತಂಭದ ಕೊನೆಯಲ್ಲಿ ಶಿಖರವನ್ನು ಹೊಂದಿದ್ದು ಅದರಲ್ಲಿ ಚತುರ್ಮುಖದಲ್ಲಿ ಜಿನಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮೇಲೆ ಕಳಸ ಭಾಗವನ್ನು ಸಹ ಕಾಣಬಹುದು.

ಒಟ್ಟಾರೆಯಾಗಿ ಈ ನೇಮಿನಾಥ ಜಿನಾಲಯವು ೨೦ X ೩೦ ಅಡಿ ಸುತ್ತಳತೆಯಲ್ಲಿ ಉತ್ತರಾಭಿಮುಖವಾಗಿ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದಲ್ಲಿ ತನ್ನದೆ ಆದ ಇತಿಹಾಸ ಪರಂಪರೆಯನ್ನು ಹೇಳುತ್ತಾ ನಿಂತಿದೆ.

೬.೨ ಕಲ್ಮೇಶ್ವರ ದೇವಾಲಯ :

ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮದ ಮಧ್ಯದಲ್ಲಿ ಕಲ್ಮೇಶ್ವರ ದೇವಾಲಯವಿದ್ದು, ಈ ಕಲ್ಮೇಶ್ಮರ ದೇವಾಲಯು ನೆಲಮನೆಯು ದೇವಾಲಯುದಂತೆ ಕಾಣುತ್ತದೆ. ಅಂದರೆ ದೇವಾಲಯವು ನೆಲಮಟ್ಟಕ್ಕಿಂತ ಕೆಳಗಿರುವುದರಿಂದ ಸುಮಾರು ೮ ಮೆಟ್ಟಿಲುಗಳನ್ನು ಇಳಿದು ದೇವಾಲಯಕ್ಕೆ ಹೋಗಬೇಕಾಗುತ್ತದೆ. ಈ ದೇವಾಲಯ ಪೂರ್ವಕ್ಕೆ ಮುಖ ಮಾಡಿದ್ದನ್ನು ಕಾಣುತ್ತೇವೆ ಹಾಗೂ ದೇವಾಲಯದಲ್ಲಿ ಗರ್ಭಗೃಹ ಅದಕ್ಕೆ ಹತ್ತಿಕೊಂಡು ಅಂತರಾಳ (ಸುಖನಾಸಿ) ಮಾತ್ರ ಕಾಣುತ್ತೆವೆ.

ಆದರೆ ದೇವಾಲಯುದ ಲಕ್ಷಣಗಳನ್ನು ನೋಡಿದರೆ ಪ್ರಾಚೀನ ಕಾಲದಲ್ಲಿ ನವರಂಗ ಹಾಗೂ ಮುಖಮಂಟಪಗಳನ್ನೊಳಗೊಂಡು ಬೃಹದಾಕಾರದ ದೇವಾಲಯುವಾಗಿತ್ತು ಎಂದು ಊಹಿಸಬಹುದು.

ಗರ್ಭಗೃಹ :

ಗರ್ಭಗೃಹವು ಸುಖನಾಸಿಗಿಂತ ಕೆಳಮಟ್ಟದಲ್ಲಿದ್ದು ಇದು ಚತುಸ್ರಾಕಾರವಾಗಿದೆ. ಇದೂ ಸಹ ನಾಲ್ಕು ಅರ್ಧಗಂಬಗಳನ್ನು ಹೊಂದಿದ್ದು. ಕಮಲದ ಆಕಾರ ಕೆತ್ತನೆಯಿಂದ ಕೂಡಿದೆ. ಇದು ೭ X ೭ ಅಡಿ ಉದ್ದ ಅಗಲವಾಗಿದೆ ಗರ್ಭಗೃಹದ ಮಧ್ಯದಲ್ಲಿ ಯೋನಿ ಪಟ್ಟಾಕಾರದ ಲಿಂಗವನ್ನು ಹೊಂದಿದ್ದು ಜಲಧಾರೆಯನ್ನು ಹೊಂದಿದೆ.

ಅಂತರಾಳ :

ಗರ್ಭಗೃಹಕ್ಕೆ ಹೊಂದಿಕೊಂಡಿರುವ ಭಾಗವೇ ಸುಖನಾಸಿ (ಅಂತರಾಳ). ಇದು ಚತುಸ್ರಾಕಾರವಾಗಿದೆ. ಇದೂ ಸಹ ನಾಲ್ಕು ಮೂಲೆಯಲ್ಲಿ ನಾಲ್ಕು ಅರ್ಧಗಂಬಗಳನ್ನು ಹೊಂದಿದೆ. ಸುಖನಾಸಿಯ ಭುವನೇಶ್ವರಿಯು ಅಲಂಕಾರರಹಿತವಾಗಿದ್ದು. ವಕ್ರಾಕೃತಿಯ ರಚನೆಯಿಂದ ಕೂಡಿದೆ. ಇದು ೭ X ೭ ಅಡಿ ಉದ್ದ ಅಗಲವಾಗಿದೆ. ಅಂತರಾಳದ ಮಧ್ಯ ಭಾಗದಲ್ಲಿ ನಂದಿಯ ಶಿಲ್ಪವನ್ನು ಕಾಣಬಹುದು.

ಅಂತರಾಳದ ಬಾಗಿಲು ಚೌಕಟ್ಟು ದಾಟಿದಾಗ ಉತ್ತರ ಭಾಗವಾದ ಬಲಕ್ಕೆ ಜೋಡು ಹೆಡೆಯ ನಾಗರ ಹಾವು ಹಾಗೂ ಪಶ್ಚಿಮ ಭಾಗವಾದ ಎಡಕ್ಕೆ ಜೋಡು ಹೆಡೆಯ ನಾಗರ ಹಾವು ಅದರ ಮುಂದೆ ಲಿಂಗವನ್ನು ಕಾಣಬಹುದು.

ಕೋಷ್ಠಗಳು :

ಗರ್ಭಗೃಹದ ಹೊರಗೋಡೆಯಲ್ಲಿ ಪೂರ್ವ ದಿಕ್ಕನ್ನು ಹೊರತು ಪಡಿಸಿ ಮೂರು ಕೋಷ್ಠಗಳಿವೆ. ಆದರೆ ಇಂದು ಆ ಕೋಷ್ಠಗಳಲ್ಲಿ ಯಾವುದೇ ಮೂರ್ತಿಯನ್ನು ಕಾಣುವುದಿಲ್ಲ. ಕೋಷ್ಠಗುಡಿಯು ಅಲಂಕೃತವಾಗಿದ್ದು ಲಲಾಟ ಬಿಂಬದಲ್ಲಿ ಗೊಡೆಯ ಕೆತ್ತನೆಯನ್ನು ಕಾಣುತ್ತೇವೆ.

ಈ ದೇವಾಲಯದ ಅಧಿಷ್ಠಾನವು ಸುಮಾರು ೪ ರಿಂದ ೫ ಅಡಿ ಎತ್ತರವಾಗಿದ್ದು ಕೆಳಭಾಗದಲ್ಲಿ ಉಪಾನ, ಅದರ ಮೇಲ್ಗಡೆ ಕುಮುದ ಹಾಗೂ ಕಪೋತಗಳನ್ನು ಕಾಣಬಹುದು. ಕಲ್ಲೇಶ್ವರ ದೇವಾಲಯದ ಆವರಣದಲ್ಲಿ ನಾಗಶಿಲ್ಪ, ಶಿವ ಪಾರ್ವತಿ ಶಿಲ್ಪ, ಶಿವನ ಶಿಲ್ಪವನ್ನು ಸಹ ಕಾಣಬಹುದು. ಈ ದೇವಾಲಯವು ಬಿಳಿಯ ಬೆಣಚು ಕಲ್ಲಿನಿಂದ ನಿರ್ಮಾಣವಾಗಿದೆ.

ಶ್ರೀ ಅಲ್ಲಮ ಪ್ರಭು ದೇವಾಲಯ :

ತೇರದಾಳ ಪಟ್ಟಣದ ಆರಾಧ್ಯ ದೇವರಾದ ಷಟ್‌ಸ್ಥಳಗಳನ್ನು ಗೆದ್ದಂಥ 'ಓಂಕಾರ' ಮೂರ್ತಿ ಶ್ರೀ ಅಲ್ಲಮ ಪ್ರಭುವಿನ ವಿಶೇಷವಾದ ಪವಾಡಗಳು ಹಾಗೂ ಭಕ್ತ ಸಮೂಹ ಅಪಾರವಾದದ್ದು.

೧೨ ನೇ ಶತಮಾನದಲ್ಲಿ ಲೋಕ ಕಲ್ಯಾಣಾರ್ಥವಾಗಿ ಲೋಕದಲ್ಲಿ ಸಂಚರಿಸುತ್ತಿರುವಾಗ ಚಿಮ್ಮಡ ಎಂಬ ಗ್ರಾಮದಲ್ಲಿ ನೆಲಿಸಿ ಅಲ್ಲಿಯೇ ಹಲವು ದಿನ ಕಳೆದ. ಅದೇ ಗ್ರಾಮದೊಳಗೆ ಒಬ್ಬ ಕುಂಬಾರನ ಮನೆಯಲ್ಲಿ ಪ್ರಭುವಿನ ಕೈಯೊಳಗಿನ ಒಂದು ಬೆತ್ತವಿರುವುದು. ಅದರ ನಿತ್ಯ ಪೂಜೆಯನ್ನು ಆ ಕುಂಬಾರರೇ ಮಾಡುತ್ತಿರುವರು. ಬೆತ್ತವು ಸವೆದಿರುವುದು ನಿರಂಜನ ವಂಶಾರತ್ನಾಕರವೆಂಬ ಗ್ರಂಥದಲ್ಲಿ ಹೇಳಿದ ಬೆತ್ತವು ಇದೇ ಎಂದೂ ತಿಳಿಯುವುದು[೩].

ನಂತರ ಚಿಮ್ಮಡ ಗ್ರಾಮದಿಂದ ಐತಿಹಾಸಿಕ ಪ್ರಾಚೀನ ತೇರದಾಳ ಗ್ರಾಮಕ್ಕೆ ಆಗಮಿಸಿದರು ಮೊದಲು ಪ್ರಾಚೀನ ತೇರದಾಳ ಗ್ರಾಮದ ಕಿಲ್ಲಾ ಭಾಗದಲ್ಲಿ ನೆಲೆಸಿ ತಮ್ಮ ಕಾಯಕದೊಂದಿಗೆ ತಂಗಿದ್ದರು. ಈಗಲೂ ಇರುವ ಗುಡಿಯ ಪಕ್ಕದಲ್ಲಿನ ಗವಿಯಲ್ಲಿ ನೆಲೆಸಿದ್ದರೆಂದು ಪ್ರತೀತ. ಅದೇ ಗವಿಯಲ್ಲಿ ಹಣತೆ ಹಾಗೂ ಇನ್ನೂಳಿದ ಅನುಷ್ಠಾನದ ಕುರುಹುಗಳು ಇರುವುದು ಕಂಡು ಬರುತ್ತವೆ. ಅಲ್ಲದೇ ಆ ಗವಿಯನ್ನು "ಶ್ರೀ ಪ್ರಭುದೇವರ ಅನುಷ್ಠಾನದ ಗವಿ" ಎಂದೂ ಈಗಲೂ ಕರೆಯುತ್ತಾರೆ.

ಒಂದು ದಿವಸ ರಾತ್ರಿ ಚಿಕ್ಕೋಡಿಂಯೊಳಗಿನ ಒಬ್ಬ ಲಿಂಗಾಯತ ಮನುಷ್ಯನ (ಹೆಸರು ತಿಳಿದಿರುವುದಿಲ್ಲ) ಸ್ವಪ್ನದಲ್ಲಿ ಯೋಗ ದಂಡ ಕೌಪೀನು, ಕಾಷಾಯಾಂಬರಗಳು, ಜಟಾ ಕರಕ ಮಂಡಲ ಮುಂತಾದ ಚಿಹ್ನೆಗಳಿಂದ ಕೂಡಿದ ಒಂದು ದಿವ್ಯ ಮೂರ್ತಿಯು ಬಂದಿದ್ದರ ಬಾಸವಾಯಿತು. ಎಚ್ಚೆತ್ತು ನೋಡಲಾಗಿ ಅಲ್ಲಿ ಏನೂ ಇದ್ದಿರಲಿಲ್ಲ ಆ ಮೇಲೆ ಅವನು ತನ್ನ ಸ್ವಪ್ನದ ಸವಿಸ್ತಾರವಾದ ವರ್ತಮಾನವನ್ನು ತನ್ನ ಹೆಂಡತಿಗೆ ಹೇಳಿದನು. ಆಮೇಲೆ ಆ ಉಭಯ ಸ್ತ್ರೀ ಪುರುಷರು ಆ ಸ್ವಪ್ನದೊಳಗಿನ ದಿವ್ಯ ಮೂರ್ತಿಯ ಶೋಧ ಮಾಡುತ್ತಾ ಸುತ್ತಲು ಸಂಚಾರ ಮಾಡುತ್ತಿರುವಷ್ಟರಲ್ಲಿ ಆ ಮೂರ್ತಿಯು ತೇರದಾಳಕ್ಕೆ ಬಂದಿದ್ದರ ಸುದ್ಧಿಯು ಕರ್ಣೋಪಕರರ್ಣದಿಂದ ಅವರಿಗೆ ತಿಳಿದ ಕೂಡಲೇ ಅವರು ತೇರದಾಳದ ಕಡೆಗೆ ಹೊರಟು ಬಂದರು. ತದನಂತರ ಇಲ್ಲಿಗೆ ಬಂದು ನೋಡುವಷ್ಟರಲ್ಲಿ ಸ್ವಪ್ನದ ಮಾತು ನಿಜವಾಗಿ ಮನಗಂಡರು. ತದನಂತರ ಅವರು ಪ್ರಭುದೇವನಿಗೆ ಶಿರಸಾಷ್ಟಾಂಗ ಪ್ರಣಿಪಾತಂಗಳ ಮಾಡಿ ಅವನ ಎದುರಿನಲ್ಲಿ ಕಿಂಕರತ್ವದಿಂದ (ಕರುಣೆಯಿಂದ) ನಿಂತರು. ಪ್ರಭು ದೇವನ ಕೃಪಾದೃಷ್ಟೀಯು ಅವರ ಮೇಲೆ ಬಿದ್ದ ಕೂಡಲೆ ಅವರು ಕೃತಾರ್ತರಾದೆವೆಂದು ಬಗೆದು ಪ್ರಭುದೇವನ ಶುಶ್ರೂಷೆಯನ್ನು ಏಕೋಭಾವದಿಂದ ಮಾಡ ಹತ್ತಿದ್ದರು[೪].

ಹೀಗೆ ಶ್ರೀ ಅಲ್ಲಮ ಪ್ರಭು ದೇವರು ತೇರದಾಳದಲ್ಲಿ ಬಂದು ನೆಲೆಸಿದರು ಎಂಬ ಮಾತು ನಿಜವಾಗಿ ಸತ್ಯವಾಗಿದೆ.

ಕರ್ನಾಟಕ ಪ್ರಕರಣ ೧೩ ಪುಟ ೪೩೭ ರಲ್ಲಿ ಇದೇ ಆದಿಲಿಂಗೇಶ್ವರನ ಹೆಸರನ್ನು ಹೇಳಿದೆ. ಒಟ್ಟಿನ ಮೇಲೆ ಪ್ರಭುದೇವನು ತೇರದಾಳಕ್ಕೆ ಬಂದಿದ್ದನಷ್ಟೇ. ಅಲ್ಲದೇ ಆತನ ವಾಸವು ಅಲ್ಲಿ ಕೆಲವು ದಿವಸಗಳವರೆಗೆ ಇದ್ದದ್ದು ನಿರ್ವಿವಾದವಾಗಿ ಸಿದ್ಧವಾಗುತ್ತದೆ.

ಶ್ರೀ ಅಲ್ಲಮಪ್ರಭು ಸ್ವಾಮಿಯು ತನ್ನ ಕೈಯೊಳಗಿನ ಕಮಂಡಲವಾದ ಮಗಿಯನ್ನು ತೇರದಾಳದಲ್ಲಿ ಇಟ್ಟಿದ್ದರಿಂದ ಮಗಿಯ ಪ್ರಭುವೆಂಬ ರೂಢನಾಮ ಬಂದಿದೆಯೆಂದು ನಿರಂಜನ ವಂಶ ರತ್ನಾಕರದಲ್ಲಿ ಹೇಳಿದ್ದು ನಿಜವಿದೆ[೫].

ಪ್ರಭುದೇವನು ತೇರದಾಳದಲ್ಲಿ ನಡೆದ ಒಂದೆರಡು ಕುರುಹುಗಳನ್ನು ಹೇಳಲು ಇಚ್ಚಿಸಿದ್ದು ಗ್ರಾಮೋಪಾದ್ಯ ಎಂಬ ಉಪನಾಮದ ಒಬ್ಬ ಬಡ ವೃದ್ಧ ಸ್ಮಾರ್ತ ಬ್ರಾಹ್ಮಣ ವಿಧವೆಯು ತನ್ನ ಮಗನನ್ನು ಕರೆದುಕೊಂಡು ದಿನಂಪತಿ ಶ್ರೀಗಳವರ ದರ್ಶನಕ್ಕೆ ಬಂದು ಅವರ ಸೇವೆಯನ್ನು ಮಾಡುತ್ತಿದ್ದಳು. ಈ ರೀತಿ ಕೆಲವು ಕಾಲ ಹೋದ ಮೇಲೆ ಒಂದು ದಿವಸ ಶ್ರೀಗಳವರ ದಿವ್ಯ ಚರಣಗಳು ತನ್ನ ಬಡವಿಯ ಮನೆಯಲ್ಲಿ ಬೀಳಬೇಕು ಮತ್ತು ಅದರಿಂದ ತಾನು ಕೃತಾರ್ಥಳಾಗಬೇಕು ಎಂದು ಅವಳು ಶ್ರೀಗಳವರೆಗೆ ಬಿನ್ನೈಹಿಸಿಕೊಂಡಳು. ಕೃಪಾ ಸಮುದ್ರನಾದ ಪ್ರಭುದೇವನು ಈ ಬಡವಿಯ ಬಿನ್ನಹವನ್ನು ಮಾನ್ಯ ಮಾಡಿ ಕೂಡಲೇ ಅವಳ ಮನೆಗೆ ದಯಮಾಡಿಸಿದರು. ಕಿಂಚತ್ ಕಾಲದವರೆಗೆ ಅವಳ ಮನೆಯಲ್ಲಿ ಮುಹೂರ್ತ ಮಾಡಿ ತಿರುಗಿ ಬಂದನು. ಅವನು ಕುಂತಸ್ಥಳದಲ್ಲಿಯೇ ಅವಳು ಒಂದು ಕಟ್ಟೆಯನ್ನು ಕಟ್ಟಿ ಅದನ್ನು ಶ್ರೀಗಳವರ ಹೆಸರಿನಿಂದ ಪ್ರತಿದಿನ ಪೂಜಿಸಲು ಹತ್ತಿದಳು. ಮುಂದೆ ಅವರ ಸಂತತಿಯ ಬೆಳವಣಿಗೆಯಾಗಿ ಆ ಮನೆತನವೂ ಬಹಳ ಪ್ರಸಿದ್ಧಿಗೆ ಬಂತು ಈಗಲೂ ಆ ಮನೆತನದವರು ತಮ್ಮ ಮನೆಯೊಳಗೆ ಆ ಕಟ್ಟೆಯನ್ನು ನಿತ್ಯ ಪೂಜಿಸುತ್ತಿರುವರು[೬].

ಒಮ್ಮೆ ಒಬ್ಬ ಡಾಂಭಿಕನ ಮನದಲ್ಲಿ ಮೈಲಿಗೆಯಿಂದ ಬಹಿರಂಗದಲ್ಲಿ ಬಹಳ ಮಡಿಯಿಂದ ವನದೊಳಗಿನ ಹೂವುಗಳನ್ನು ತಂದು ದಿನಾಲು ಬಂದು ಶಿವಾಲಯದೊಳಗಿನ ಶಿವಲಿಂಗದ ಪೂಜೆ ಮಾಡಿ ಹೋಗುತ್ತಿದ್ದನು. ಅವನು ಭಕ್ತಿಯ ಪರೀಕ್ಷಾರ್ಥವಾಗಿ ಕೆಲವು ದಿವಸಗಳವರೆಗೆ ಭೂದೇವನು ಯಾರಿಗೂ ಗೊತ್ತಾಗದಂತೆ ಆ ಶಿವಾಲಯದಲ್ಲಿ ಹೋಗಿ ದೇವರ ಪೂಜೆಯನ್ನು ಕೆಡಿಸಿ ಬರುತ್ತಿದ್ದನು. ಇದು ಏನೂ ಚಮತ್ಕಾರವಿರಬಹುದೆಂದು ಮೂಢನಾಗಿ ಆ ಭಕ್ತನು ವಿಚಾರ ಮಾಡತೊಡಗಿದನು. ಆದರೆ ಅದು ಗೊತ್ತಾಗಲಿಲ್ಲ. ಒಂದು ದಿವಸ ಆಕಸ್ಮಾತಾಗಿ ಪ್ರಭುದೇವನು ಶಿವಾಲಯದಲ್ಲಿ ಪ್ರವೇಶ ಮಾಡುವ ಕಾಲಕ್ಕೆ ಆ ಮನುಷ್ಯನು ಅವನ ಹಿಂದಿನಿಂದ ಬಂದನು. ಪ್ರಭುದೇವನು ಶಿವಾಲಯದೊಳಗೆ ಇರುವಾಗಲೇ ಆ ಮನುಷ್ಯನು ಮೆಲ್ಲನೆ ಹೋಗಿ ಅದರ ದ್ವಾರಗಳನ್ನು ಹಾಕಿ ತಾನು ಹೊರಗೆ ನಿಂತುಕೊಂಡನು. ಆಮೇಲೆ ಪ್ರಭುದೇವನು ಗುಂಗೀ ಹುಳದ ರೂಪವನ್ನು ಧರಿಸಿಕೊಂಡು ಆ ಗುಡಿಯ ಗಚ್ಚಿನ ಭದ್ರವಾದ ಗೋಡೆಯೊಳಗೆ ತೂತು ಕೊರೆದು ಹೊರಬಿದ್ದು ಹೋದನು. ಕೆಲವು ಹೊತ್ತಿನ ಮೇಲೆ ಆ ಮನುಷ್ಯನು ಶ್ರೀಗಳವರ ಸಮಾಚಾರವನ್ನು ತೆಗೆದುಕೊಳ್ಳುವ ಉದ್ದೇಶದಿಂದ

ಬಾಗಿಲ ತೆಗೆದು ನೋಡುವಷ್ಟರಲ್ಲಿ ಅಲ್ಲಿ ಪ್ರಭುದೇವರ ಇದ್ದಿರಲಿಲ್ಲ ಶಿವಾಲಯದಲ್ಲಿರುವ ಶಿವಲಿಂಗವು ಕೂಡ ಇದ್ದಿರಲಿಲ್ಲ. ಇದನ್ನು ಕಂಡು ಅವನು ಗಾಬರಿಯಿಂದ ಕ್ಷಮೆಯನ್ನು ಬೇಡುವ ಕುರಿತು ಶ್ರೀಗಳವರ ಕಡೆಗೆ ಹೋದನು. ಆದರೆ ಅವನಿಗೆ ಅವರ ದರ್ಶನವು ಕೂಡಾ ಆಗಲಿಲ್ಲ. ಶ್ರೀಗಳವರ ಲೀಲೆಯ ಆದ ಸ್ಥಳಕ್ಕೆ ಗದ್ದಗಿ ಮಠವೆನ್ನುವರು ಹಾಗೂ ಆ ಮಠದ ಗಚ್ಚಿನ ಗೋಡೆಯೊಳಗೆ ಈಗಲೂ ಒಂದು ತೂತು ಇರುವುದು[೬].

ಶ್ರೀ ಅಲ್ಲಮ ಪ್ರಭು ದೇವರು ಬೃಹನಮಠ :

ಪ್ರಾಚೀನ ಐತಿಹಾಸಿಕ ತೇರದಾಳದ ಶ್ರೀ ಅಲ್ಲಮಪ್ರಭು ಬೃಹನ ಮಠದ ಕುರಿತು ಹಿರಿಯ ಅರ್ಚಕರಾದ ಶ್ರೀ ವೇದಮೂರ್ತಿ ಮಗಯ್ಯ ಸ್ವಾಮೀಜಿ ತೇಳಗಿನಮನಿ ಇವರನ್ನು ಸಂದರ್ಶಿಸಿದಾಗ ಶ್ರೀ ಅಲ್ಲಮಪ್ರಭು ಬೃಹನ ಮಠದ ಕುರಿತು ವಿವರಣೆಯನ್ನು ನೀಡುತ್ತಾರೆ.

ಪೂಜಾ ವಿಧಾನ :

ಪ್ರತಿನಿತ್ಯ ಸರಿಯಾಗಿ ಬೆಳಗ್ಗೆ ಮುಂಜಾನೆ ೪ ಗಂಟೆಗೆ ಶ್ರೀ ಮಠದಲ್ಲಿ ನಗಾರಿ ವಾಧ್ಯ ಮೊಳಗಿದ ಮೇಲೆ ಅರ್ಚಕರು ಮಡಿಯಿಂದ ಗರ್ಭ ಗುಡಿಯ ದ್ವಾರವನ್ನು ತೆಗೆಯುವರು ಶ್ರೀ ಅಲ್ಲಮ ಪ್ರಭುವಿನ ನಾಮಸ್ಮರಣೆಯನ್ನು ಮಾಡುತ್ತಾ[೮]. ದೇವಾಲಯದ ಒಳಗೆ ಪ್ರವೇಶಿಸುವರು. ಪಂಚಾಮೃತದಿಂದ ಅಭಿಷೇಕ ಗದ್ದುಗೆಯ ಪೂಜೆಯನ್ನು ಮುಗಿಸಲು ಬೆಳ್ಳಗೆ ೬ ಗಂಟೆಯಾಗುವುದು. ಗುರುಸೂತ್ರ ರಾಗದಿಂದ ಹಾಡಿ ಗದ್ದುಗೆಯ ಮೇಲೆ ಮಗಿಯ ಪೀಠವನ್ನಿರಿಸಿ ಬೆಳ್ಳಿಗ್ಗೆ ೧೦ ರಿಂದ ೧೧ ರವರೆಗೆ ಪೂಜಾ ಸಮಾರಂಭ ನಡೆಯುವುದು.

ಜಾಗಟೆ, ನಗಾರಿ, ಸಂಭಾಳ ಚಳಂಗ ವಾದ್ಯಗಳಿಂದ ಈ ಪೂಜೆಯಂತೆ ಮಧ್ಯಾಹ್ನ ಕೂಡಾ ಜರಗುವುದು. ನಂತರ ನೈವೆದ್ಯ ಪ್ರಸಾದದೊಂದಿಗೆ ಪೂಜೆ ಮುಕ್ತಾಯಗೊಳ್ಳುತ್ತದೆ. ಸೂರ್ಯಾಸ್ತದ ನಂತರ ದೀಪಾಲಂಕಾರ ಪೂಜೆ, ದೀಪನಗಾರಿ ನಡೆಯುವುದು. ರಾತ್ರಿ ೮ ಗಂಟೆಗೆ ಅಲಂಕಾರ ಪೂಜೆ ತೆಗೆದು ಗದ್ದುಗೆ ಮೇಲಿರುವ ಎಲ್ಲ ಸಾಮಾನುಗಳನ್ನು ತೆಗೆದು ಬೆಳ್ಳಿಗೆ ನಡೆಸಿದಂತೆ ಈಗಲೂ ಉದೂ ನೀಡುವ ಸಮಾರಂಭ ನಡೆಯುತ್ತದೆ.

ರಾತ್ರಿ ೧೧ ಗಂಟೆಗೆ ಅಲಂಕಾರವನ್ನು ತೆಗೆದು ಶ್ರೀ ಪ್ರಭುದೇವರಿಗೆ ಲೋಡು ಉತ್ತಮ ಹಾಸಿಗೆ ಹಾಸಿ, ಗುರುವಿಗೆ ನೀರು ವಗೈರೆ ಇಟ್ಟು ಜೋಗುಳ ಪದವನ್ನು ಹಾಡಿ ಗದ್ದುಗೆ ಮೇಲೆ

ಅರ್ಚಕರು ಶ್ರೀ ಪ್ರಭುದೇವರ ಪಾದಸೇವೆಗೈಯುವರು. ಈ ಊದುಬತ್ತಿ ಕರ್ಪೂರವನ್ನು ಬೆಳಗಿ ನಮಸ್ಕಾರ ಮಾಡಿ ಎಲ್ಲ ಗಂಟೆಗಳನ್ನು ಬಾರಿಸಿ ಗರ್ಭಗುಡಿಯ ಬಾಗಿಲು ಹಾಕಿಕೊಂಡು ಹೊರ ಬರುವರು.

ಶ್ರೀ ಅಲ್ಲಮ ಪ್ರಭು ದೇವರ ಪಲ್ಲಕಿ ಉತ್ಸವ :

ಪ್ರತಿವರ್ಷ ಶ್ರಾವಣ ಪಾಡ್ಯದಿಂದ ಹಿಡಿದು ಭಾದ್ರಪದ ಪಾಡ್ಯದವರೆಗೆ ಶ್ರೀ ಅಲ್ಲಮ ಪ್ರಭು ದೇವರ ಬೃಹನಮಠದಲ್ಲಿ ಎರಡು ಹೊತ್ತು ಪಲ್ಲಕ್ಕಿ ಸೇವೆ ನಡೆಯುವುದು.

ದಸರಾ ಹಬ್ಬ ವಿಜಯದಶಮಿಯ ದಿನದಂದು ಸಂಜೆ ದೀಪಾಲಂಕಾರದಿಂದ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ಅರ್ಚಕರು ಭಕ್ತ ವೃಂದದ ಸಮ್ಮುಖದಲ್ಲಿ ನೆರವೇರಿಸುವರು.

ದೀಪಾವಳಿಯ ಹಬ್ಬದಲ್ಲಿ ಬರವು ಹಬ್ಬದಂದು ದ್ವಾರದಲ್ಲಿರುವ ಬ್ರಹ್ಮನ ಪೂಜೆ, ಚತುರ್ದಶಿಯಿಂದ ಪಂಚಮಿ ಮಿತಿಯವರೆಗೆ ಪಲ್ಲಕ್ಕಿ ಸೇವೆ ನೆರೆವೆರುವುದು. ೭ನೆಯ ದಿನದಂದು ಶ್ರೀ ಪ್ರಭುದೇವರ ಪಲ್ಲಕ್ಕಿ ಉತ್ಸವವು ನಂದಿಕೊಲು ಉತ್ಸವವು ಮುಂದೆ ಶ್ರೀ ಅಲ್ಲಮ ಪ್ರಭು ಜಾಂಜ ಪತಕ ಕಲಾಮೇಳ ಅವರ ವಿಶೇಷ ವಾಧ್ಯಗಳೊಂದಿಗೆ ಶ್ರೀ ಮಠದಿಂದ ಆರಂಭಗೊಳ್ಳುವುದು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಹಾಯ್ದು ದೇಸಾರರ ಬಾಂವಿ ಹತ್ತಿರವಿರುವ ಗದ್ದುಗೆಗೆ ಬರುವುದು. ಅಲ್ಲಿಂದ ದೇಸಾರ ಬಾಂವಿಗೆ ಬರುವುದು. ಅಲ್ಲಿ ಎಲ್ಲ ಅರ್ಚಕರೂ ಸಾಮೂಹಿಕವಾಗಿ ಪಂಚಾಮೃತದಿಂದ ಮಂತ್ರ ಘೋಷಣೆಗಳೊಂದಿಗೆ ಪೂಜೆ ನೆರೆವೆರುವುದು. ನಾಡಗೌಡರ ಹಸ್ತದಿಂದ ಪಂಚಾಮೃತ ಅಭಿಷೇಕ ದರ್ಶನ ನಡೆಯುವುದು. ಇದಾದ ಮೇಲೆ ಶ್ರೀ ಪ್ರಭುದೇವರ ಗದ್ದುಗೆ ಮೇಲೆ ಬಂದ ನಂತರ ಊರಿನ ಸಕಲ ಸದ್ಭಕರು ಬಂದು ದರ್ಶನವನ್ನು ಪಡೆಯುವರು. ರಾತ್ರಿ ೧೨ ಗಂಟೆಗೆ ಮತ್ತೆ ಉತ್ಸವ ಆರಂಭವಾಗಿ ೪ ಗಂಟೆಗೆ ಪುನಃ ಬೃಹನಮಠಕ್ಕೆ ಬಂದು ಮಠದಲ್ಲಿ ಮತ್ತೆ ಪ್ರದಕ್ಷಣೆಯ ಬಳಿಕ ಗರ್ಭದ್ವಾರದಲ್ಲಿ ಪ್ರವೇಶಿಸುತ್ತಾರೆ.

ಸಂಕ್ರಮಣದಲ್ಲಿ ಕೂಡಾ ಇದೇ ರೀತಿಯ ವೈಭವದಿಂದ ಪಲ್ಲಕ್ಕಿ ಉತ್ಸವ ಸಮಾರಂಭ ಜರುಗುವುದು. ಮಹಾಶಿವರಾತ್ರಿಯಲ್ಲಿ ೨ ವಿಶೇಷ ಅಲಂಕಾರ ಪೂಜೆ ನೇರೆವೆರುವುದು. ಸೂರ್ಯ ಉದಯದಿಂದ ಹಿಡಿದು ಮರುದಿನದ ಸೂರ್ಯೋದಯದವರೆಗೆ ನಡೆಯುವ ವಿಶೇಷ ಪೂಜೆ ಕಾಲಕ್ಕೆ ೫ ಸಾವಿರ ಉತ್ರಾಣಿ ಕಡ್ಡಿಗಳಿಂದ ಮಾಡಿದ ತುಪ್ಪದ ದೀಪದಿಂದ ಬೆಳಗುವರು.

ಯುಗಾದಿ ಪಾಡ್ಯೆಯೆಂದು ಶ್ರೀ ಅಲ್ಲಮ ಪ್ರಭುದೇವರ ಜಯಂತಿ ನಿಮಿತ್ಯ ಜೋಗುಳ ಕಾರ್ಯಕ್ರಮ, ನಾಮಕರಣ, ತೊಟ್ಟಿಲು ಕಾರ್ಯಕ್ರಮ, ವೈಶಿಷ್ಟ ಪೂರ್ಣವಾಗಿ ನಡೆಯುವುದು.

ಹರಿವಾಣ ಕಟ್ಟೆ :

ಪ್ರಭುದೇವರ ಗುಡಿಯಿಂದ ಸುಮಾರು ಅಂತರದಲ್ಲಿ ಹರಿವಾಣ ಕಟ್ಟೆಯನ್ನು ಕಾಣುತ್ತೇವೆ. ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಶ್ರೀ ಅಲ್ಲಮ ಪ್ರಭುದೇವರಿಗೆ ಭಕ್ತರು ಹರಿವಾಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವರು ವಿಶೇಷವಾದ ಮಹಾ ಪ್ರಸಾದವನ್ನು ತಯಾರಿಸಿ ಶ್ರದ್ಧಾ ಭಕ್ತಿಯಿಂದ ನಯ ವಿನಯದಿಂದ ಹರಿವಾಣ ಕಟ್ಟೆಗೆ ಮಹಾಪ್ರಸಾದವನ್ನು ಅರ್ಪಿಸಿದರೆ ಬೇಗನೆ ತುಂಬುವುದು. ಇಲ್ಲವಾದರೆ ಅದು ತುಂಬುವುದಿಲ್ಲ ಎಂಬ ನಂಬಿಕೆ ಇದೆ.

ದೇವಾಲಯದ ವಿಶೇಷತೆಗಳು :

ಶ್ರೀ ಅಲ್ಲಮಪ್ರಭು ದೇವರ ೧೬-೧೭ ನೇ ಶತಮಾನದ ಶೈಲಿಯನ್ನು ಇದು ಹೋಲುತ್ತದೆಯಲ್ಲದೇ ದೇವಾಲಯಕ್ಕೆ ಆರು ಗಾಲಿಗಳನ್ನು ಕಾಣುತ್ತೇವೆ. ಷಟ್‌ಸ್ಥಲಗಳಾದ ಭಕ್ತ, ಮಹೇಶ್ವರ, ಪ್ರಸಾದ, ಪ್ರಾಣಲಿಂಗ, ಶರಣ, ಮತ್ತು ಐಕ್ಯ ಹೀಗೆ ಆರು ಷಟ್‌ಸ್ಥಳಗಳನ್ನು ಗೆದ್ದಂತಹ ಓಂಕಾರ ಮೂರ್ತಿ ದೇವಾಲಯಕ್ಕೆ ಆರು ಗಾಲಿಗಳಿದ್ದದ್ದು ಕಂಡು ಬರುತ್ತದೆ.

ಪ್ರಭುದೇವರ ಅಗಸಿ ಬಾಗಿಲು :

ಶ್ರೀ ಅಲ್ಲಮಪ್ರಭುವಿನ ಅಗಸಿ ಬಾಗಿಲು ಪೂರ್ವ ದಿಕ್ಕಿಗೆ ಎದುರಾಗಿರುತ್ತದೆ. ಅಗಸಿ ಬಾಗಿಲಿನ ಮೂಲಕ ಶ್ರೀ ಅಲ್ಲಮಪ್ರಭು ಬೃಹನ ಮಠಕ್ಕೆ ಹೋಗಬೇಕಾಗುತ್ತದೆ. ಅಗಸಿ ಬಾಗಿಲಿನ ಮಧ್ಯ ಶ್ರೀ ಅಲ್ಲಮಪ್ರಭು ದೇವರು ಬಲಕ್ಕೆ ಅಕ್ಕಮಹಾದೇವಿ ಎಡಕ್ಕೆ ಬಸವೇಶ್ವರರ ಮೂರ್ತಿಗಳು ಅತ್ಯಂತ ನಯನ ಮನೋಹರವಾಗಿವೆ.

ಪ್ರಸಾದ ಸಮೀತಿ :

೧ ಅಗಸ್ಟ ೨೦೦೦ದಲ್ಲಿ ಶ್ರೀ ಪ್ರಭುಲಿಂಗೇಶ್ವರ ಪ್ರಸಾದ ಸಮಿತಿ ಅಸ್ಥಿತ್ವಕ್ಕೆ ಬಂದಿತು. ಪ್ರತಿವರ್ಷ ಶ್ರಾವಣ ಮಾಸದ ಕೊನೆಯ ಸೋಮವಾರ ಜಾತ್ರೆ ಜರುಗುವುದು. ಈ ಜಾತ್ರೆಯ ಸಮಯದಲ್ಲಿ ಶ್ರೀ ಪ್ರಭುದೇವರ ದರ್ಶನಕ್ಕೆ ಲಕ್ಷಾಂತರ ಜನರು ಬರುತ್ತಾರೆ. ಅವರಿಗೆಲ್ಲರು ೫ ದಿವಸಗಳ ಪರಿಯಂತ ಲಕ್ಷಾಂತರ ಭಕ್ತ ಸಮೂಹಕ್ಕೆ ಬೇರೆ ಬೇರೆ ಪಕ್ವಾನಗಳನ್ನು ತಯಾರಿಸಿ ಪ್ರಸಾದವನ್ನು ಪ್ರತಿಯೊಬ್ಬರಿಗೂ

ಕೂಡಾ ದೊರಕುವಂತೆ ಮಾಡಿದ್ದಾರೆ. ಎಲ್ಲ ಭಕ್ತ ಸಮೂಹ ಈ ವಿಶೇಷವಾದ ಪ್ರಸಾದವನ್ನು ಸ್ವೀಕರಿಸಿ ಅತಿ ಸಂತೃಪ್ತರಾಗುವುದನ್ನು ನಾವು ಕಾಣುತ್ತೇವೆ.

ಇದಲ್ಲದೇ ತೇರದಾಳದಲ್ಲಿ ಇನ್ನೊಂದು ಚಾವಡಿ ಗಲ್ಲಿಯಲ್ಲಿ ಪ್ರಭುವಿನ ಗುಡಿ ಇದ್ದು ಹೀಗೆ ಐತಿಹಾಸಿಕ ಪ್ರಾಚೀನ ತೇರದಾಳದ ೩ ಕಡೆಗಳಲ್ಲಿ ಪ್ರಭುವಿನ ನೆಲೆಗಳನ್ನು ಕಂಡು ಬರುತ್ತವೆ.

ಹೀಗೆ ಐತಿಹಾಸಿಕ ಪ್ರಾಚೀನ ತೇರದಾಳದಲ್ಲಿ ಶ್ರೀ ಪ್ರಭುದೇವರ ಪ್ರಭಾವ ಅಪಾರವಿದ್ದು ಊರಿನ ಯಾವುದೇ ಮನೆಯಲ್ಲಿ ಪ್ರಥಮವಾಗಿ ಜನಿಸಿದ ಗಂಡು ಮಗುವಿಗೆ ಪ್ರಭು, ಪರಪ್ಪಾ ಎಂದು ನಾಮಕರಣ ಮಾಡುತ್ತಾರೆ. ಹೀಗಾಗಿ ಪ್ರತಿ ಮನೆಯಲೊಬ್ಬ ಪ್ರಭು ಹೀಗೆ ಊರಿನ ತುಂಬೆಲ್ಲ ಪ್ರಭುಗಳನ್ನು ಕಾಣುತ್ತೇವೆ.

ಮೂರ್ತಿ ಶಿಲ್ಪಗಳು :

ಪ್ರಸ್ತುತ ಅಧ್ಯಯನ ಕ್ಷೇತ್ರವಾದ ತೇರದಾಳ ಗ್ರಾಮದಲ್ಲಿ ಮೂರ್ತಿಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯದಿದ್ದರೂ ದೊರೆತಿರುವ ಅಲ್ಪ ಪ್ರಮಾಣದ ಮೂರ್ತಿ ಶಿಲ್ಪಗಳಲ್ಲಿ ಜನರ ಭಕ್ತಿ ಭಾವನೆಗಳು ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು. ಇವು ಗುಡಿಯ ಒಳಗೆ ಹಾಗೂ ಹೊರಗೆ ಪ್ರತಿಷ್ಠಾಪಗೊಂಡಿವೆ. ಇನ್ನೂ ಕೆಲವು ಮೂರ್ತಿಶಿಲ್ಪಗಳನ್ನು ಕೋಷ್ಠಿಗಳಲ್ಲಿ ಗುಡಿಯ ಗೋಡೆಗಳಲ್ಲಿ ಅಲಂಕಾರಕ್ಕಾಗಿ ಕೆತ್ತಲಾಗಿರುವುದನ್ನು ನೋಡಬಹುದು.

ನೇಮಿನಾಥ ಜಿನಾಲಯದಲ್ಲಿ ಒಟ್ಟು ಮೂರು ಜೈನ ತೀರ್ಥಂಕರ ಮೂರ್ತಿ ಶಿಲ್ಪಗಳಿದ್ದು ಕಲ್ಮೇಶ್ವರ ದೇವಾಲಯದಲ್ಲಿ ಶಿವಲಿಂಗ, ನಂದಿ, ಶಿವಪಾರ್ವತಿಯರ ಶಿಲ್ಪ ಹಾಗೂ ಜೋಡು ನಾಗರ ಶಿಲ್ಪಗಳನ್ನು ಕಾಣಬರುತ್ತವೆ.

ಶಿವನನ್ನು ಲಿಂಗರೂಪದಲ್ಲಿ ಪೂಜಿಸುತ್ತಿರುವರು ಸರ್ವೇಸಾಮಾನ್ಯ ಇಂತಹ ಶಿವಲಿಂಗಗಳು ಹಲವಾರು ಬಗೆಯಲ್ಲಿ ಕಂಡು ಬರುತ್ತಿದ್ದು ಪಾಣಿಪಟ್ಟವಿಲ್ಲದ ಲಿಂಗ, ಚೌಕ ಪಾಣಿಪಟ್ಟವಿರುವ ಲಿಂಗ, ಯೋನಿ ಪಾಣಿಪಟ್ಟ ಲಿಂಗಗಳು ಹೀಗೆ ಹಲವಾರು ರೂಪದಲ್ಲಿ ಲಿಂಗಗಳು ಕಂಡುಬರುತ್ತಿದ್ದರೂ ತೇರದಾಳ ಕಲ್ಮೇಶ್ವರ ದೇವಾಲಯದಲ್ಲಿ ಯೋನಿಪಾಣಿಪಟ್ಟ ಲಿಂಗವನ್ನು ಕಾಣಬಹುದು. ಇದೇ ದೇವಾಲಯದ ವರಾಂಡದ ಗೋಡೆಯಲ್ಲಿ ಉಮಾಮಹೇಶ್ವರ ಮೂರ್ತಿಶಿಲ್ಪವನ್ನು ಕಾಣಬಹುದು. ಇದರಲ್ಲಿ ಶಿವ ಮತ್ತು ಪಾವರ್ತಿಯನ್ನು ಜೊತೆಯಾಗಿ ಕುಳಿತಿರುವುದನ್ನು ನೋಡಬಹುದು. ಅದೇ ರೀತಿಯಾಗಿ ಇದೇ ದೇವಾಲಯದಲ್ಲಿ ನಂದಿಯ ಶಿಲ್ಪವನ್ನು ನೋಡಬಹುದು. ಇಲ್ಲಿ ನಂದಿಯನ್ನು ಶಿವನ ವಾಹನದ ರೂಪದಲ್ಲಿ ಗರ್ಭಗುಡಿಯ ಮುಂದೆ ಇಡಲಾಗಿದೆ. ಇದೇ ವರಾಂಡದಲ್ಲಿ ಒಂದು ಜೋಡು ನಾಗ ಶಿಲ್ಪದ ಪ್ರತಿಮೆಯನ್ನು ಕಾಣಬಹುದು.

: ಅಡಿ ಟಿಪ್ಪಣಿಗಳು :

೧) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೯೧ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೨) ಡಾ॥ ದೇವರಕೊಂಡಾ ರೆಡ್ಡಿ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟ ಜಿಲ್ಲೆ ಪುಟ ಸಂಖ್ಯೆ : ೯೧ ಪ್ರಸಾರಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೩) ಬುದ್ದಯ ಸ್ವಾಮಿ ಪುರಾಣಿಕ : ಶ್ರೀ ಮದನಾದಿ ಶ್ರೀ ಅಲ್ಲಮಪ್ರಭು ಪುಟ ಸಂಖ್ಯೆ : ೩೬

೪) ಬುದ್ದಯ ಸ್ವಾಮಿ ಪುರಾಣಿಕ : ಶ್ರೀ ಮದನಾದಿ ಶ್ರೀ ಅಲ್ಲಮಪ್ರಭು ಪುಟ ಸಂಖ್ಯೆ : ೪೧

೫) ಬುದ್ದಯ ಸ್ವಾಮಿ ಪುರಾಣಿಕ : ಶ್ರೀ ಮದನಾದಿ ಶ್ರೀ ಅಲ್ಲಮಪ್ರಭು ಪುಟ ಸಂಖ್ಯೆ : ೫೫

೬) ಬುದ್ದಯ ಸ್ವಾಮಿ ಪುರಾಣಿಕ : ಶ್ರೀ ಮದನಾದಿ ಶ್ರೀ ಅಲ್ಲಮಪ್ರಭು ಪುಟ ಸಂಖ್ಯೆ : ೫೫–೫೬

೭) ಬುದ್ದಯ ಸ್ವಾಮಿ ಪುರಾಣಿಕ : ಶ್ರೀ ಮದನಾದಿ ಶ್ರೀ ಅಲ್ಲಮಪ್ರಭು ಪುಟ ಸಂಖ್ಯೆ : ೫೬

೮) ಮ ಕೃ ಮೇಗಾಡಿ : ಶ್ರೀ ಮದನಾದಿ ಶ್ರೀ ಅಲ್ಲಮಪ್ರಭು ಪುಟ ಸಂಖ್ಯೆ : ೧೪೯–೧೫೦

೯) ಮ ಕೃ ಮೇಗಾಡಿ : ಶ್ರೀ ಮದನಾದಿ ಶ್ರೀ ಅಲ್ಲಮಪ್ರಭು ಪುಟ ಸಂಖ್ಯೆ : ೧೫೧

೧೦) ಶ್ರೀ ಸಿದ್ದು ಬಿಳಗಿ ೧೯೯೫ : ತ್ರೀದಳ ಪತ್ರಿಕೆ ಸಂಪಾದಕರು ಪುಟ ಸಂಖ್ಯೆ : ೦೪

* * *

ಅಧ್ಯಾಯ – ೭

ಸಮಾರೋಪ

ಅಧ್ಯಾಯ – ೭
ಸಮಾರೋಪ

ಕರ್ನಾಟಕದ ಸಂಸ್ಕೃತಿಯ ಒಂದು ಸನಾತನ ವೃಕ್ಷವಿದ್ದಂತೆ. ಇಲ್ಲಿ ಅನೇಕ ರಾಜ ಮನೆತನಗಳು ಆಡಳಿತವನ್ನು ನಡೆಸಿವೆ. ಇಲ್ಲಿ ಅನೇಕ ಹಲವಾರು ಧರ್ಮಗಳು ನೆಲೆಯನ್ನು ಪಡೆದಿವೆ. ಹೀಗೆ ಈ ನಾಡು ಕಾಲದಿಂದ ಕಾಲಕ್ಕೆ ಐತಿಹಾಸಿಕ ಹಿನ್ನಲೆಯಲ್ಲಿ ತನ್ನನ್ನು ಗುರುತಿಸಿಕೊಳ್ಳತ್ತ ವಿಶೇಷವಾಗಿ ಬೆಳೆದು ಬಂದಿದೆ. ಸಂಸ್ಕೃತಿಯ ವ್ಯಕ್ತಗೊಳ್ಳುವ ಕಲಾ ಮಾಧ್ಯಮಗಳನ್ನು ಅದಕ್ಕೆ ಹಿನ್ನೆಲೆಯಾದ ಜೀವನ ದೃಷ್ಟಿಯನ್ನು ಆ ಜೀವನ ದೃಷ್ಟಿಗೆ ಪೋಷಕವಾದ ಭಾರತೀಯ ಸಂಸ್ಕೃತಿಯನ್ನು ಕನ್ನಡ ನಾಡು ಸಂಸ್ಕೃತಿ ತನ್ನಲ್ಲಿ ಅಳವಡಿಸಿಕೊಂಡಂತೆ ಐತಿಹಾಸಿಕ ಪ್ರಾಚೀನ ತೇರದಾಳ ನಾಡಿನ ಸಾಂಸ್ಕೃತಿಕ ಬದುಕು ಕರ್ನಾಟಕದ ಸಂಸ್ಕೃತಿಯ ಎಲ್ಲ ಸತ್ವವನ್ನು ಸನಾತನತೆಯನ್ನು ತನ್ನಲ್ಲಿ ವಿಶೇಷವಾಗಿ ಮೈಗೂಡಿಸಿಕೊಂಡಿದೆ ಎಂಬುದು ಈ ನಾಡಿನ ಸಾಂಸ್ಕೃತಿಕ ಗತವೈಭವದಿಂದ ತಿಳಿದು ಬರುತ್ತದೆ.

ಮನುಷ್ಯನ ರಚನೆಯಲ್ಲಿ ನರನಾಡಿಗಳು ಬಹಳ ಮುಖ್ಯವಾದದು. ಒಂದು ನಾಡಿನ ಇತಿಹಾಸದ ರಚನೆಯಲ್ಲಿ ಗ್ರಾಮಗಳ ಪ್ರಾತ ಬಹುದೊಡ್ಡದು. ಗ್ರಾಮಗಳು ನಾಡಿನ ನರನಾಡಿಗಳು ಎಂಬುದನ್ನು ಹಿನ್ನಲೆಯಾಗಿಟ್ಟುಕೊಂಡು ಐತಿಹಾಸಿಕ ಪ್ರಾಚೀನ ನಗರ ತೇರದಾಳ ಕಂಪಣದ ಸಂಸ್ಕೃತಿಯ ವಿವಿಧ ಮುಖಗಳನ್ನು ಇದುವರೆಗೆ ನೋಡಿದೆವು. ಈ ಪ್ರದೇಶದಲ್ಲಿ ದೊರೆಯುವ ಹಲವಾರು ಶಾಸನಗಳು ಐತಿಹಾಸಿಕ ತೇರದಾಳದ ಸಾಂಸ್ಕೃತಿಕ ಅಧ್ಯಯನದಲ್ಲಿ ಹಾಗೂ ಈ ನಾಡಿನ ಚರಿತ್ರೆಯ ವಿವಿಧ ಮುಖಗಳನ್ನು ಅರ್ಥಯಿಸಿಕೊಳ್ಳುವಲ್ಲಿ ತುಂಬಾ ಸಹಾಯಕಾರಿಯಾಗಿವೆ. ಆದರೂ ಈ ಪ್ರಯತ್ನ ಇನ್ನೂ ಹೆಚ್ಚಿನ ಆಧಾರಗಳನ್ನು ಬಯಸುತ್ತದೆ ಎಂಬುದು ನಿರ್ವಿವಾದ.

ಐತಿಹಾಸಿಕ ಪ್ರಾಚೀನ ತೇರದಾಳದ ಮೇಲಿನ ಲೇಖನಗಳನ್ನು ಆಯ್ದುಕೊಂಡು ಅವುಗಳನ್ನು ಆಧರಿಸಿ ಕ್ಷೇತ್ರಕಾರ್ಯವನ್ನು ಕೈಗೊಂಡು ನಮ್ಮ ಅಧ್ಯಯನಕ್ಕೆ ಸಮಗ್ರತೆಯನ್ನು ತಂದುಕೊಡಲು ಸಾಕಷ್ಟು ಪ್ರಯತ್ನಿಸಲಾಗಿದೆ.

ಐತಿಹಾಸಿಕ ಪ್ರಾಚೀನ ತೇರದಾಳವು ತನ್ನದೇ ಆದ ಐತಿಹಾಸಿಕ ಹಿನ್ನಲೆಯನ್ನು ಒಳಗೊಂಡಿದ್ದು ಪ್ರಾಚೀನ ತೇರದಾಳ ಗುಡ್ಡದಲ್ಲಿ ಹೊಳಲಾದ ಪ್ರತಿ ಶವದ ಸುತ್ತಲೂ ಕಲ್ಲುಗಳನ್ನು ನೆಟ್ಟು ವ್ಯವಸ್ಥಿತವಾಗಿ ರಚಿಸಿರುವ ಗೋರಿಗಳ ಸಾಲುಗಳಲ್ಲಿ ಬೃಹತ ಶಿಲಾಗೋರಿಗಳು ತನ್ನದೇ ಆದ ಐತಿಹಾಸಿಕ

[illegible]

[illegible]

[illegible]

[illegible]

[illegible]

[illegible]

[illegible]

ಪರಂಪರೆಯನ್ನು ಕುರಿತು ತಿಳಿಸುತ್ತದೆ. ಹೀಗಾಗಿ ಈ ಪ್ರಾಚೀನ ತೇರದಾಳವು ತನ್ನದೇ ಆದ ವಿಶೇಷ ಐತಿಹಾಸಿಕ ಹಿನ್ನಲೆ ಇರುವುದರಿಂದ ಅದರ ವಿವರವಾದ ಅಭ್ಯಾಸವನ್ನು ಈ ನಿಬಂಧದಲ್ಲಿ ನೀಡಲಾಗಿದೆ.

ಐತಿಹಾಸಿಕ ಪ್ರಾಚೀನ ತೇರದಾಳ ನಗರ ಕೂಂಡಿನಾಡು ೩೦೦೦ ನಾಡಿನಲ್ಲಿ ಕ್ರಿ. ಶ. ೧೧೨೩ ಶಾಸನದ ಪ್ರಕಾರ ತೇರದಾಳವನ್ನು ಕಂಪಣವೆಂದು ಕರೆಯಲ್ಪಡುತ್ತಿತ್ತು. ೧೨ ಗ್ರಾಮಗಳನ್ನು ಹೊಂದಿದ ಪ್ರಮುಖವಾದ ವ್ಯಾಪಾರಿ ಕೇಂದ್ರ ಸ್ಥಳವಾಗಿತ್ತು. ಮುಂದೆ ತೇರದಾಳ ದಕ್ಷಿಣ ಮಹಾರಾಷ್ಟ್ರದಲ್ಲಿದ್ದ ಪಟವರ್ಧನ ಸಂಸ್ಥಾನಗಳ ಪೈಕಿ ಸಾಂಗ್ಲಿ ಸಂಸ್ಥಾನವು ಎಲ್ಲಕ್ಕಿಂತ ದೊಡ್ಡದಾಗಿತ್ತು. ಈ ಸಂಸ್ಥಾನದ ಆಧೀನದಲ್ಲಿ ತೇರದಾಳ ೧೭ ಹಳ್ಳಿಗಳನ್ನು ಹೊಂದಿದ್ದ ಪ್ರಮುಖ ತಾಲೂಕಾ ಕೇಂದ್ರವಾಗಿತ್ತು. ಕರ್ನಾಟಕ ಏಕೀಕರಣ ನಂತರ ೧೯೭೩ ರಲ್ಲಿ ಮೈಸೂರು ಮುನಸಿಪಾಲ್ಟಿ ಕಾಯ್ದೆಯನ್ವಯ ಪ್ರಥಮದಲ್ಲಿ ಪಂಚಾಯತ ಮಾರ್ಪಾಟಾಗಿ ನಂತರ ಪುರಸಭೆಯಾಗಿ ಪರಿವರ್ತನೆಯನ್ನು ಹೊಂದಿದೆ.

ಸಮಾಜದ ಮಹತ್ವದ ಅಂಶವಾದ ಆರ್ಥಿಕ ವ್ಯವಸ್ಥೆಯ ಕುರಿತು ಈ ಪ್ರದೇಶದಲ್ಲಿ ಹಲವಾರು ಶಾಸನಗಳು ದೊರತಿದ್ದು ಅವು ಇಲ್ಲಿರುವ ಆರ್ಥಿಕ ವ್ಯವಸ್ಥೆಯನ್ನು ಕುರಿತು ತಿಳಿಸುತ್ತವೆ. ಸಮಾಜದ ಪ್ರಮುಖವಾದ ವೃತ್ತಿ ಕೃಷಿ–ಕೃಷಿಯನ್ನು ಆದರಿಸಿ ಹಲವಾರು ವೃತ್ತಿಗಳು. ಉದಾಹರಣೆಗೆ ವ್ಯಾಪಾರ, ಬೆಳೆಗಳು, ವರ್ತಕರು, ಹಾಗೂ ಶ್ರಮಿಕ ವರ್ಗಗಳನ್ನೊಳಗೊಂಡಂತೆ (ಕುಂಬಾರ, ಕಂಬಾರ, ಬಡಿಗರು) ಮುಂತಾದವುಗಳನ್ನೊಳಗೊಂಡಂತೆ ಪ್ರತಿಯೊಂದು ವರ್ಗದವರು ತಮ್ಮ ತಮ್ಮ ವೃತ್ತಿ ಸಂಘಗಳನ್ನು ರಚಿಸಿಕೊಂಡಿರುವುದು ಇಂದಿನ ಜನತೆಗೆ ಇತಿಹಾಸವನ್ನು ತಿಳಿಸುವ ಪಾಠವೆಂದೇ ಹೇಳಬಹುದು. ಅಂದಿನ ಸಮಾಜದಲ್ಲಿ ಕಾಣದೇ ಇರುವ ಏಕತೆಯನ್ನು ಕಾಣುವದು ಐತಿಹಾಸಿಕ ಹಿನ್ನಲೆಯಿಂದ ತಿಳಿದಿರುವ ಅಂಶವೇ ಸರಿಯಾಗಿದೆ.

ಒಂದು ನಾಡಿನ ಇತಿಹಾಸದ ಬೆಳವಣಿಗೆಯಲ್ಲಿ ಧರ್ಮದ ಪಾಲು ಅಗ್ರಗಣ್ಯವಾದದ್ದು. ಧರ್ಮರಹಿತ ಸಮಾಜವನ್ನು ಇತಿಹಾಸದಲ್ಲಿ ಇದೂವರೆಗೂ ನೋಡಿರುವದಿಲ್ಲ. ಪ್ರಸ್ತುತ ಅಧ್ಯಯನದ ಕ್ಷೇತ್ರವಾದ ಐತಿಹಾಸಿಕ ಪ್ರಾಚೀನ ತೇರದಾಳ ಪ್ರದೇಶದಲ್ಲಿ ಪ್ರಮುಖವಾದ ಧರ್ಮಗಳಾದ ಶೈವ, ವೈಷ್ಣವ, ಬೌದ್ಧ, ಜೈನ ಈ ಪ್ರಮುಖವಾದ ಧರ್ಮಗಳು ಸಮಾನವಾದ ಸ್ಥಾನಮಾನಗಳನ್ನು, ಗೌರವವನ್ನು ಅಲಂಕರಿಸಿ ಪ್ರಚಲಿತದಲ್ಲಿದ್ದವು ಎಂದು ತಿಳಿದುಬರುತ್ತದೆ. ನಮ್ಮ ಬದುಕನ್ನು ರೂಪಿಸಿಕೊಳ್ಳುವಲ್ಲಿ ಧರ್ಮವು ಅವಶ್ಯಕ. ಅಲ್ಲದೇ ಧರ್ಮಗಳ ಉಗಮ ಮತ್ತು ವಿಕಾಸವನ್ನು ಕುರಿತು ಶಾಸನೋಲ್ಲೇಖಿತ ಆಧಾರದ ಮೇಲೆ ಎಲ್ಲ ಧರ್ಮಗಳು ಗುರು ಪರಂಪರೆಯ ಆಧಾರದ ಮೇಲೆ ಬೆಳದು ಬಂದಿದ್ದನ್ನು ಇಲ್ಲಿ ವಿವರಿಸಲಾಗಿದೆ.

ಕರಕುಶಲ ಕಲೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ವಾಸ್ತು ಶಿಲ್ಪಗಳ ತವರೂರು. ಕರ್ನಾಟಕದ ವಾಸ್ತುಶಿಲ್ಪ ಜಗತ್ತಿಗೆ ತನ್ನದೇ ಆದ ಅಪೂರ್ವವಾದ ಕಾಣಿಕೆಯನ್ನು ನೀಡಿದೆ. ಇಂತಹ ಹಲವಾರು

ವೈಶಿಷ್ಟ್ಯಗಳನ್ನು ಐತಿಹಾಸಿಕ ಪ್ರಾಚೀನ ತೇರದಾಳವು ಮೈಗೂಡಿಸಿಕೊಂಡು ಕರ್ನಾಟಕ ವಾಸ್ತುಶಿಲ್ಪಕ್ಕೆ ತನ್ನದೇ ಆದ ವಿಶಿಷ್ಟವಾದ ಕೊಡುಗೆಗಳನ್ನು ನೀಡಿರುವದನ್ನು ಕಾಣುತ್ತೇವೆ. ಈ ಪ್ರದೇಶದಲ್ಲಿ ಕಂಡು ಬರುವ ಐತಿಹಾಸಿಕ ಪ್ರಾಚೀನ ಜೈನ ಜಿನಾಲಯ, ಕಲ್ಮೇಶ್ವರ ದೇವಾಲಯ, ಶ್ರೀ ಅಲ್ಲಮ ಪ್ರಭು ದೇವರ ಬ್ರಹ್ಮನಮಠ ಈ ನಾಡಿನ ಕಲಾ ನೈಪುಣ್ಯತೆಯನ್ನು ಸಾರಿ ಹೇಳುವ ಮೂಕ ಜೀವಂತವಾದ ಸಾಕ್ಷಿಗಳು ಆಗಿವೆ. ಎಲ್ಲ ಸಂಪತ್ತುಗಳಲ್ಲಿ ಮಿಗಿಲಾಗಿ ಪುಣ್ಯ ಸಂಪತ್ತನ್ನು ಪಡೆಯುವದಕ್ಕಾಗಿ ಈ ನಾಡಿನ ಜನರು ದೇವಾಲಯದ ಪ್ರತಿಷ್ಠಾಪನಾ ಕಾರ್ಯದಲ್ಲಿ ಉದಾರವಾದ ದಾನದತ್ತಿಗಳನ್ನು ನೀಡಿರುವದನ್ನು ಕಾಣುತ್ತೇವೆ. ಈ ಐತಿಹಾಸಿಕ ಪ್ರಾಚೀನ ಕಲ್ಮೇಶ್ವರ ದೇವಾಲಯ ಸ್ವಲ್ಪ ಹಾಳಾಗಿ ಉಳಿದುಕೊಂಡು ಬಂದಿದೆ. ಆದರೂ ಕೂಡಾ ಇದು ಗತವೈಭವದ ಪ್ರತೀಕವಾಗಿ ಇದು ಸಂಪೂರ್ಣವಾಗಿ ಕಳೆಯನ್ನು ತುಂಬಿಕೊಂಡಿದೆ. ಪ್ರಾಚ್ಯ ವಸ್ತು ಸಂರಕ್ಷಣಾಲಯದವರು ಮತ್ತು ಈ ಪ್ರದೇಶದ ಸ್ಥಳಿಯ ಜನರು ಇವುಗಳ ರಕ್ಷಣೆಗೆ ಇನ್ನು ಹೆಚ್ಚಿನ ಆದ್ಯತೆಯನ್ನು ನೀಡುವದು ತುಂಬಾ ಅವಶ್ಯಕವಾಗಿದೆ. ಅದರ ಜೊತೆಗೆ ಶ್ರೀ ಅಲ್ಲಮ ಪ್ರಭು ದೇವರನ್ನು ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ನಿತ್ಯದಲ್ಲಿ ಶ್ರದ್ಧಾ ಭಕ್ತಿ ಪೂರ್ವಕವಾಗಿ ಪೂಜಿಸಿ ಮನದಲ್ಲಿ ನೆನೆಯುವವರು ಅಂತವರ ಇಷ್ಟಾರ್ಥಗಳನ್ನು ಶ್ರೀ ಅಲ್ಲಮ ಪ್ರಭು ದೇವರು ಈಡೇರಿಸುವರು.

ಹೀಗೆ ಕರ್ನಾಟಕದ ಅವಿಭಾಜ್ಯ ಅಂಗವಾಗಿ ಕೂಂಡಿನಾಡು ೩೦೦೦ ನಾಡಿನ ಆಡಳಿತ ಪ್ರಮುಖವಾದ ಉಪವಿಭಾಗವಾಗಿ (ಕಂಪಣ) ಕರ್ನಾಟಕ ಇತಿಹಾಸದ ಎಲ್ಲ ಮಗ್ಗಲುಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಸಮನ್ವಯ ಭೂಮಿಯಾಗಿ ಮೆರೆದ ತೇರದಾಳ ೧೨ ಕಂಪಣವು ರಾಜಕೀಯವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಹೀಗೆ ಎಲ್ಲಾ ಕ್ಷೇತ್ರಗಳಿಂದಲೂ ಬಹಳ ಪ್ರಾಮುಖ್ಯತೆಯನ್ನು ಪಡೆದು ನಾಡಿನವರ ಇತಿಹಾಸವನ್ನು ಒಳಗೊಂಡಿದೆ. ಇನ್ನು ಹೆಚ್ಚಿನ ಸಂಶೋಧನೆ ನಡೆದರೆ ಹೆಚ್ಚಿನ ವಿಷಯಗಳು ತಿಳಿಯುವ ಸಾಧ್ಯತೆಗಳು ಹೆಚ್ಚು. ಇಂತಹ ಐತಿಹಾಸಿಕವಾಗಿ ಸಂಪದ್ಭರಿತವಾದ ನಾಡಿನ ಇತಿಹಾಸವನ್ನು ಈ ಚಿಕ್ಕ ಪ್ರಬಂಧದಲ್ಲಿ ಸವಿಸ್ತಾರವಾಗಿ ವಿವರಿಸಲು ಸಾಧ್ಯವಿಲ್ಲ. ಇದೊಂದು ದೀರ್ಘವಾದ ಸಂಶೋಧನಾ ವಿಷಯವಾಗಿರುವದರಿಂದ ಈ ನಿಟ್ಟಿನಲ್ಲಿ ಇನ್ನು ಹೆಚ್ಚಿನ ಕೆಲಸವನ್ನು ಮಾಡಬೇಕು.

ತೇರದಾಳ ಒಂದು ಚಾರಿತ್ರಿಕ ಅಧ್ಯಯನದ–ಅಧ್ಯಯನಕ್ಕೆ ಬೇಕಾದ ವಿಷಯಗಳನ್ನು ಕ್ಷೇತ್ರ ಕಾರ್ಯವನ್ನು ಕೈಗೊಂಡು ವಿಷಯಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಛಾಯ ಚಿತ್ರಗಳಂತಹ ಸಾಧನಗಳನ್ನು ಕ್ರಮಬದ್ಧವಾಗಿ ಜೋಡಿಸಿ ವಿವರಿಸಲಾಗಿದೆ.

ಪರಮಾರ್ಶನ ಗ್ರಂಥಗಳು

ಃ ಪರಾಮರ್ಶನ ಗ್ರಂಥಗಳು ಃ

೦೧)	ಡಾ॥ ದೇವರಕೊಂಡಾ ರೆಡ್ಡಿ	:	೨೦೦೬ ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ : ೯ ಬಾಗಲಕೋಟೆ ಜಿಲ್ಲೆ. ಪ್ರಸಾರಂಗ-ಕನ್ನಡ ವಿಶ್ವವಿದ್ಯಾಲಯ ಹಂಪಿ.
೦೨)	ಚಿದಾನಂದ ಮೂರ್ತಿ ಎಂ	:	೧೯೭೯ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪ್ರಸಾರಂಗ-ಮೈಸೂರು ವಿಶ್ವವಿದ್ಯಾಲಯ, ಮೈಸೂರು.
೦೩)	ಹಾ. ಮಾ. ನಾಯಕ	:	೧೯೭೯ : ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ ಪ್ರಸಾರಂಗ-ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾಲಯ. ಮೈಸೂರು.
೦೪)	ನಾಗಯ್ಯ ಜೆ. ಎಂ.	:	೧೯೯೨ ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ ಬೆಳಗಾಂವ.
೦೫)	ರಾಜಶೇಖರ ಎಸ್. ಮತ್ತು ಸುಜಾತ ಪಬ್ಲೀಕೆಶನ್ಸ ಧಾರವಾಡ	:	೧೯೮೮ : ಕರ್ನಾಟಕದ ವಾಸ್ತುಶಿಲ್ಪ
೦೬)	ಕಷ್ಣರಾವ ಎಂ. ವಿ. ಹಾಗೂ ಕೇಶವ ಭಟ್ಟ ಎಂ.	:	೧೯೭೦ ಕರ್ನಾಟಕದ ಇತಿಹಾಸ ದರ್ಶನ ಕರ್ನಾಟಕ ಸಹಕಾರ ಪ್ರಕಾಶನ, ಬೆಂಗಳೂರು.
೦೭)	ಹಿರೇಮಠ ಬಿ. ಆರ್.	:	೧೯೮೬ : ಶಾಸನಗಳಲ್ಲಿ ಕರ್ನಾಟಕದ ವರ್ತಕರು ಪ್ರಸಾರಂಗ-ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೦೮)	ಕಲಬುರ್ಗಿ ಎಂ. ಎಂ.	:	೧೯೭೬ : ಬಿಜಾಪೂರ ಜಿಲ್ಲಾ ಶಾಸನಗಳ ಸೂಚಿ ಸಂಪುಟ. ಕರ್ನಾಟಕ ವಿಶ್ವ ವಿದ್ಯಾಲಯ ಪ್ರಕಟಣೆ
೦೯)	ಪಂಚಮುಖಿ ಆರ್. ಎಸ್.	:	೧೯೭೬ ಕರ್ನಾಟಕ ಇತಿಹಾಸ-ಕರ್ನಾಟಕ ಇತಿಹಾಸ ಸಂಶೋಧನೆ ಮಂಡನೆ ಧಾರವಾಡ.

೧೦)	ತಿಪ್ಪೇರುದ್ರ ಸ್ವಾಮಿ. ಎಚ್.	:	೧೯೬೮ : ಕರ್ನಾಟಕ ಸಂಸ್ಕೃತಿಯ ಸಮೀಕ್ಷೆ ಮೈಸೂರು.
೧೧)	ನಂದೀಮಠ ಎಸ್. ಸಿ.	:	೧೯೭೫ : ಕರ್ನಾಟಕ ಧರ್ಮಗಳು ಬೆಂಗಳೂರು.
೧೨)	ಕೊಪ್ಪಾ ಎಸ್. ಕೆ.	:	೧೯೯೦ : ತರ್ದವಾಡಿ ನಾಡು : ಒಂದು ಅಧ್ಯಯನ ಪ್ರತಿಭಾ ಪ್ರಕಾಶನ, ಇಂಡಿ.
೧೩)	ಬೆಳಗಲಿ ದು. ನಿಂ.	:	ಜಮಖಂಡಿ ತಾಲೂಕಾ ದರ್ಶನ–ಐ.ಬಿ.ಎಚ್ ಪ್ರಕಾಶನ ಬೆಂಗಳೂರು.
೧೪)	ಅಣ್ಣಿಗೇರಿ ಎ. ಎಂ.	:	೧೯೮೦ : ಬಿಜಾಪೂರ ಶಿಲ್ಪಕಲಾ ವೈಭವ–ಭವಾನಿ ಪ್ರಕಾಶನ ಧಾರವಾಡ.
೧೫)	ಶಿರೂರ ಬಿ. ಬಿ.	:	೧೯೯೨ : ಸಂಶೋಧನಾ ಸ್ವರೂಪ–ಅನ್ನಪೂರ್ಣಾ ಪ್ರಕಾಶನ ಹುಬ್ಬಳ್ಳಿ.
೧೬)	ರಮೇಶ ಕೋ. ವ್ಯಾ.	:	೧೯೭೧:ಕರ್ನಾಟಕ ಶಾಸನ ಸಮೀಕ್ಷೆ.
೧೭)	ಕಲಬುರ್ಗಿ ಎಂ. ಎಂ.	:	ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ.
೧೮)	ಶಿವರುದ್ರಪ್ಪಾ ಜಿ. ಎಸ್.	:	ಸಮಗ್ರ ಕನ್ನಡ ಸಾಹಿತ್ಯ ಚರತ್ರೆ ಸಂಪುಟ – ೪, ಭಾಗ–೧.
೧೯)	ಫಾಲಾಕ್ಷ	:	೧೯೭೬ : ಸಮಗ್ರ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ.
೨೦)	ಶಿವ ತಾರಕ ಕೆ. ಬಿ.	:	೨೦೦೧ : ಕರ್ನಾಟಕ ಪ್ರಾಗೈತಿಹಾಸಿಕ–ನೆಲೆಗಳು.
೨೧)	ತಂಬಂಡ ವಿಜಯ ಪೂಣಚ್ಛ	:	ಚರಿತ್ರೆ ಕನ್ನಡ ವಿಶ್ವವಿದ್ಯಾಲಯ ೪ – ಪ್ರಸಾರಾಂಗ : ಕನ್ನಡ ವಿಶ್ವವಿದ್ಯಾಲಯ ಹಂಪಿ.
೨೨)	ಎ. ಯು. ಪಾಟೀಲ	:	೧೯೯೭ : ತೇರದಾಳ ಒಂದು ಸಾಂಸ್ಕೃತಿಕ ಅಧ್ಯಯನ. ಸಂಪ್ರಬಂಧ.

: ENGLISH BOOKS :

01)	Desai P. B.	:	1970: A History of Karnataka-Dharwad.
02)	Desai P. B:1957	:	Jainism in South India and Same Jaina Epigraphs-Kolhapur.
03)	Gopal B. R.	:	1981: The Chalukyas of Kalyana, Dharwad.
04)	Kuppuswamy G. R.	:	1975: Economic Conditions in Karnataka-1975.
05)	Ghosal U. N.	:	1957: Studies in Indian History.
06)	Narasimhamurthy A. V.	:	1961: The Sevunas of Devagiri Mysore.
07)	Basavaraja K. R.	:	1983: Administration under the Chalukyas of Kalyana New Era Publications, Madras.
08)	Basavaraja K. R.	:	1984 : History and Culture of Karnataka Chalukya Publications, Dharwad.
09)	Shastri K. A. N.	:	1958: A History of South India.
10)	Sundara A.	:	1975: The Early chamber Tombs of South India, University Publishers, Delhi.

: ಶಾಸನ ಸಂಪುಟಗಳು :

೦೧) ಕರ್ನಾಟಕ ಇನ್ಸಕ್ರಿಪ್ಷನ್ಸ್ ಸಂಪುಟ – ೦೫

೦೨) ಇಂಡಿಯನ್ ಸಂಪುಟ – ೧೪

: ಗ್ಯಾಜೆಟಿಯರಗಳು, ಪ್ರತಿಕೆಗಳು, ಸ್ಥಳಿಯ ಮುದ್ರಣಗೊಂಡ ಪುಸ್ತಕಗಳು :

೦೧) ಸೂರ್ಯನಾಥ ಯು. ಕಾಮತ : ಬಿಜಾಪ್ರರ ಡಿಸ್ಟ್ರಿಕ್ಟ್ ಗ್ಯಾಜೆಟಿಯರ್ಸ್.

೦೨) ಫ್ಲೀಟ್ ಜೆ. ಎಫ್. : ಇಂಪಿರಿಯಲ್ ಗ್ಯಾಜೆಟಿಯರ್ಸ್.

೦೩) ಏಶಿಯನ್ ಎಜ್ಯುಕೇಶನ್ ಸರ್ವೀಸ್ : ೧೯೮೪ ಗ್ಯಾಜೆಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು (ಹೊಸದೆಹಲಿ)

೦೪) ಬುದ್ಧಯ್ಯ ಸ್ವಾಮಿ ಪುರಾಣಿಕ : ೨೦೦೮ ತೇರದಾಳ ಶ್ರೀ ಮನ್ನಿರಂಜನ ಜಗದ್ಗುರು ಶ್ರೀ ಅಲ್ಲಮ ಪ್ರಭು.

೦೫) ಸಂಪಾದಕರು : ಸಿದ್ದು ಬೀಳಗಿ : ೧೯೯೫ ತ್ರಿದಳ ಪ್ರತಿಕೆ.

೦೬) ಸಂಪಾದಕರು : ಬಸು ಬಾಳಿಕಾಯಿ : ೨೦೦೧ ಕಾರ್ಗಿಲ್ ಪ್ರತಿಕೆ.

೦೭) ಮೃ. ಕ. ಮೇಗಾಡಿ : ವಿಶೇಷ ಆಯ್ದ ಲೇಖನಗಳು.

೦೮) ಕಲ್ಲೇಶ ಕುಂಬಾರ : ವಿಶೇಷ ಆಯ್ದ ಲೇಖನಗಳು.

ಕೆಲವು ಪ್ರಮುಖ ದೇವಾಲಯಗಳ ಛಾಯಾಚಿತ್ರಗಳು




ಾಲಯ ಹಾಗೂ ಮಾನಸ್ಥಂಭ



ನೇಮಿನಾಥ ಜಿನಾಲಯದ ಗರ್ಭಗೃಹ



ನೇಮಿನಾಥ ಜಿನಾಲಯದ ಗೋಡೆಯ ಅಲಂಕರಣೆ ಹಾಗೂ ಕೋಷ್ಠಿ




ನೇಮಿನಾಥ ಜಿನಾಲಯದ ಹಿಂಬದಿಯ ಕೋಷ್ಠಿ

ಚಿತ್ರಗಳು: ಹಲಗಲಿ ಸ್ಟುಡಿಯೋ ತೇರದಾಳ



ಮಿನಾಥ ಜಿನಾಲಯದ ಸುಖನಾಶಿ ದ್ವಾರದಲ್ಲಿರುವ ಜಾಲೇಂದ್ರಿಗಳು



ಜಿನಾಲಯದ ಬಲಕ್ಕೆ ಕುಸಮಾಂಡಿನಿ



ನೇಮಿನಾಥ ಜಿನಾಲಯದ ನವರಂಗ ಮಂಟಪದಲ್ಲಿರುವ ಕಂಭ



ನಾಲಯದ ಎಡಕ್ಕೆ ಪದ್ಮಾವತಿ

ಚಿತ್ರಗಳು: ಹಲಗಲಿ ಸ್ಟುಡಿಯೋ ತೇರದಾಳ



ನಾಥ ಜಿನಾಲಯದ ನವರಂಗ ಮಂಟಪ



ಥ ಜಿನಾಲಯದ ಮುಖಮಂಟಪ



ನೇಮಿನಾಥ ಜಿನಾಲಯದ ಮುಖಮಂಟಪದ ಕಂಭ



ಥ ಜಿನಾಲಯದ ಶಿಲಾಶಾಸನ

ಚಿತ್ರಗಳು: ಹಲಗಲಿ ಸ್ಟುಡಿಯೋ ತೇರದಾಳ



ಕಲ್ಮೇಶ್ವರ ದೇವಾಲಯ



ೇವಾಲಯದ ಗರ್ಭಗೃಹದಲ್ಲಿರುವ
ಗ ಹಾಗೂ ನಂದಿ



ಕಲ್ಮೇಶ್ವರ ದೇವಾಲಯದ ಕೋಷ್ಠಿಯನ್ನೊಳಗೊಂಡ ಗೋ



ಚಿತ್ರಗಳು: ಹಲಗಲಿ ಸ್ಟುಡಿಯೋ ತೇರದಾಳ

ದ ದೇವಾಲಯದ ಮೂರ್ತಿಶಿಲ್ಪಗಳು



ಶ್ರೀ ಅಲ್ಲಮಪ್ರಭುದೇವರ ಮೂಲ ಗದ್ದುಗೆ



ರು ಗುಂಗಿಹುಳ ರೂಪದಲ್ಲಿ ಗೋಡೆ ಕೊರೆದು ಹೋಗಿದ್ದು





ಶ್ರೀ ಅಲ್ಲಮಪ್ರಭುದೇವರ ದ್ವಾರಬಾಗಿಲು



ಶ್ರೀ ಅಲ್ಲಮಪ್ರಭುದೇವರ ದೇವಾಲಯ



ೀ ಅಲ್ಲಮಪ್ರಭುದೇವರ ಷಟಸ್ಥಲ ಇರುವ ಗಾಲಿಗಳು



ಮಪ್ರಭುದೇವರ ಷಟಸ್ಥಲ ಇರುವ ಗಾಲಿಗಳು



ಶ್ರೀ ಅಲ್ಲಮಪ್ರಭುದೇವರ ಹರಿವಾಣ ಕಟ್ಟೆ

ತೇರದಾಳ



ತೇರದಾಳದ ಐತಿಹಾಸಿಕ ಕೆರೆ



ತೇರದಾಳದ ಐತಿಹಾಸಿಕ ಜಿರಗೆರೆ

ಚಿತ್ರಗಳು: ಹಲಗಲಿ ಸ್ಟುಡಿಯೋ ತೇರ